STATEMENT OF SUPPLEMENTARY ESTIMATES FOR 1951-52.

Sri Kadidal MANJAPPA (Minister for Revenue and Public Works).—I place before the House the Statement of Supplementary Estimates for 1952-52, copies of which have already been distributed to Members.

DEBATE ON THE FOOD SITUATION.

Mr. SPEAKER.—Now the debate on the food situation and consideration of the levy system.

Sri J. MOHAMED IMAM (Jagalur).—Before proceeding further, I want to point out that yesterday you were pleased to direct that copies of the report regarding the levy system be made available to us.

Mr. SPEAKER.—If copies are available, they may be distributed. That was the direction given.

Sri H. SIDDAVEERAPPA (Minister for Home Affairs and Agriculture).—Is it the Committee appointed by the Government that the Hon'ble Member is referring to?

Sri B. HUTCHE GOWDA (Turuvekere).—The Committee referred to in Question No. 180. You have stated that there was a Committee and a report of it was received.

Sri H. SIDDAVEERAPPA.—The report is not now readily available. I shall make it available to the Hon'ble Member by about 3'30 after the lunch hour. If the Hon'ble Member wants it, I shall give the salient points of that Committee so that it may enable him to partake in the discussion. If the Committee's report itself is necessary, I shall make it available within about 3'30.

Sri J. MOHAMED IMAM.—It is unfortunate that we are not in possession of the report. It would have helped us a good deal.

Sri H. SIDDAVEERAPPA.—I shall give the details.

Sri J. MOHAMED IMAM.—Secondly, we are anxious to discuss about the prevailing distress in the State and bring to the notice of the Government what the distress conditions are and what are the means to be adopted and the reliefs to be given. I earnestly request the Government to set apart one day for the discussion of this question. Perhaps they are under the impression that we could tack it to the food question; but distress conditions are quite different from the food position. This is a most important question. It is not a party issue. We are interested in relieving the State from distress conditions and we are anxious to place before the Government the difficulties. I request another separate day may be set apart for discussing the distress conditions and the steps to be taken hereafter.

(Interruption by Sri M. Sankar Linge Gowda).

Sri H. SIDDAVEERAPPA.—As Hon'ble Member Sri M. Sankar Linge Gowda was just now remarking, fortunately for my friend, a non-official resolution tabled by an Hon'ble Member has been balloted to appear as the first in the list. It has been tabled by Sri Bheemappa Naik.

Sri J. MOHAMED IMAM.—I am sorry. I will withdraw my remarks.

Sri L. SIDDAPPA (Channagiri).—We have no objection to one whole day being set apart.

Mr. SPEAKER.—We will see later. Now the debate on the food situation and consideration of the levy system.

Sri J. MOHAMED IMAM.—That means to say the time for non-official resolutions will have to be extended.

Mr. SPEAKER.—That we will see.

Sri H. SIDDAVEERAPPA.—Mr. Speaker, Sir, while addressing this Hon'ble House during Budget Session in July last, I reviewed in great detail the food position in the State and the food policy pursued in the State ever since the controls were first introduced laying special emphasis on the policy of subsidisation and gradual relaxation of the controls leading to the issue by this Government of the Press Note, dated 10th April 1952, explaining in detail the food policy proposed to be pursued

by the present Government. I am thankful to the Hon'ble Members of this House who partook in the debate and tendered their valuable suggestions regarding the policy to be followed by the Government.

Let me briefly recapitulate the food position as it stood at the time it was discussed on the floor of this august House in July last. The relaxation of movement restrictions had the effect of bringing out a good deal of hidden grain to the surface and the same was available in fairly large quantities in all places. Consumers generally experienced no difficulty in getting their supplies of foodgrains. People hailed the new policy of Government as a beneficial one as a good deal of grain moved on from the surplus to the deficit areas which considerably helped the consumers of those areas. This was obvious from the off-take trends commencing from April 1952. The Government were closely watching the off-take trends since the restrictions were removed. It became clear that the local availabilities were substantially supplementing the issues from Government depots. The result of the falling off-takes coupled with local and foreign procurement was that quite a large stock of foodgrains accumulated in Government Depots as can be made out from the following comparative figures of stocks on the 7th July 1952 compared with stocks on the same date of the previous year.

	7th July 1952	7th July 1951
	(In tons)	
Rice (including rice equivalent of paddy)	51,534	44,633
Millets	31,891	22,517
Wheat including wheat products.	15,964	4,337
Total ...	99,389	71,897

The godowns all over the State were filled to capacity. We had imported during the first half of 1952 as much as 69,521 tons of foodgrains, the heighest ever on record, the supplies during the corresponding periods of 1951 and 1950 being only 39,349 tons and 36,186 tons.

Sir, it will be remembered that during my statement in the last Session I said that "though the first few months of the results of the new food policy gave rise to optimistic anticipations, Government felt seriously concerned over the delay of monsoon which had then not firmly set in and that the seasonal conditions were far from assuring The delay in rains considerably disturbed sowing in several parts of the State and reports were also reaching Government that standing crops are withering. The rainfall this year had been very much less than in the corresponding period of last year in all districts." I also said that "any conclusion that we might reach here has therefore to be greately influenced by this limiting factor, *viz.*, uncertain seasonal conditions." The House is well aware that most parts of the State this year had to undergo severe drought conditions, almost unparalleled within the living memory. This naturally brought about increased pressure on Government rationing. The fairly good and comfortable stock position as it stood at the end of June 1952 was now subjected to a severe strain as a result of the adverse seasonal conditions. The rush on depots increased. There was a great demand for more and more foodgrains being issued from Government depots. The demand for increased supply of foodgrains and opening of more Government Depots was from almost all parts of the State. The off-take went on steadily mounting. The total issue which stood at 12,600 tons in June 1952 increased to 18,400 tons in July 1952, 19,400 tons in August and 21,100 tons in September 1952. More grains required to meet this increased demand were imported and the movement of the imported grains speeded up to rush grain to the remotest depots all over the State, thanks to the prompt help given to us by the Ministry of Food and Agriculture, Government of India, who, not only made prompt allotment of foodgrains, but also assisted us greatly in the quick movement of the foodgrains into the State.

The present stock position of foodgrains in the State as on 20th October 1952 is as follows :—

(SRI H. SIDDAVEERAPPA.)

	Pallas.		Pallas.
Paddy ...	4,87,608	Total Rice	3,20,524
Rice ...	76,722		
Ragi ..	1,11,092		
Milo ...	46,285	Total Millets.	1,57,811
Minor Millets ...	434		
Wheat ...	56,012	Total ...	58,815
Wheat Products	2,803		
		Total of all cereals ...	5,37,150

and this is fairly satisfactory.

Sir, let me now go to the next question that merits the attention of the House and on which the Government earnestly seeks their valuable advice. It is admitted on all hands that control over foodgrains has to be completely given up as early as possible and as the circumstances warrant. The Government are of the firm view that complete de-control throughout the State is the cherished goal to be consummated at the earliest possible moment. Government wish to make it clear that there is no question of going back from this policy and that inspite of adverse seasonal conditions the aim of the Government is to steadily march in the direction of complete decontrol and any further step we take will have to be in that direction only. Often times arguments have been advanced on the floor of this House that controls have tended to retard the agricultural output and that therefore the agriculturist must be freed from the shackles of controls as early as possible. For the moment, only three cities are retained as statutory rationed areas. Free movement of foodgrains has been allowed in all the other areas and the limit of free movement from and into the statutory rationed areas for *bona fide* consumption has also been liberalised. We may have to continue the *status quo* in regard to statutory rationing in the three areas, until such time as Government are assured that even these rationed areas may be de-rationed.

Then the next question that arises for consideration of this House is whether even if we fully de-control are we to give up the securing of local food grains and leave the entire subject to be dealt with in usual trade channels? Even those who advocate complete de-control are of the view that with a view to check the inflationary trends and with a view to act as correctives in the open market, adequate fair-price depots will have to be located in several parts of the State so that consumers may not be unduly hit hard. Staunchest advocates of de-control deem it necessary that at least during the period of transition fair-price depots will have to be maintained. But if there is to be complete de-control how are we to get the grain for keeping the fair-price shops supplied? It is here the question merits the earnest consideration of this House and on which I pray for their advice. To maintain distribution in the three statutory rationed areas during 1953 and to keep a small buffer stock, the total requirement is calculated at 1,52,800 tons as detailed below:—

	Rice	*Millets* (In Tons)	*Wheat*
1. Requirements of the population of the statuorily rationed areas of Bangalore, Kolar Gold Field, and Davangere on the basis of 12 ozs. per head to general consumers and 16 ozs. to Heavy Manual Labour	56,400	28,200	28,200
2. Buffer stock (about two months' stock on the basis of the estimated annual offtake for the State)	15,000	15,000	10,000
Total ...	71,400	43,200	38,200

Total of the above grains	1,52,800 Tons
Less imports for 1953 on the basis of imports of previous years	75,000 Tons
Balance quantity to be obtained by procurement ...	77,800 Tons or 80,000 Tons.

Rice 60,000 tons or 12,00,000 pallas of paddy. Millets 20,000 tons or 2,00,000 pallas.

This calculation is for a normal year of good harvest and it is likely to be totally upset in the year 1953 due to adverse seasonal conditions throughout the State. Any deficiency will have to be met only by imports.

We cannot also at the same time forget that on every palla of wheat and milo we import, the State is subsidising at Rs. 9-10-9 and Rs. 11-1-0 per palla respectively, to maintain the present level of the issue prices of these grains. If we are to secure the 12 lakhs of paddy and 2 lakhs of millets, the question arises as to how this grain has to be secured. I request this Hon'ble House to suggest the mode of securing this grain while at the same time causing the least inconvenience to the grower, and by calling it by whatever name, whether procurement by monopoly or procurement by levy. The only thing that matters is that by whatever method procurement is made it should cause the least inconvenience to the grower. The Government have not taken so far any decision in this matter. Several view points have been suggested which have their own *pros* and *cons*. We have to take a decision taking the consensus of opinion of this House. But, it may be emphasised here that whether we completely de-control or retain statutory rationing areas for some time, some kind of local procurement is absolutely inevitable. As otherwise, it will be hazardous to depend entirely upon the imports of food grains which are not only not continuous but at times not adequate. Another question that arises for consideration of the House is the price to be paid for the grains procured. It cannot be gainsaid that there is much force in the arguments advanced on behalf of the grower that the present procurement price is not wholly remunerative. I do not wish to enter into the complex problem of the price factor depending upon the cost of production. But it is a fact that the procurement price given in our State is comparatively less than what is being paid in the neighbouring States of Bombay which adjoins our rich paddy growing area.

The Government are therefore generally in sympathy with the view that the procurement price will have to be suitably stepped up. It cannot be forgotten that in these years of trial and distress, the agriculturist, as is customary, has helped the State in getting the required quantity of grain.

I may also mention that according to the Essential Supplies (Temporary Powers) Act, the fixing of precurement or issue price of foodgrains will have to have the concurrence of the Goverment of India.

I hope the Hon'ble Members will throw light during the course of the disucssions on this problem also.

Sir, I beg leave of you to recall the concluding paragraph of my speech of the last Session :—

> "The Government earnestly request the Hon'ble Members to help them by their va'uable suggestions and advice. Food is not a problem of party politics. It is an universal problem affecting the entire State. Need I hardly say that the co-operation of all parties in this Hon'ble House is needed and will be welcomed if we are to face the food front with courage and success", and I repeat the same with all humility.

1-30 P.M.

Mr. SPEAKER.—May I fix a time limit for speakers? Twenty minutes for the Leader of the Opposition and ten minutes for others.

(The House agreed to the suggestion.)

Sri J. MOHAMED IMAM.—We will be entirely guided by the Chair.

Mr. SPEAKER.—At the end of the debate there will be so much rush of speakers. So, let us allot about ten minutes for each Member.

ಶ್ರೀ ಆರ್. ಅನಂತರಾಮ್ (ಚಾಮರಾಜಪೇಟೆ).—ಆಹಾರದ ವಿಷಯದಲ್ಲಿ ಆಹಾರ ಮಂತ್ರಿಗಳು ಒಂದು ದೀರ್ಘವಾದ ವಿವರಣೆಯನ್ನು ಈಗತಾನೇ ಕೊಟ್ಟಿದ್ದಾರೆ. ಅದರಲ್ಲಿ ಅವರು ಮೂರು ನಗರಗಳಲ್ಲಿ ಈಗ ರೇಷನಿಂಗ್ ಜಾರಿಯಲ್ಲಿದೆ, ಅದನ್ನೂ ತೆಗೆಯಬೇಕಾಗುವ ಸಂದರ್ಭ ಬರುತ್ತದೆ ಎಂದು ಹೇಳಿದರು. ಈ ವಿಚಾರದಲ್ಲಿ ನಾನು ಒಂದು ಮಾತನ್ನು ಹೇಳಬಿಚ್ಛಿಸುತ್ತೇನೆ. ಬಹಳ ದಿವಸದಿಂದ ಮಳೆ ಹೋಗಿ ದೇಶದಲ್ಲೆಲ್ಲಾ ಕಳವಳವೆದ್ದಿತ್ತು. ಅದೃಷ್ಟವಶಾತ್ ಈಚೆಗೆ ಮಳೆ ಬಂದಿದೆ. ಆದಾಗ್ಗೂ ನಮ್ಮಲ್ಲಿ ಇನ್ನೂ ಕಳವಳವಿದೆ. ಈಗಲೂ ಸಹ ಮಳೆ ಸರಿಯಾಗಿ ಆಗದೆ ಹೋದರೆ ಎಷ್ಟೋ ಕಡೆ ಬೆಳೆ ಚೆನ್ನಾಗಿ ಆಗುವುದಿಲ್ಲ. ಈಗಲೂ ಕೆಲವು ಸ್ಥಳಗಳಲ್ಲಿ ನಾಲ್ಕಾಣೆ ಭಾಗ ಬೆಳೆಯೂ ಆಗುವುದಿಲ್ಲ. ಮಳೆ ಬಂದರೆ, ನಾಲ್ಕೈದು ಆಣೆಭಾಗ ಆಗಬಹುದು. ಆದ್ದರಿಂದ ನನ್ನ ಸಲಹೆಯೇನೆಂದರೆ, ದೊಡ್ಡ ದೊಡ್ಡ ಈ ಮೂರು ಪಟ್ಟಣಗಳಲ್ಲಿ ವಾಸ ಮಾಡುವವರು ಹೆಚ್ಚಾಗಿ ಕೂಲಿಗಾರರು, ಮಧ್ಯಮ ವರ್ಗದವರು, ನೌಕರಿಗಳಲ್ಲಿರುವವರು; ಬೆಳೆಯುವವರಲ್ಲ. ಇವರಿಗೆ ಕಳವಳವನ್ನುಂಟುಮಾಡುವುದು ಸರಿಯಲ್ಲ. ನವೆಂಬರ್ ಕೊನೆಯವರೆಗೆ ಮಳೆಬೆಳೆ ಚೆನ್ನಾಗಿದ್ದರೆ ಅದನ್ನು ನೋಡಿಕೊಂಡು ಡೀರೇಷನಿಂಗ್ ಮಾಡುವುದನ್ನು ಮುಂದುವರಿಸಬೇಕೆಂದು ನನ್ನ ಬಿನ್ನಹ.

ಕೆಲವು ಸದಸ್ಯರು.—ಸರ್ಕಾರದವರು ಆ ರೀತಿ ಹೇಳಿಲ್ಲ.

ಶ್ರೀ ಆರ್. ಅನಂತರಾಮ್.—ಇದು ನನ್ನ ಸಲಹೆ. ಮಳೆಯಾಗದೆ ಹೋದರೆ ಆಗ ಬಹಳ ಕಷ್ಟವಾಗುತ್ತದೆ. ಸಂಸ್ಥಾನಾದ್ಯಂತ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಬೇಕೆಂದು ಅವರು ಹೇಳಿದರು.

Sri H. SIDDAVEERAPPA.—May I, with your kind permission intervene? I have never said that these cities will be de-rationed.

ಶ್ರೀ ಆರ್. ಅನಂತರಾಮ್.—ಅದಕ್ಕೇ ನಾನು ಸಲಹೆಮಾಡುತ್ತಿರುವುದು, ಡೀರೇಷನ್‌ಮಾಡುವುದನ್ನು ತಕ್ಷಣ ಯೋಚನೆ ಮಾಡಬೇಡಿ ಎಂದು ನಾನು ಹೇಳುವುದು. ಮಳೆಬೆಳೆ ಚೆನ್ನಾಗಿ ಆದರೆ ಆಮೇಲೆ ಇದನ್ನು ಯೋಚನೆ ಮಾಡಬಹುದೇ ಹೊರತು ಈಗಲೇ ಮಾಡಬಾರದು.

ಶ್ರೀ ಟಿ. ಮರಿಯಪ್ಪ (ಮೈಸೂರು ಉತ್ತರ).—ಅದು ಸರ್ಕಾರದ ultimate goal ಎಂದು ಹೇಳಿದ್ದಾರೆ, ಅಷ್ಟೆ.

ಶ್ರೀ ಆರ್. ಅನಂತರಾಮ್.—ಅನೇಕ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಬೇಕೆಂದು ಹೇಳಿದರು. ಇದಕ್ಕೆ ಪ್ರೊಕ್ಯೂರ್‌ಮೆಂಟ್‌ಮಾಡಬೇಕೆಂದು ಹೇಳಿದರು. ನಾಲ್ಕೈದು ವರ್ಷಗಳಿಂದ ಪ್ರೊಕ್ಯೂರ್‌ಮೆಂಟ್‌ಮಾಡಿ ರೈತರಿಗೆ ಎಷ್ಟುಕಷ್ಟವಾಗಿದೆ ಎಂಬುದನ್ನು ಅನೇಕ ಸದಸ್ಯರು ಹೇಳಿದ್ದಾರೆ: ನನ್ನ ಸಲಹೆ ಇಷ್ಟೆ; ಈಗ ನಮ್ಮ ಮುಂದಿರುವುದು 'ಲೆವಿ' ಪದ್ಧತಿಮಾಡಬೇಕೇ ಅಥವಾ ಸರ್‌ಪ್ಲಸ್ ಹೋಲ್ಡರುಗಳಿಂದ ತೆಗೆದುಕೊಳ್ಳಬೇಕೇ ಎಂಬ ಪ್ರಶ್ನೆ. 'ಲೆವಿ' ಪದ್ಧತಿಮಾಡಿದರೆ, ಅದರ ಪ್ರಕಾರ ಒಂದು ಎಕರೆಗೆ ಆರು ಸೇರು, ಹತ್ತು ಸೇರು, ಇಪ್ಪತ್ತು ಸೇರು, ಹೀಗೆ ನಿಗದಿಮಾಡಿ, ಒಂದು ಎಕರೆ, ಎರಡೆಕರೆ, ಹತ್ತೆಕರೆ ಅಥವಾ ನೂರು ಎಕರೆ ಜಮೀನಿರಲಿ ಎಲ್ಲರಿಂದಲೂ ಒಂದೇ ರೀತಿಯಾಗಿ ಒಂದೊಂದು ಎಕರೆಗೆ ಇಷ್ಟೆಂದು ವಸೂಲುಮಾಡಬೇಕೆಂದು ಯೋಚನೆಮಾಡುತ್ತಿದ್ದೀರಿ. ಇದು ಸರಿಯೆ ಅಲ್ಲವೆ ಎಂಬುದನ್ನು ನಾವು ಯೋಚನೆಮಾಡಬೇಕು.

ಸಂಸ್ಥಾನದಲ್ಲಿ ಸರ್‌ಪ್ಲಸ್ ಹೋಲ್ಡರುಗಳು ಸುಮಾರು ಎರಡು, ಎರಡೂವರೆ ಲಕ್ಷ ಮಂದಿ ಇದ್ದಾರೆಂದು ಮಂತ್ರಿಗಳು ಹೇಳಿದರು. ಇವರಿಂದ ಮಾತ್ರ ವಸೂಲುಮಾಡಬೇಕೇ ಎಂಬುದನ್ನೂ ಯೋಚನೆಮಾಡಬೇಕು. ಮೊದಲನೆಯದಾಗಿ 'ಲೆವಿ' ಪದ್ಧತಿಯಮೇಲೆ ವಸೂಲುಮಾಡಿದರೆ ಜನರಿಗೆ ಬಹಳ ಕಷ್ಟವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—'ಲೆವಿ' ಪದ್ಧತಿಯ ಮೇಲೆ ಮಂತ್ರಿಗಳು ಏನನ್ನೂ ಹೇಳಿಲ್ಲ. ಅವರು ಈ ವಿಷಯದಲ್ಲಿ ವಿವರಣೆ ಕೊಟ್ಟಿಲ್ಲ.

Sri L. SIDDAPPA (ಚನ್ನಗಿರಿ).—The Hon'ble Minister said that he would touch upon it in the course of his speech but he never gave any inclination as to what exactly the recommendations of the committee are, what is the system that has been evolved, etc. It would certainly facilitate discussion if he gives an idea as to what exactly is the system evolved.

Sri A. BHEEMAPPA NAIK (Molakalmuru).—After hearing the Hon'ble Minister, it is for us to decide. It is not so much for the Government; we must offer our views and ask them to evolve a definite method and bring it and place it before us. Government have not come to any definite conclusion so far on the recommendations of the Committee.

Sri L. SIDDAPPA.—He has not answered that point in his speech.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ನಿನ್ನೆಯ ದಿನ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಒಂದು ವರದಿ ತಯಾರಾಗಿದೆ ಎಂದು ಸರ್ಕಾರದವರು ಹೇಳಿದ್ದಾರೆ. ಆ ಸಮಿತಿಯ ಶಿಫಾರಸುಗಳೇನೆಂದು ಹೇಳಬೇಕು. ಆ ವರದಿಯನ್ನು ಸದಸ್ಯರಿಗೆ ಕೊಡಬೇಕೆಂದು ತಾವೂ ಹೇಳಿದಿರಿ; ಕೊಟ್ಟಿಲ್ಲ. ಸಮಿತಿಯ ಶಿಫಾರಸು ಏನಿದೆಯೆಂದು ಹೇಳಿದರೆ ನಮಗೆ ಮಾತನಾಡಲು ಅನುಕೂಲವಾಗುತ್ತದೆ.

Mr. SPEAKER.—By 3 P.M. he may be in a position to reveal that.

Sri Mulka GOVINDA REDDY.—Along with the speech, if the salient features of the report are placed before the Assembly, we can have some sort of a basis to know what the Government's mind is and we can then offer our suggestions or criticisms.

Sri H. SIDDAVEERAPPA.—I have already made the position clear in my speech. Government keep an open mind. They have not made up their mind as to what exactly should be

the policy to be followed. That will be evolved only after being advised by the House.

Sri Mulka GOVINDA REDDY.—I cannot understand why Government are feeling shy to place the salient features of that report before the Assembly.

Sri L. SIDDAPPA.—Yesterday when a request was made the Chair was pleased to direct the Government to furnish copies of the report. The Hon'ble Minister, said that he would give a summary of it in the course of his speech. Neither a copy of the report was given to us nor did he touch it in the course of his speech.

Mr. SPEAKER.—From what the Hon'ble Minister has stated, I make it that Government have not come to any definite decision and they are seeking, on the other hand, valuable suggestions of the Member's of this House.

Sri L. SIDDAPPA.—Government propose evolving some system. What exactly they propose to evolve we want to know.

Sri H. SIDDAVEERAPPA.—I may say Government have not yet considered the recommendations of the Committee. That was why I hesitated to bring them to the notice of the House. Since the matter of the report has not yet been considered by the Government, I thought it delicate to place it before the House. There is no hide and seek otherwise.

Sri L. SIDDAPPA.—In the order of the day furnished to us, item 3 is debate on the food situation and consideration of the levy system. ಅವರೇನಾದರೂ ಆ ವರದಿಯನ್ನು ಕೊಡದಿದ್ದರೆ, ಅವರ ಭಾಷಣದಲ್ಲಿ ಹೇಗೆ ಸಾಮಾನ್ಯವಾಗಿ ಹೇಳಿದರೋ ಹಾಗೆ ನಾವೂ ಕೂಡ ಸಾಮಾನ್ಯವಾಗಿ ರೈತರಿಗೆ ತೊಂದರೆ ಇಲ್ಲದಂಥ ಒಂದು ಪದ್ಧತಿಯನ್ನು ಮಾಡಿ ಎಂದು ಹೇಳಬೇಕಾಗುತ್ತದೆ. ರೈತರಿಗೇನೂ ತೊಂದರೆಯಿಲ್ಲದಂತೆ ಜನರಿಗೆಲ್ಲಾ ಆಹಾರವನ್ನೊದಗಿಸುವ ಏರ್ಪಾಡು ಮಾಡಿ ಸರ್ಕಾರದವರು ಎಂದು ಜನರಲ್ ಆಗಿ ಹೇಳಬೇಕಾಗುತ್ತದೆ.

Mr. SPEAKER.—The difficulty seems to be that Government have not considered the report of that Committee. It is perhaps treated as confidential and that is why the Hon'ble Minister is hesitating to place it before the House.

Sri L. SIDDAPPA.—Why not straightaway say like that?

Sri B. HUTCHE GOWDA.—Is it on acreage basis or the old system?

Mr. SPEAKER.—I find that the Hon'ble Minister is seeking your suggestions whether it should be on acreage basis or in accordance with the old system.

Sri T. MARIAPPA.—There seems to be some misconception in the minds of the Hon'ble Members. The Hon'ble Minister for Food has made it very clear that Government keep an open mind and invite very valuable suggestions in the matter of procurement of foodgrains. But the difficulty with regard to the Members of the opposition is that Government must have appointed a Committee............

Sri L. SIDDAPPA.—They have.

Sri T. MARIAPPA.—They must have made recommendations and even the party must have considered them. All that may be true. In the interest of the public, the Hon'ble Minister may not divulge this question. It may be confidential. It may be equally true that the party must have considered this report. They may level some charge against us that we may have come with pre-conceived notions, with pre-prepared plans. To obviate all that it is much better—they are members having experience of many years of the Legislature—that they ventilate their views taking all these into consideration. The members on this side may change their views already formed and it is much better to evolve a scheme for the benefit of all.

Sri L. SIDDAPPA.—The Hon'ble Member is springing a surprise. You are quite aware, Sir, that when a request was made yesterday, you were pleased to direct the Government to supply the House with copies of recommendations made by that Committee. The Hon'ble Leader of the House who was present agreed to it. To say now that it is treated as a confidential document passes one's comprehension. That it is not treated as a confidential document is quite clear from the fact that it was discussed

(SRI L. SIDDAPPA).

in the Congress Party Meeting and some of the discussions have appeared in the press also. In these circumstances, to say that it is treated as a confidential document passes one's understand ng.

Sri H. SIDDAVEERAPPA.—As I have already submitted, there is no question of disobeying the guidance by the Chair. I am prepared to abide by the decision of the Chair. As you were good enough to observe, the Committee's report has not yet been considered by the Government. That is the thing that deters me.

Sri L. SIDDAPPA.—Has not the Committee's report been discussed by the Congress Party? Is it open to the Hon'ble Minister to say that it is a confidential document?

Sri M. CHICKKALINGIAH (Malavalli—Scheduled Castes).—Then why do the Government want our views?

Sri H. SIDDAVEERAPPA.—Let not the words which I have not uttered be put into my mouth. What I am saying is that the Committee's report has not yet been discussed by the Government. That is what I said.

Sri M. RAJASEKHARA MURTHY (Yelandur).—The Hon'ble Minister has requested the members to express their views on procurement system—either to continue the present procurement system or to adopt the new levy system. We know what procurement system is. But we do not know what levy system is. If he defines the levy system, we may be able to express our views.

Sri H. SIDDAVEERAPPA.—I will obey the directions of the Chair in the matter.

Mr. SPEAKER.—The point is this. Yesterday, when this matter was considered, the Hon'ble Leader of the House said that no notes could be furnished and no motion would be made at the commencement of the debate. That is why I said that at least a copy of the report of that Committee may be furnished, if available. The Hon'ble Minister concerned now says that it has not yet been considered by the Government and that it is still to be treated as confidential. In view of these circumstances, the statement made by him is before you and it is open to you to make suggestions on the basis of that statement.

Sri B. HUTCHE GOWDA.—Then why not the debate be postponed to a later date Sir?

Sri M. LINGANNA.—The House will be in a position to discuss the Levy System and proceed with the debate on this matter, if some salient features are placed before us. We can suggest our views in reference to the matter provided to us. We must be helpful to the House with our suggestions. We want the figures to be placed before this House, so that the House can debate it and come to the conclusion. We are making an appeal to the Chair and request your good offices in this matter to direct the Food Minister to provide us with some information with regard to the system in view.

ಶ್ರೀ ಬಿ. ಹುಚ್ಚೇಗೌಡ.—ನಾನು ತಿಳಿಸಬೇಕೆಂದಿದ್ದ ವಿಚಾರವೇನೆಂದರೆ, ಈ ದಿವಸ ಈ ಚರ್ಚೆಯನ್ನು ಇಟ್ಟುಕೊಳ್ಳುವುದಕ್ಕೆ ಬದಲಾಗಿ ಇದನ್ನು ಈ ದಿವಸ ನಿಲ್ಲಿಸಿ ಇದನ್ನು ಮುಂದಕ್ಕೆ ಹಾಕೋಣ ಎಂಬುದು. ಸರ್ಕಾರದವರು ಹೇಳಿರತಕ್ಕ ವರದಿಯ ಪ್ರಕಾರ ಕಂಟ್ರೋಲನ್ನು ಪುನಃ ಜಾರಿಗೆ ತರತಕ್ಕಂಥ ಅವಕಾಶವೇ ಇಲ್ಲ. ಆದರೆ ಈಗ ಅವರೇನು ಒಂದು 'ಲೆವಿ' ಸಿಸ್ಟಂ ಇಟ್ಟುಕೊಳ್ಳೋಣವೆಂದು ಹೇಳುತ್ತಿದ್ದಾರೋ, ಅದನ್ನು ಸಂಪೂರ್ಣವಾಗಿ ಕೈಬಿಟ್ಟು ಈಗ ಇಲ್ಲಿಯತನಕವೂ ಸರ್ಕಾರದವರು ಯಾವ ರೀತಿಯಲ್ಲಿ ಆಹಾರಧಾನ್ಯಗಳನ್ನು ಸಂಗ್ರಹಣಮಾಡುತ್ತಿದ್ದರೋ ಅದೇ ವಿಧಾನವನ್ನೇ ಇನ್ನೂ ಕೊಂಚಕಾಲ ಮುಂದುವರಿಸಿದರೆ ಸಾಕಾಗಿರುತ್ತದೆಂದು ನನಗೆ ತೋರುತ್ತದೆ. ಆದರೆ ಈ ದಿವಸ ಅವರು ಚರ್ಚೆಗೆ ಏನೇನು ವಿಷಯಗಳನ್ನು ಇಟ್ಟುಕೊಂಡಿದೆ ಎಂಬ ಬಗ್ಗೆ ಯಾವ ಒಂದು ಕಾರ್ಯಕ್ರಮದ ಪಟ್ಟಿಯನ್ನೂ ನಮ್ಮ ಮುಂದೆ ಇಡದಿರುವುದರಿಂದ ಈ 'ಲೆವಿ' ಪದ್ಧತಿಯನ್ನೇ ಕೈಬಿಟ್ಟುಬಿಡುವುದು ಉಚಿತವಾಗಿರುತ್ತದೆಂದು ನನಗೆ ತೋರುತ್ತದೆ. ಸರ್ಕಾರದವರೂ ಸಹ ಈ ಕಂಟ್ರೋಲುಗಳನ್ನು ತೆಗೆಯಬೇಕೆಂದೇ ಹೇಳುತ್ತಿದ್ದಾರೆ.

Sri K. PATTABHIRAMAN (Kolar).—Mr. Speaker, I wanted to rise on a point of clarification. The Government must take up the entire responsibility for directing Food Policy. Ordinarily any suggestion of the opposition could be made on such policies that they embark upon. I am afraid, I must with great regret say that the Government is feeling shy of its responsibility.

Therefore it is necessary for me to press for the document to be placed before us by the Hon'ble Minister to offer our remarks. You want to embark upon a new policy. You must take the responsibility. Let us clear the doubts about it. I am putting it in a most definite and cons dered manner so that all might appreciate the position clearly. It must be the Government that must take the responsibility. I am not speaking for the opposition, nor have I the authority to do so, but speaking for myself, speaking on a general Parliamentary procedure in the matter of evolving a very definite and far-reaching policy on food, it is the Government that must give us the policy and they must give us the programme. I really appreciate the generosity shown by Government. We are prepared to modify those plans. It is not the question of saying here, you take it or leave it. That is not the spirit that the Governm nt have. But what are your plans? Speaking for myself, I would be grateful if the Government finally take all responsibilities. Mr. Speaker, Sir, we will be laying down a great precedent, a precedent which we might regret hereafter.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಈಗತಾನೇ ಮಾನ್ಯ ಸಚಿವರು ಆಹಾರಧಾನ್ಯಗಳ ಶೇಖರಣೆಯ ಬಗ್ಗೆ ನೇಮಿಸಲಾಗಿದ್ದ ಸಮಿತಿಯ ವರದಿಯನ್ನು ಸದ್ಯಕ್ಕೆ ಬಹಿರಂಗಪಡಿಸಲು ಸಾಧ್ಯವಿಲ್ಲ, ಅದು ಬಹಳ ಗುಟ್ಟಾಗಿಡತಕ್ಕಂಥ ವಿಚಾರವಾಗಿದೆ ಎಂಬುದಾಗಿ ತಿಳಿಸಿದ್ದಾರೆ. ಆದರೆ ನನಗೇನೋ ಅದು ಅಂಥ ಗುಟ್ಟಿನ ವಿಚಾರವಲ್ಲವೆಂದು ಕಂಡುಬರುತ್ತದೆ. ಅಷ್ಟೇ ಅಲ್ಲದೆ ಅವರು ತಿಳಿಸಿರುವ ಪ್ರಕಾರ ಆ ಸಮಿತಿಯ ವರದಿಯು ನಮಗೆ ಮೂರೂವರೆ ಘಂಟೆಗಳಿಗಿಂತಲೂ ಮುಂಚಿತವಾಗಿ ದೊರೆಯಲಾರದೆಂದು ಗೊತ್ತಾಗುತ್ತದೆ. ಅನಂತರವಾದರೂ ಸರ್ಕಾರದವರು ಅದನ್ನು ಈ ಸಭೆಯ ಮುಂದೆ ತಂದೇ ತರಬೇಕಾಗಿದೆ.

ಇನ್ನು ಎರಡನೆಯದಾಗಿ—ಸರ್ಕಾರದವರು ಧಾನ್ಯ ಸಂಗ್ರಹಣೆಯ ವಿಚಾರವಾಗಿ ಎಲ್ಲ ವಿಷಯಗಳನ್ನೂ ಪರಿಶೀಲನೆಮಾಡಿ ಒಂದು ಆಖೈರು ತೀರ್ಮಾನಕ್ಕೆ ಬಂದು ಅನಂತರ ಆ ತೀರ್ಮಾನವನ್ನು ಈ ಸಭೆಯ ಮುಂದೆ ಮಂಡಿಸಿದ್ದರೆ ಆಗ ಸದಸ್ಯರು ಈ ವಿಚಾರದ ಬಗ್ಗೆ ಚರ್ಚೆಮಾಡಲು ಅನುಕೂಲವಾಗುತ್ತಿತ್ತು ಎಂದು ಶ್ರೀ ಪಟ್ಟಾಭಿ ರಾಮರ್‍ರವರು ಹೇಳಿದ್ದು ಅಷ್ಟು ಸೂಕ್ತವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಕಾರಣವಾದರೂ ಇಷ್ಟೆ—ಈ ವಿಚಾರವಾಗಿ ಮೊದಲು ಸರ್ಕಾರದವರು ಒಂದು ತೀರ್ಮಾನಕ್ಕೆ ಬಂದು, ಹಾಗೆ ಅವರು ಏನು ಸಲಹೆಗಳನ್ನು ಮಂಡಿಸುತ್ತಾರೋ, ಆ ಸಲಹೆಗಳನ್ನೂ ಮತ್ತು ಆ ಬಗ್ಗೆ ನೇಮಕವಾಗಿದ್ದ ಸಮಿತಿಯವರ ವರದಿಯನ್ನೂ, ಈ ಎರಡನ್ನೂ ನೋಡಿಕೊಂಡು, ಅನಂತರ ಈ ಸಭೆಯವರು ಒಂದು ತೀರ್ಮಾನಕ್ಕೆ ಬಂದರೆ ಅನುಕೂಲವೇ ಹೊರತು, ಇಲ್ಲದಿದ್ದರೆ ಇಲ್ಲ ಎಂದು ಹೇಳತಕ್ಕಂಥ ಪ್ರಸಂಗವೇನೂ ಇದರಲ್ಲಿಲ್ಲ. ಸರ್ಕಾರದವರು ತಮ್ಮ ಅಂತ್ಯ ತೀರ್ಮಾನವನ್ನು ಸಭೆಯ ಮುಂದಿಟ್ಟಿದ್ದರೆ ಮಾತ್ರ take it or leave it ಎಂದಂತಾಗುತ್ತಿತ್ತೇ ಹೊರತು, ಸಭೆಯ ಅಭಿಪ್ರಾಯ ಕೇಳುತ್ತಿರುವಾಗ ಆ ರೀತಿ ಹೇಳಿದಂತಾಗಲಿಲ್ಲ. ಮತ್ತು ಆ ಸಮಿತಿಯ ವರದಿ ಸಹ ಈ ದಿವಸ ಮೂರುವರೆ ಘಂಟೆಗೆ ಈ ಸಭೆಯ ಮುಂದೆ ಬರತಕ್ಕದ್ದಾಗಿದೆ ಮತ್ತು ಬಂದೇಬರುತ್ತದೆ.

ಆದರೆ ನನಗೆ ತಿಳಿದಿರುವಮಟ್ಟಿಗೆ, ನಾನು ಈ ಸಂದರ್ಭದಲ್ಲಿ ಹೇಳಬೇಕೆಂದಿರುವುದು, ಕೆಲವರು ಪ್ರೊಕ್ಯೂರ್‌ಮೆಂಟ್ ಎಂದರೇನೆಂದೂ, ಮತ್ತೆ ಕೆಲವರು 'ಲೆವಿ' ಪದ್ಧತಿ ಎಂದರೇನೆಂದೂ ಕೇಳುತ್ತಿದ್ದಾರೆ. ಈ ಎರಡು ಪದಗಳ ಅರ್ಥವೂ ಅವರಿಗೆಲ್ಲಾ ತಿಳಿದೇ ಇದೆಯೆಂದು ನನ್ನ ಭಾವನೆ. ಆದಾಗ್ಯೂ ಅದೇನೆಂಬುದು ಸರ್ಕಾರದವರ ಬಾಯಿಂದ ಬರಲಿ, ಅನಂತರ ಮಾತನಾಡೋಣವೆಂದಿದ್ದಾರೆ; ಅಷ್ಟೆ. ನನಗೆ ತಿಳಿದಿರುವಮಟ್ಟಿಗೂ ಸಾಮಾನ್ಯವಾಗಿ 'ಲೆವಿ' ಸಿಸ್ಟಂ ಎಂದರೆ—ದಾಮಾಷ ಪ್ರಕಾರ ಎಕರೆಗಿಷ್ಟು ಕೊಡಬೇಕೆಂದು ಹೇಳಿ ಧಾನ್ಯ ವಸೂಲಿ ಮಾಡತಕ್ಕ ಕ್ರಮ ಎಂದು ತಿಳಿದುಕೊಂಡಿದ್ದೇನೆ. ಪ್ರತಿಯೊಬ್ಬರೂ ಎಕರೆಯೊಂದಕ್ಕೆ ಬೆಳೆಯತಕ್ಕ ಧಾನ್ಯಪ್ರಮಾಣವನ್ನು ಅಂದಾಜು ಮಾಡಿ ಅದರಲ್ಲಿ, ಬೆಳೆಯತಕ್ಕ ಮನುಷ್ಯನ ಸಂಸಾರಕ್ಕೆ ಒಂದು ವರ್ಷಕ್ಕೆ ಎಷ್ಟು ಆಹಾರಧಾನ್ಯ ಬೇಕು, ಆತನ ವ್ಯವಸಾಯದ ಖರ್ಚು, ಆಳ-ಕೂಲಿ ಇತ್ಯಾದಿಗಳಿಗೆಲ್ಲಾ ಎಷ್ಟು ಕಾಳು ಬೇಕು, ಇವುಗಳನ್ನೆಲ್ಲಾ ಲೆಕ್ಕಹಾಕಿ, ಅಷ್ಟನ್ನು ಬಿಟ್ಟು ಬಿಟ್ಟನಂತರ ಉಳಿಯತಕ್ಕ ದವಸದಲ್ಲಿ ಪ್ರತಿಯೊಬ್ಬರೂ ಸರ್ಕಾರಕ್ಕೆ ಎಷ್ಟು ಕೊಡಬೇಕೆಂದು ನಿರ್ಧರಿಸುವುದೇ ಪ್ರೊಕ್ಯೂರ್‌ಮೆಂಟ್ ಎಂಬ ಈಗಿರುವ ಪದ್ಧತಿ. 'ಲೆವಿ' ಸಿಸ್ಟಂನಲ್ಲಿ ಅನೇಕ ರೀತಿಯಾದ ತೊಂದರೆಗಳಿಗೆ ಅವಕಾಶವಿದೆ. ಮೊದಲನೆಯದಾಗಿ ಖುಷ್ಕಿ ಜಮೀನಿಗೆ ಇಷ್ಟು ಕೊಡಬೇಕು—ಎಂದೂ, ತರಿ ಜಮೀನಾದರೆ ಇಷ್ಟು ಕೊಡಬೇಕು—ಎಂದೂ, ಹಾಗೆ ತರಿ ಜಮೀನಾಗಿದ್ದು, ಅದು ನಾನಾ ಪ್ರದೇಶದಲ್ಲಿದ್ದರೇ ಇಷ್ಟು, ಕೆರೆ ಕೆಳಗಿದ್ದರೇ ಇಷ್ಟು ಅಥವಾ ಬಾವಿ ಆಸರೆಯಿಂದ ಬೆಳೆಯುವುದಾಗಿದ್ದರೆ—ಅದಕ್ಕೇ ಇಷ್ಟು ಎಂಬುದಾಗಿ ಒಂದೊಂದಕ್ಕೂ ವಿಮರ್ಶೆಮಾಡಿ ಅದನ್ನು ನಿರ್ಧರಮಾಡಬೇಕಾಗುತ್ತದೆ. ಇದೊಂದು ದೊಡ್ಡ ಕಷ್ಟ. ಎರಡನೆಯದಾಗಿ ರೈತನು ಬೆಳೆಯಲಿ, ಬೆಳೆಯದಿರಲಿ ತನಗಿರುವ ಪ್ರತಿ ಎಕರೆಗೂ ಇಷ್ಟಿಷ್ಟು ದವಸ ಕೊಡಬೇಕೆನ್ನುವುದು ನ್ಯಾಯವಾದುದಲ್ಲ. ಆದಕಾರಣ ಈಗ ಸದಸ್ಯರು ಈ ನಾನಾ ವಿಚಾರಗಳ ಮೇಲೆ ಮಾತನಾಡಿ ಸಾಮಾನ್ಯ ಚರ್ಚೆಯನ್ನು ಮುಂದುವರಿಸಿ, ಪ್ರತಿಯೊಬ್ಬರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸಲು ಕಷ್ಟವೇನೂ ಆಗುವುದಿಲ್ಲ, ಅನಂತರ ಸರ್ಕಾರದವರು ಒಂದು ಆಖೈರಾಗಿ ಅವರು ತಯಾರಿಸುವಂಥ ವರದಿಯನ್ನೂ ಈ ಸಭೆಯ ಮುಂದೆ ತರುತ್ತಾರೆ. ಹಾಗೆ ತಂದಾಗ ಕೇವಲ ಪದಗಳ ವ್ಯತ್ಯಾಸದ ಬಗ್ಗೆ ಸ್ವಲ್ಪ ಚರ್ಚೆ ನಡೆಸಿ, ಇದನ್ನು ತೀರ್ಮಾನಮಾಡಿ ಮುಗಿಸಲು ಅನುಕೂಲವಾಗುತ್ತದೆ.

ಇದರ ಮೇಲಿನ ಮೊದಲನೆಯ ಭಾಷಣವನ್ನು ನಾನೇ ಈಗ ಪ್ರಾರಂಭಮಾಡತಕ್ಕವನಾಗಿದ್ದೇನೆ. 'ಲೆವಿ' ಸಿಸ್ಟಂ ಎಂಬುದನ್ನು ಜಾರಿಗೆ ತಂದರೆ ಮುಂದಕ್ಕೆ ಅದರಿಂದ ಬಹಳ ಕಷ್ಟತರವಾದ ಸಮಸ್ಯೆಗಳು ಏಳಬಹುದು

(ಶ್ರೀ ಎಚ್. ಕೆ. ವೀರಣ್ಣಗೌಡ.)

ದೆಂದು ತಿಳಿದುಕೊಂಡಿದ್ದೇನೆ. ನಾನು ಈಗಾಗಲೇ ತಿಳಿಸಿರುವಂತೆ 'ಲೆವಿ' ಸಿಸ್ಟಂ ಎಂದರೆ ರೈತನಿಗಿರುವ ಜಮೀನಿನಲ್ಲಿ ಯಾವ ಬೆಳೆಯನ್ನಾದರೂ ಬೆಳೆದಿರಲಿ, ಅಥವಾ ಪಾಳುಬಿಟ್ಟಿರಲಿ ಎಕರೆಗಿಷ್ಟೆಂದು ನಿಗದಿಯಾಗಿ ಪ್ರತಿಯೊಬ್ಬ ರೈತನೂ ಇಷ್ಟನ್ನು ಕೊಡಲೇಬೇಕೆಂದು ಕೇಳುವುದೇ ಆಗಿದೆ. ಈ ವರ್ಷ ಮಳೆ ಸರಿಯಾಗಿ ಆಗದೆ ಬೆಳೆಯಾಗದೆ ಇರತಕ್ಕ ಪ್ರದೇಶಗಳು ಎಷ್ಟೋ ಇರುತ್ತವೆ. ಮಳೆ ಬಂದಿದ್ದರೂ, ಅದು ಸಕಾಲದಲ್ಲಿ ಬಾರದೆ ಇದ್ದು, ಆ ಕಾರಣದಿಂದಲೂ ಬೆಳೆ ಚೆನ್ನಾಗಿ ಆಗದಿರುವ ಪ್ರದೇಶಗಳು ಅನೇಕ ಇರುತ್ತವೆ. ಖುಷ್ಕಿ ಜಮೀನಿನ ವಿಚಾರ ಹೇಳುವುದಾದರೆ ಎಷ್ಟೋ ಜಮೀನುಗಳು ಬಿತ್ತನೆಯಾಗದೆ ಹಾಗೆಯೇ ಉಳಿದಿವೆ. ಸಾಕಷ್ಟು ನೀರಿಲ್ಲದೆ ಬತ್ತದ ಬೆಳೆ ಸಹ ಸರಿಯಾಗಿ ಆಗದಿರುವ ನಿದರ್ಶನಗಳೂ ಅನೇಕವಿವೆ. ವಿಶ್ವೇಶ್ವರಯ್ಯ ನಾಲೆ ಕೆಳಗೂ ಕೂಡ ಬತ್ತ ಚೆನ್ನಾಗಿ ಆಗುತ್ತದೆಂಬ ಭರವಸೆ ಇಲ್ಲ. ಪರಿಸ್ಥಿತಿ ಹೀಗೆಲ್ಲಾ ಇರುವುದರಿಂದ ದಾಮಾಷ ಪ್ರಕಾರ ಖುಷ್ಕಿ ಮತ್ತು ತರಿ ಜಮೀನುಗಳೆಲ್ಲಕ್ಕೂ ಎಕರೆಗಿಷ್ಟು ಕೊಡಲೇಬೇಕೆಂದು ನಿಗದಿಮಾಡತಕ್ಕದ್ದು ಅಷ್ಟು ಸೂಕ್ತವಾದುದಲ್ಲವೆಂದು ನನಗೆನಿಸುತ್ತಿದೆ. ಇದುವರೆಗೂ ಅನುಸರಿಸಿಕೊಂಡು ಬಂದಿರತಕ್ಕ ದವಸ ಶೇಖರಣೆಮಾಡತಕ್ಕ ವಿಧಾನವೇ ಸರಿಯೇ......

(ಸಭೆಯಲ್ಲಿ ಗದ್ದಲ.)

Mr. SPEAKER.-When he is speaking it is not proper to interrupt him.

ಶ್ರೀ ಎಚ್. ಕೆ. ವೀರಣ್ಣಗೌಡ.—ಅಂತೂ ಈ 'ಲೆವಿ' ಸಿಸ್ಟಂ ಪ್ರಕಾರ ಧಾನ್ಯ ವಸೂಲಿಮಾಡತಕ್ಕದ್ದು ಅಷ್ಟು ಸರಿಯಾದುದೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಧಾನ್ಯ ಶೇಖರಣೆಯನ್ನಂತೂ ಮಾಡತಕ್ಕದ್ದು ಅತ್ಯಗತ್ಯವಾಗಿದೆ. ಸ್ಟ್ಯಾಟ್ಯುಟರಿ ರೇಷನಿಂಗ್ ಮೂರು ಪಟ್ಟಣಗಳಲ್ಲಿ ಇನ್ನೂ ಜಾರಿಯಲ್ಲಿರುವ ಕಾರಣ ಧಾನ್ಯ ವಸೂಲಿಯನ್ನು ನಿಲ್ಲಿಸಲು ಸಾಧ್ಯವೇ ಇಲ್ಲ. ಕಳೆದ ಅಧಿವೇಶನದಲ್ಲೇ ಸರ್ಕಾರದವರು ಸಂಸ್ಥಾನಾದ್ಯಂತವೂ ಇದ್ದಂಥ ಆಹಾರ ಹತೋಟಿಯನ್ನು ಒಂದು ರೀತಿಯಲ್ಲಿ ಸಡಲಿಸಿ ಬೆಂಗಳೂರು ನಗರ, ದಾವಣಗೆರೆ ಮತ್ತು ಕೆ. ಜಿ. ಎಫ್. ಇತ್ಯಾದಿ ಸ್ಥಳಗಳಲ್ಲಿ ಮಾತ್ರ ಆಚರಣೆಯಲ್ಲಿಟ್ಟುಕೊಂಡು ಇನ್ನುಳಿದ ಎಲ್ಲಾ ಪ್ರದೇಶಗಳಲ್ಲಿಯೂ ಹತೋಟಿ ಆಜ್ಞೆಯನ್ನು ಬಹಳಮಟ್ಟಿಗೆ ಸಡಿಲ ಮಾಡಿರುತ್ತೇವೆಂದು ತಿಳಿಸಿದ್ದಾರೆ. ಹಾಗೆ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲೆಲ್ಲಾ ಧಾನ್ಯಗಳನ್ನು ಕಟ್ಟುನಿಟ್ಟಾಗಿ ಒದಗಿಸಬೇಕಾಗಿಲ್ಲವಾಗಿದ್ದರೂ ಸಹ ಇಂದು ಸರ್ಕಾರದವರು ಕೊಟ್ಟಿರತಕ್ಕ ಅಂಕಿಅಂಶಗಳನ್ನು ನೋಡಿದರೆ ಇಲ್ಲಿಯವರೆಗೆ ಖರ್ಚಾಗಿರತಕ್ಕ ಆಹಾರ ಸಾಮಗ್ರಿಗಳಲ್ಲಿ ಶೇಕಡ 68 ಭಾಗದಷ್ಟನ್ನು ಪೂರಾ ಹಳ್ಳಿಗಳವರೇ ಕೊಂಡುಕೊಂಡಿದ್ದಾರೆಂಬುದಾಗಿ ಗೊತ್ತಾಗುತ್ತದೆ. ಆದ್ದರಿಂದ ಸರ್ಕಾರದವರು ಹಳ್ಳಿಗಾಡಿನವರಿಗೆ ಒಂದು ಭರವಸೆಯನ್ನು ಕೊಡದಿದ್ದಾಗ್ಗ್ಯೂ, ಇವರಿಗೆ ದವಸ ಒದಗಿಸಿಕೊಡುವುದಿಲ್ಲ ಎಂದು ಹೇಳುವುದು ಸೂಕ್ತವೂ ಅಲ್ಲ ಮತ್ತು ಸರ್ಕಾರದವರು ಆ ರೀತಿ ಹೇಳುತ್ತಾರೆಂದು ನಾನು ಭಾವಿಸಿಯೂ ಇಲ್ಲ. ಸಾಧ್ಯವಾದಮಟ್ಟಿಗೂ ಅಗತ್ಯವಾದ ಕಡೆಗಳಲ್ಲಿ ಎಲ್ಲರಿಗೂ ದವಸವನ್ನು ಒದಗಿಸಲೇಬೇಕಾಗುತ್ತದೆ. ಎಂದಮೇಲೆ ಧಾನ್ಯ ಸಂಗ್ರಹಣ ಕಾರ್ಯ ನಿಲ್ಲಿಸಲು ಆಗದು.

ಹಾಗಾದರೆ ಯಾವ ರೀತಿ ಧಾನ್ಯ ಸಂಗ್ರಹಣಮಾಡಬೇಕೆಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಇದುವರೆಗೆ ಅನುಸರಿಸುತ್ತಿದ್ದ ಕ್ರಮದಲ್ಲಿ ಅನೇಕ ನ್ಯೂನತೆಗಳಿರುತ್ತವೆಂದು ಈ ಸಭೆಯ ಮಾನ್ಯ ಸದಸ್ಯರಿಂದಲೇ ಅನೇಕ ಸಾರಿ ದೂರುಗಳು ಬಂದಿರುತ್ತವೆ; ಅಷ್ಟೇ ಅಲ್ಲದೆ ಹೊರಗಡೆ ಬಹಿರಂಗ ಸಭೆಗಳ ಮೂಲಕವೂ ಮತ್ತು ವರ್ತಮಾನ ಪತ್ರಿಕೆಗಳ ಮುಖಾಂತರವೂ ಅನೇಕ ದೂರುಗಳನ್ನು ಈ ಸಂಬಂಧವಾಗಿ ನಾವು ಕೇಳುತ್ತಲೇ ಬಂದಿದ್ದೇವೆ. ಇಲ್ಲಿಯತನಕ ಇದ್ದ ಪದ್ಧತಿಯಲ್ಲಿ ಗ್ರಾಮದಲ್ಲಿರತಕ್ಕ ಪಟೇಲ್ ಶ್ಯಾನುಭೋಗರು ಏನೊಂದು ಎಚ್. ಎಸ್. ಲೆಕ್ಕವನ್ನು ಬರೆಯುತ್ತಿದ್ದರೋ ಆ ಲೆಕ್ಕಗಳೆಲ್ಲಾ ಅಷ್ಟು ನಿಖರವಾದವುಗಳಲ್ಲವೆಂದೂ, ಯಾರು ಲಂಚರುಷುವತ್ತು ಕೊಟ್ಟಿರುತ್ತಾರೋ ಅಂಥವರ ಜಮೀನಿನಲ್ಲಿ ಕಡಮೆ ಬೆಳೆಯಾಗಿದ್ದಂತೆಯೂ, ಅಥವಾ ಮಾತುಬಾರಿಯಾದಂಥ ಕೆಲವು ಪ್ರಭಾವಶಾಲಿಗಳು ಅಧಿಕಾರಿಗಳನ್ನು ಹೆದರಿಸಿ–ಬೆದರಿಸಿ, ಅವರ ಜಮೀನಿನಲ್ಲಿ ಕಡಮೆ ಬೆಳೆ ಆದಂತೆ ಬರೆಸಿಕೊಳ್ಳುತ್ತಿದ್ದಾರೆಂದೂ ಇತ್ಯಾದಿ ನಾನಾರೀತಿಯ ದೂರುಗಳನ್ನು ಈಸಭೆಯ ಮುಂದೆಯೇ ಅನೇಕ ಸಾರಿ ತರಲಾಗಿದೆ. ಆದರೆ ಆ ದೂರುಗಳೆಲ್ಲಾ ಪೂರ್ತಿಯಾಗಿ ನಿಜವೆಂದಾಗಲಿ ಅಥವಾ ಸುಳ್ಳೆಂದಾಗಲಿ ಹೇಳುವುದಕ್ಕಾಗುವುದಿಲ್ಲ. ಆ ಪೈಕಿ ಕೆಲವು ಸಂದರ್ಭಗಳು ನಿಜವಿರಬಹುದು ಮತ್ತೆ ಕೆಲವು ಸುಳ್ಳಾಗಿರಬಹುದು ಅಥವಾ ಉತ್ಪ್ರೇಕ್ಷೆಯಿಂದ ಕೂಡಿರಬಹುದು. ಆದರೆ ಇದರಲ್ಲಿ ಒಂದು ಏನಿದೆಯೆಂದರೆ—ಇಂಥ ಅನೇಕ ರೀತಿಯ ನ್ಯೂನತೆಗಳನ್ನೆಲ್ಲಾ ತಪ್ಪಿಸಲು ಒಂದು ಸೂಕ್ತ ಪರಿಹಾರ ಮಾರ್ಗವನ್ನು ಕಂಡುಹಿಡಿಯಬೇಕಾದದ್ದು ದೇಶದಲ್ಲಿರುವ ಜನರ ಪ್ರತಿನಿಧಿಗಳಾಗಿ ಬಂದು ಇಲ್ಲಿ ಕುಳಿತಿರತಕ್ಕ ನಮ್ಮೆಲ್ಲರ ಕರ್ತವ್ಯವಾಗಿದೆ. 'ಲೆವಿ' ಸಿಸ್ಟಂ ಜಾರಿಗೆ ಬಂದರೆ, ಮುಂದೆ ಇದರಿಂದ ಅನೇಕ ದೂರುಗಳು ಬಂದೇ ಬರುತ್ತವೆ. ಜನರಿಗೆ ನಾನಾ ರೀತಿಯಲ್ಲಿ ಕಿರುಕುಳಗಳು ಉಂಟಾಗೇ ಆಗುತ್ತವೆ. ನಮಗೆಲ್ಲರಿಗೂ ಕಳೆದ 7–8 ವರ್ಷಗಳಿಂದಲೂ ಪೂರ್ಣ ಅನುಭವಕ್ಕೆ ಬಂದಿರುವ ಪದ್ಧತಿಯಲ್ಲಿರುವ ಲೋಪದೋಷಗಳನ್ನು ತೆಗೆದುಹಾಕಿ, ಧಾನ್ಯ ಸಂಗ್ರಹಣ ಮಾಡಬೇಕಾಗಿದೆ. ಈ ಬಗ್ಗೆ ನನ್ನ ಅಭಿಪ್ರಾಯ ಹೀಗಿದೆ—ಕಳೆದ 5–6 ವರ್ಷಗಳಿಂದ ಯಾರು ಯಾರು ಎಷ್ಟು ದವಸವನ್ನು ಸರ್ಕಾರಕ್ಕೆ ಮಾರಿದ್ದಾರೆಂಬುದನ್ನು ಲೆಕ್ಕಹಾಕಿ, ಅದರ ಸರಾಸರಿ ವರ್ಷಕ್ಕೆ ಎಷ್ಟಾಗುತ್ತದೆಂಬುದನ್ನು ಕಂಡುಹಿಡಿದು, ಅದರ ಪ್ರಕಾರ ಈ ವರ್ಷ ಇಷ್ಟೇ ಧಾನ್ಯ ಕೊಡಿ ಎಂದು ಹೇಳಬೇಕಾಗುತ್ತದೆ. ಆದರೆ ಈ ವರ್ಷ ಸರಿಯಾಗಿ ಮಳೆಬೆಳೆಗಳಾಗಿಲ್ಲವೆಂಬ ಅಂಶ ಪ್ರತಿಯೊಬ್ಬರಿಗೂ ತಿಳಿದಿರುವ ವಿಷಯ. ಈ ಕಾರಣದಿಂದ ಹಾಗೆ ಏನೊಂದು ಸರಾಸರಿ ಕಂಡುಹಿಡಿಯಲಾಗುತ್ತದೋ ಅಥವಾ ಪ್ರತಿಯೊಬ್ಬರೂ ಇಲ್ಲಿಯತನಕ ಸರ್ಕಾರಕ್ಕೆ ಎಷ್ಟು ಪ್ರಮಾಣದಲ್ಲಿ ಧಾನ್ಯವನ್ನು ಒಪ್ಪಿಸುತ್ತಿದ್ದರೋ ಅದರಲ್ಲಿ ನಾಲ್ಕನೇ ಒಂದು ಭಾಗವನ್ನು ಅವರಿಗೆ ರಿಯಾಯಿತಿ ತೋರಿಸಬೇಕಾಗುತ್ತದೆ. ನನ್ನ ವಿಚಾರವಾಗಿಯೇ ಒಂದು ಉದಾಹರಣೆಯನ್ನಾಗಿ ಹೇಳುವುದಾದರೆ, ಕಳೆದ 5–6 ವರ್ಷಗಳಿಂದಲೂ ನಾನು ಸರ್ಕಾರಕ್ಕೆ ವರ್ಷಂಪ್ರತಿ ಒಂದು ನೂರು ಪಲ್ಲ ದವಸವನ್ನು ಸಲ್ಲಿಸುತ್ತಿದ್ದರೆ—ಈ ವರ್ಷ ಆ ನೂರು ಪಲ್ಲಕ್ಕೆ ಬದಲಾಗಿ 75 ಪಲ್ಲ ಮಾತ್ರ ಕೊಡುವಂತೆಯೂ ಮತ್ತು 25 ಪಲ್ಲ ರಿಯಾಯಿತಿ ತೋರಿಸುವಂತೆಯೂ ಒಂದು ನೀತಿಯನ್ನು ಹಾಕಿಕೊಂಡರೆ ಸರ್ಕಾರಕ್ಕೆ ಸರಿಯಾಗಿ ಧಾನ್ಯ ಸಂಗ್ರಹಣವಾಗುವುದೊಂದೇ ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ರೈತಾಪಿ ಜನರಿಗೆ ಆಗುತ್ತಿರುವ ಕಿರುಕುಳಗಳೂ

ಇದರಿಂದ ತಪ್ಪಿಹೋಗುತ್ತವೆ, ಅಧಿಕಾರಿಗಳು ರೈತನ ಮನೆಗಳಿಗೆ ನುಗ್ಗಿ ಧಾನ್ಯ ಹುಡುಕಬೇಕಾದಂಥ ಪ್ರಸಕ್ತವೂ ಒದಗುವುದಿಲ್ಲ. ಲಂಚರುಷುವತ್ತುಗಳೂ ಮತ್ತು ಜನರ ದಾಕ್ಷಿಣ್ಯ ಇವುಗಳೆಲ್ಲಾ ನಿಂತುಹೋಗಲು ಅವಕಾಶವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ತಾವು ಹೇಳುತ್ತಿರುವುದೆಲ್ಲಾ 12 ಅಣೆ ಬೆಳೆಯಾಗಿದ್ದರೆತಾನೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕಡಮೆಮಾಡುವುದಕ್ಕೆ ಅವಕಾಶವಿದ್ದೇ ಇದೆ. ಕಡೆಯದಾಗಿ ಇನ್ನೊಂದು ಮಾತು ಹೇಳಬೇಕಾಗಿದೆ. ಹಾಗೆ ಯಾರು ಸರ್ಕಾರಕ್ಕೆ ನಿಗದಿಮಾಡಿದ ಪ್ರಕಾರ ಕೊಡತಕ್ಕದ್ದನ್ನು ಕೊಟ್ಟುಬಿಟ್ಟ ಬಳಿಕ ಅಂಥವರಿಗೆ ರಿಯಾಯಿತಿ ಬಗ್ಗೆ ಬಿಡಲಾಗುವ ದವಸವನ್ನು, ಅಂದರೆ ಶೇಕಡ 25ರಷ್ಟನ್ನು ಅವರು ಸಂಸ್ಥಾನದೊಳಗಡೆ ಸ್ವತಂತ್ರವಾಗಿ, ಯಾರ ಅಡ್ಡಿ ಆತಂಕಗಳೂ ಇಲ್ಲದಂತೆ ಎಲ್ಲಿ ಬೇಕಾದರೂ, ತಮಗೆ ದೊರೆಯಬಹುದಾದ ಪರಮಾವಧಿ ಬೆಲೆಗೆ, ಮಾರಾಟ ಮಾಡಿಕೊಳ್ಳಲು ಅವಕಾಶವಿರಬೇಕು. ಹೀಗೆ ಮಾಡತಕ್ಕದ್ದು ಬಹಳ ಒಳ್ಳೆಯದಾಗಿ ತೋರುತ್ತದೆ ಮತ್ತು ಇದೇ ಒಂದ ಸೂಕ್ತವಾದ ಮಾರ್ಗವೂ ಸಹ ಆಗಿರುತ್ತದೆಂದು ನಾನು ಭಾವಿಸಿ ಈ ನನ್ನ ಅಭಿಪ್ರಾಯಗಳನ್ನು ಮಾನ್ಯ ಸದಸ್ಯರೆಲ್ಲರ ಅವಗಾಹನೆಗಾಗಿ ಈಗ ಸಭೆಯ ಮುಂದಿಟ್ಟು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಆರ್. ಅನಂತರಾಮಯ್ಯ.—ಸ್ವಾಮಿ, ಶ್ರೀಮಾನ್ ಎಚ್. ಕೆ ವೀರಣ್ಣಗೌಡರು ಹೇಳಿದ ವಿಚಾರದಲ್ಲಿ ನಾನು ಕೆಲವು ಮಾತುಗಳನ್ನು ಹೇಳಬೇಕಾಗಿದೆ.

ಈ ಲೆವಿಸಿಸ್ಟಂ ಎಂಬುದೇ ಸರಿಯಾದುದಲ್ಲ. ಈ ಪದ್ಧತಿ ಪ್ರಕಾರ ಎಲ್ಲರೂ ಒಂದು ಎಕರೆಗೆ ಒಂದು ವರ್ಷಕ್ಕೆ ಇಷ್ಟನ್ನು ಕೊಡಲೇಬೇಕೆಂಬ ನಿರ್ಬಂಧ ಹಾಕಬೇಕಾಗುತ್ತದೆ. ಆದರೆ ಅದರಲ್ಲಿ ತರಿ ಜಮೀನಾದರೆ ಇಷ್ಟೊಂದೂ—ಖುಷ್ಕಿ ಜಮೀನಾದರೆ ಅದಕ್ಕೆ ಒಂದು ದಾಮಾಷಾ ಹಾಕಿ ವಸೂಲು ಮಾಡಬೇಕಾಗುತ್ತದೆ. ಇದು ಸರಿಯಾದುದಲ್ಲ. ಸಾಮಾನ್ಯವಾಗಿ ಪ್ರತಿಯೊಬ್ಬರೂ ಕೊಡಬೇಕೆಂದು ಹೇಳಿದರೆ ಕೇವಲ ಒಂದು ಎಕರೆ ಜಮೀನಿರತಕ್ಕವನೂ ಸಹ ಈ ಲೆವಿ ಪದ್ಧತಿ ಪ್ರಕಾರ, ನೂರಾರು ಎಕರೆ ಜಮೀನಿನವನು ಹೇಗೆ ಕೊಡುತ್ತಾನೋ ಹಾಗೆಯೇ ಕೊಡಬೇಕಾಗುತ್ತದೆ ನೂರಾರು ಎಕರೆ ಜಮೀನುಳ್ಳ ರೈತನು ಎಕರೆಯೊಂದಕ್ಕೆ 5–6 ಸೇರಿನಂತೆ ಧಾನ್ಯವನ್ನು ಸರ್ಕಾರಕ್ಕೊಪ್ಪಿಸಿ, ಬಾಕಿ ಉಳಿದಿದ್ದನ್ನು ಆತನ ಇಷ್ಟಾನುಸಾರ ಮಾರಾಟ ಮಾಡಿಕೊಳ್ಳಲು ಆತನಿಗೆ ಮಾತ್ರ ಅನುಕೂಲವಾಯಿತೇ ಹೊರತು ಸಣ್ಣ ಷಟ್ಟ ಜಮೀನ್ದಾರರಿಗೇನೂ ಇದರಿಂದ ಸುಖವಿಲ್ಲ. ಈ ಕಾರಣದಿಂದ ಬಡಜಮೀನ್ದಾರರುಗಳಿಂದ ಧಾನ್ಯ ವಸೂಲಿ ಮಾಡುವುದು ಅಷ್ಟು ಸರಿಯಾದುದಲ್ಲವೆಂಬುದು ಒಂದನೇ ವಿಚಾರ. ಈ ಒಂದು ಕಾರಣದಿಂದಲೂ ಈ ಲೆವಿಸಿಸ್ಟಂ ಎಂಬುದು ಸಾಧುವಾದುದಲ್ಲ.

2 P.M.

ಎರಡನೆಯದೆಂದರೆ ಭೂಮಿಯಲ್ಲಿ ಕೆಲವು ಫಲವತ್ತಾಗಿರುತ್ತವೆ, ಕೆಲವು ಬಂಜರಾಗಿರುತ್ತವೆ. ಆದ್ದರಿಂದ ಇದೊಂದನ್ನೂ ನೋಡದೆ ದಾಮಾಷಾದಂತೆ ಒಂದೇ ಸಮನಾಗಿ ಕೊಡಿಯೆಂದು ಹೇಳಿದರೆ ಜನರಿಗೆ ಎಷ್ಟು ಕಷ್ಟವಾಗುತ್ತದೆ ; ಈ ಕಾರಣ, ಇದು ಸರಿಯಾಗಿಲ್ಲವೆಂದು ನನ್ನ ಅಭಿಪ್ರಾಯ.

ಮೂರನೆಯದಾಗಿ ಕೆಲವು absentee Land Lords ಕೂಡ ಇರುತ್ತಾರೆ. ಇನ್ನು ಕೆಲವರು ಮಾವಿನ ತೋಟ, ತೆಂಗಿನತೋಟ ಮುಂತಾದುವುಗಳನ್ನು ಮಾಡಿಕೊಂಡಿರುತ್ತಾರೆ. ಅವರುಗಳೆಲ್ಲರೂ ಎಕರೆಗೆ ಇಷ್ಟು ಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಇದೇ ಸಂಬಂಧದಲ್ಲಿ ಬೊಂಬಾಯಿನಲ್ಲಿ ಹಿಂದೆ ಒಂದು experiment ನ್ನು ಮಾಡಿದ್ದರು. ಎರಡು ವರ್ಷಗಳ ಹಿಂದೆ ಒಂದು ಡಿಸ್ಟ್ರಿಕ್ಟಿನಲ್ಲಿ ಪ್ರತಿಯೊಬ್ಬರೂ ಇಂಥಾದ್ದನ್ನೇ ಬೆಳೆ ಮಾಡಬೇಕೆಂದು ಹೇಳಿ ಅವರು ಕೊನೆಗೆ ಎಕರೆಗೆ ಇಷ್ಟೇ ಕೊಡಬೇಕೆಂದು ನಿಗದಿ ಮಾಡಿದ್ದರು. ಆದರೆ ಈ ಪದ್ಧತಿ ಸರಿಯಾಗಿ ನಡೆಯದೆ ಅದನ್ನು ಕೈಬಿಟ್ಟುಬಿಟ್ಟರು. ಆದ್ದರಿಂದ ಇಂಥ ಪ್ರದೇಶದಲ್ಲಿ ಇಂಥದೇ ಬೆಳೆ ಮಾಡಬೇಕು, ಹಾಗೆ ಬೆಳೆಯದೆ ಇದ್ದರೂ ನಿಗದಿ ಮಾಡಿದಷ್ಟು ದವಸವನ್ನು 'ಕೊಟ್ಟೇಕೊಡಬೇಕೆಂದು ಹೇಳಿದರೆ ಅತ ಬ್ಲಾಕ್ ಮಾರ್ಕೆಟ್ಟಿಗೆ ಹೋಗಿ ಹೆಚ್ಚಿಗೆ ಬೆಲೆ ಕೊಟ್ಟು ಅಷ್ಟು ಕೊಂಡುಕೊಡಬೇಕೆಂದರೆ ಕಷ್ಟವಾಗುತ್ತದೆ. ಆದ್ದರಿಂದ Levy ಪದ್ಧತಿ ಅಷ್ಟು ಸಮರ್ಪಕವಾಗಿಲ್ಲವೆಂದು ಹೇಳಬಹುದು. ಇದು ಒಟ್ಟಿನಲ್ಲಿ ಬಡವರಿಗೆ ಇನ್ನೂ ಹೆಚ್ಚಿಗೆ ಕಷ್ಟ ತರುವಂಥಾದ್ದಾಗಿದೆ. ಮತ್ತು ಸಾಹುಕಾರರಿಗೆ ಇನ್ನೂ ಹೆಚ್ಚಿಗೆ ಹಣ ಸೇರುವುದಕ್ಕೆ ಅನುಕೂಲವಾಗುತ್ತದೆ. ನೂರಾರು ಎಕರೆ ಇಟ್ಟುಕೊಂಡಿರುವವರಿಗೇ ಅನುಕೂಲವಾಗುತ್ತದೆ ಈ ದೃಷ್ಟಿಯಿಂದಲೇ ಶ್ರೀಮಾನ್ ವೀರಣ್ಣಗೌಡರು ಸರ್ಪ್ಲಸ್ ಹೋಲ್ಡರುಗಳಿಂದ ತೆಗೆದುಕೊಳ್ಳಬೇಕೆಂದು ಹೇಳಿರುವುದು ನ್ಯಾಯವಾಗಿದೆ. ಸರ್ಪ್ಲಸ್ ಹೋಲ್ಡರುಗಳು ತಮ್ಮ ಜೀವನಕ್ಕಾಗಿ ಉಳಿದದ್ದನ್ನು ಸರಾಸರಿ 5 ವರ್ಷದ ಲೆಕ್ಕ ತೆಗೆದುಕೊಂಡು ಅದರಂತೆ ವಸೂಲು ಮಾಡಿಕೊಳ್ಳುವುದು ಒಳ್ಳೆಯದು. ಸರ್ಕಾರದಲ್ಲೇ ಈ ಲೆಕ್ಕಗಳೆಲ್ಲಾ ಇವೆ. ಜನರಿಗೂ ಕಷ್ಟವಿರುವದಿಲ್ಲ; ಬಡವರಿಗೂ ಅನುಕೂಲ ಮಾಡಿದ ಹಾಗಾಗುತ್ತದೆ. ಹಿಂದೆ ಅಮಲ್ದಾರರೂ, ಶ್ಯಾನುಭೋಗರೂ ಪಟೇಲರೂ ಹೋಗಿ ಎಲ್ಲಾ ರೈತರಿಂದ ದವಸ ತೆಗೆದುಕೊಳ್ಳಬೇಕೆಂದು ಹೇಳಿ ಎಷ್ಟು ವ್ಯಥೆ ಪಟ್ಟಿದ್ದಾರೆಂಬುದು ತಮಗೆಲ್ಲಾ ಗೊತ್ತಿರಬಹುದು. ಈಗ ಕಂಟ್ರೋಲ್ ತೆಗೆದ ತಕ್ಷಣ ಹಿಂದಿನ ಕಿರುಕುಳವೆಲ್ಲಾ ಹೋಯಿತೆಂದು ರೈತರೆಲ್ಲಾ ಎಷ್ಟೋ ಸಂತೋಷಪಟ್ಟುಕೊಂಡಿದ್ದಾರೆ. ಹಳ್ಳಿಗಳ ಕಡೆ free movement ಗೆ ಅವಕಾಶವಾಗಿ ರೈತರಿಗಿರುವ ಕಿರುಕುಳವನ್ನು ಕಡಮೆ ಮಾಡಿದ್ದೀರಿ. ಅಂಥಾದ್ದರಲ್ಲಿ ತಿರುಗಿ ಈ ರೀತಿ ಕಿರುಕುಳ ತಂದಿರೆಂದರೆ ಜನರು ಬಹಳ ವ್ಯಥೆಪಟ್ಟುಕೊಳ್ಳುತ್ತಾರೆ. ಆದ್ದರಿಂದ ಸರ್ಪ್ಲಸ್ ಹೋಲ್ಡರುಗಳಿಂದ ಮಾತ್ರ 100ಕ್ಕೆ 75 ಭಾಗದಷ್ಟು ವಸೂಲು ಮಾಡಿಕೊಂಡು Fair price ಡಿಪೋಗಳಿಗೆ ಸಪ್ಲೈ ಮಾಡಿಕೊಂಡು ಹೋಗುವುದು ಒಳ್ಳೆಯದು. ಅದಿಲ್ಲದೆ ಬಡವರಾದ 3–4 ಎಕರೆ ಜಮೀನಿರುವವರಿಂದ ತೆಗೆದುಕೊಳ್ಳುವದು ಬಹಳ ಅನ್ಯಾಯ. ಆದ್ದರಿಂದ 'ಲೆವಿ ಸರಿಯಾಗಿಲ್ಲ, ಸಮರ್ಪಕವಾಗಿಲ್ಲ. ನಮ್ಮ ನೆರೆ ಪ್ರಾಂತದವರಾದ ಬೊಂಬಾಯಿನವರು ಅದನ್ನು ಬಿಟ್ಟುಬಿಟ್ಟಿದ್ದಾರೆ. ಸರ್ಪ್ಲಸ್ ಹೋಲ್ಡರುಗಳಿಂದ ತೆಗೆದುಕೊಳ್ಳುವ ಏರ್ಪಾಡು ಮಾಡಿ ಎಂದು ಹೇಳುತ್ತೇನೆ.

ಇನ್ನು ಬೆಲೆಯ ವಿಚಾರ. ಇದೇನೋ ನಮಗೆ ಸೇರಿದ್ದಲ್ಲ. ಇಂಡಿಯಾ ಸರ್ಕಾರದವರಿಗೆ ಸೇರಿದ್ದೆಂದು ಮಾನ್ಯ ಮಂತ್ರಿಗಳೇ ಹೇಳಿದ್ದಾರೆ. ಆದಾಗ್ಯೂ ನಾವೂ ಸಹ ಈ ರೀತಿಯಾಗಿ ಬೆಲೆ ಕೊಡಬೇಕೆಂದು ಶಿಫಾರಸ್ಸು ಮಾಡಿದರೆ ಕೇಂದ್ರ ಸಮಿತಿಯವರೂ ಒಪ್ಪಬಹುದು ಈಗ ಬತ್ತಕ್ಕೆ 19–20 ರೂಪಾಯಿ ಕೊಟ್ಟು ಕೊಂಡು

(ಶ್ರೀ ಆರ್. ಅನಂತರಾಮು)

ಕೊಳ್ಳುತ್ತಿರುವುದು ರಾಗಿ, ಜೋಳ 20-22 ರೂಪಾಯಿ ಕೊಟ್ಟು ಕೊಂಡುಕೊಳ್ಳುತ್ತಿರುವುದು ಬಹಳ ಕಡಮೆ ಯೆಂದು ಬಹಳ ಕಡೆಯಿಂದ ಹೇಳುತ್ತಿದ್ದಾರೆ. ವಾಸ್ತವವಾಗಿಯೂ ಇದು ಕೇವಲ ಕಡಮೆಯೆಂದು ಹೇಳಬಹುದು. ಆದಾಗ್ಗೂ ಬೆಲೆ ಜಾಸ್ತಿ ಮಾಡಬೇಕಾದರೆ ಕೇಂದ್ರದ ಕಮಿಟಿಯವರು ಮನಸ್ಸು ಮಾಡಬೇಕು; ಅವರು ಯೋಚನೆ ಮಾಡಿ ಬೆಲೆ ಹೆಚ್ಚಿಸಬೇಕಾಗಿದೆ. ಮುಖ್ಯವಾಗಿ ರೈತನಿಗೆ ಎಷ್ಟು ಖರ್ಚು ಬಿದ್ದಿದೆಯೆಂಬುದನ್ನು ನೋಡಿಕೊಂಡು ಅದಕ್ಕೆ ಸರಿಯಾಗಿ ಬೆಲೆ ಬರುವಂತೆ ಮಾಡಬೇಕು. ಆದ್ದರಿಂದ ಸಭೆಯವರು ಒಟ್ಟಿಗೆ ಸೇರಿ ಒಂದು ಶಿಫಾರಸು ಮಾಡಿದರೆ ಒಳ್ಳೆಯದು.

ಇನ್ನು ಹೆಚ್ಚಿಗೆ ನಾನೇನೂ ಹೇಳಬೇಕಾಗಿಲ್ಲ. ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ವೀರಣ್ಣಗೌಡರೇ ಲೆವಿ ಪದ್ಧತಿಯ ವಿಚಾರವಾಗಿ ಹೇಳಿ ಸರ್ಪ್ಲಸ್ ಹೋಲ್ಡರುಗಳಿಂದ ತೆಗೆದುಕೊಳ್ಳುವುದು ಹೇಗೆ ಸೂಕ್ತ ಎಂಬುದನ್ನೂ ಹೇಳಿದ್ದಾರೆ. ನಾನೂ ಅದನ್ನು ಸಮರ್ಥನೆ ಮಾಡಿ ಮುಗಿಸುತ್ತೇನೆ.

*Sri T. MARIAPPA.—Sir, I only want to explain a few terminologies frequently used in this connection. ಶ್ರೀಮಾನ್ ವೀರಣ್ಣಗೌಡರು ಮಾತನಾಡುವಾಗ Procurement, Assesssment, Levy, ಮುಂತಾಗಿ ಕೆಲವು ಪದಗಳನ್ನು ಉಪಯೋಗಿಸಿದರು. ಅವುಗಳ ಅರ್ಥವನ್ನು ಸ್ವಲ್ಪವಿಟ್ಟಿಗೆ ವಿವರಿಸಿ ಹೇಳಿದರೆ ಮುಂದಿನ ಚರ್ಚೆಗೆ ಅನುಕೂಲವಾಗುತದೆ. ಏಕೆಂದರೆ ಈಗ ಆಹಾರದ ಚರ್ಚೆ ಮಾಡುವಾಗ ಪ್ರೊಕ್ಯೂರ್‌ಮೆಂಟ್ ಪಾಲಸಿ ಲೆವಿ ಪಾಲಿಸಿ—ಈ ಪದಗಳೆಲ್ಲಾ ಸಾಮಾನ್ಯವಾಗಿ ಬಂದೇ ಬರುತ್ತವೆ.

Mr. SPEAKER.—I think you may speak on the main subject itself.

ಶ್ರೀ ಟಿ. ಮರಿಯಪ್ಪ.—ಅಧ್ಯಕ್ಷರೇ, ತಮ್ಮ ಅಜ್ಞಾನುಸಾರ ಈ ಆಹಾರ ನೀತಿಯ ವಿಷಯದಲ್ಲಿ ಸಂಕ್ಷೇಪವಾಗಿ ಕೆಲವು ವಿವರಗಳನ್ನು ಸಭೆಯ ಮುಂದಿಡಬೇಕೆಂದಿಚ್ಛಿಸುತ್ತೇನೆ. ಆಹಾರ ಮಂತ್ರಿಗಳ ಭಾಷಣವಾದ ಮೇಲೆ ನಮ್ಮ ಮಾನ್ಯ ಸ್ನೇಹಿತರು ಕೆಲವರು ಈ ವಿಚಾರದಲ್ಲಿ ನೀವು ಯಾವ ಯಾವ ರೀತಿ ಮಾಡಬೇಕೆಂದು ನಿರ್ಧರ ಮಾಡಿಕೊಂಡಿದ್ದೀರಿ, ಸಮಿತಿಯವರು ಏನು ತೀರ್ಮಾನ ಮಾಡಿದರು, ಕಾಂಗ್ರೆಸ್ ಪಾರ್ಟಿಯವರು ಏನು ತೀರ್ಮಾನ ಮಾಡಿದ್ದಾರೆ ಎಂಬುದನ್ನೆಲ್ಲಾ ತಿಳಿಸಿದ್ದರೆ ಬಹಳ ಚೆನ್ನಾಗಿತ್ತೆಂದು ಹೇಳಿದರು.

ಶ್ರೀ ಬಿ. ಹುಚ್ಚೇಗೌಡ.—ಕಾಂಗ್ರೆಸ್ ಪಾರ್ಟಿಯವರು ಏನು ಮಾಡಿದ್ದಾರೆಂದು ನಾವೇನೂ ಕೇಳಲಿಲ್ಲ.

ಶ್ರೀ ಟಿ. ಮರಿಯಪ್ಪ.—ಈ ಸಂದರ್ಭದಲ್ಲಿ ಮಾನ್ಯ ಮಿತ್ರರಾದ ಶ್ರೀಮಾನ್ ಪಟ್ಟಾಭಿ ರಾಮನ್‌ರವರು ಒಂದು ಕಾನ್ಸ್ಟಿಟ್ಯೂಷನಲ್ ಅಂಶವನ್ನು ಕೂಡ ಎತ್ತಿದರು. ಅದನ್ನು ನಾನೂ ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಈ ವಿಷಯದಲ್ಲಿ ಸರ್ಕಾರದವರು ಸಂಪೂರ್ಣವಾಗಿ ತಾವೇ ಜವಾಬ್ದಾರಿ ತೆಗೆದುಕೊಂಡು ಈ ವಿಷಯದಲ್ಲಿ ಒಂದು ಪ್ಲಾನನ್ನು ಕೊಟ್ಟಿದ್ದರೆ ಚೆನ್ನಾಗಿತ್ತು ಎಂದು ಹೇಳಿದರು. ಇದನ್ನು ನಾನು ಒಪ್ಪುತ್ತೇನೆ. ಸರ್ಕಾರದವರೇ ಸಂಪೂರ್ಣ ಜವಾಬ್ದಾರಿಯನ್ನು ಯಾವಾಗಲೂ ವಹಿಸುತ್ತಾರೆ. ಈ ಆಹಾರದ ಹಂಚಿಕೆಯನ್ನು ಸರ್ಕಾರದವರೇ ನಡೆಸಬೇಕೆಂದು ಸಿದ್ಧವಾಗಿರುವಾಗ ಈ ಜವಾಬ್ದಾರಿಯನ್ನು ತಳ್ಳುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಸರ್ಕಾರದವರೇ ನಿರ್ದಿಷ್ಟವಾದ ಒಂದು ಯೋಜನೆಯನ್ನು ಸಭೆಯ ಮುಂದೆ ಇಟ್ಟು ಸಭೆಯವರ ಅಭಿಪ್ರಾಯವನ್ನು ಕೇಳಿದ್ದರೆ ಪ್ರಾಯಶಃ ಇಂಥ ಟೀಕೆ ಬರುತ್ತಿರಲಿಲ್ಲ. ಆದರೆ ಸರ್ಕಾರದವರು ಏನು ಮಾಡಿದ್ದಾರೆ? ಅವರು ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾರೆ. ಪ್ರಜೆಗಳು ಏನು ಅಭಿಪ್ರಾಯ ಪಡುತ್ತಾರೆ, ಪ್ರಜೆಗಳ ಪ್ರತಿನಿಧಿಗಳ ಅಭಿಪ್ರಾಯ ಏನು ಎಂಬುದನ್ನು ನೋಡಿ ಬಹುಮತಾಭಿಪ್ರಾಯ ಯಾವ ರೀತಿ ಬರುತ್ತದೆಂಬುದನ್ನು ನೋಡಿ ಹಾಲಿ ಜಾರಿಯಲ್ಲಿರುವ ಆಹಾರದ ನಿಯಂತ್ರಣವನ್ನು ಸಡಲಿಸುವುದಕ್ಕೆ ಸಾಧ್ಯವೇ ಇಲ್ಲವೇ ಎಂಬ ಆಲೋಚನೆಯೂ ಅವರಿಗಿದೆ. ಈ ಕಾರಣದಿಂದ ಅವರು ಬಹುಶಃ ಅವರು ಹೇಳಿದಂತೆ ಮಾಡಿಲ್ಲವೆಂದು ಹೇಳಬೇಕು.

ಇನ್ನು ಸದಸ್ಯರಲ್ಲಿ ನಾನು ಮನವಿ ಮಾಡಿಕೊಳ್ಳುವುದಿಷ್ಟೆ. ಈಗಿರತಕ್ಕ ಕಾನೂನಿನಲ್ಲಿ ಅನೇಕ ಕಿರುಕುಳಗಳಿಗೆ ಅವಕಾಶವಿದೆ, ನಮ್ಮ ಪ್ರೊಕ್ಯೂರ್‌ಮೆಂಟ್ ಪಾಲಿಸಿ ಸರಿಯಿಲ್ಲ, ಆದ್ದರಿಂದ ಲೆವಿ ಸಿಸ್ಟಂ ಬೇಕೆಂದು ಕೆಲವರು ಹೇಳಿದ್ದಾರೆ. ಲೆವಿ ಸಿಸ್ಟಂ ಏನೆಂದು ಕೇಳುವುದಕ್ಕೆ ಮುಂಚೆ ಈಗಿನ ಪದ್ಧತಿಯೇನೆಂಬುದನ್ನು ನಾನು ಸ್ವಲ್ಪ ವಿವರಿಸುತ್ತೇನೆ ಹಾಲಿ ಇರತಕ್ಕದ್ದು Assessment ಮತ್ತು Procurement ಪದ್ಧತಿ. ಈ ಪದಗಳ ಅರ್ಥವನ್ನು ತಾವು ಗಮನಿಸಬೇಕು. Assessment ಎಂದರೆ ಮನೆಯಲ್ಲಿ ಎಷ್ಟು ಜನರಿದ್ದಾರೆ, ಆತನಿಗೆ ಎಷ್ಟು ಬಿಡಬೇಕಾಗುತ್ತದೆ ಎಂದು ಲೆಕ್ಕಹಾಕುತ್ತೇವೆ. ಉಳಿದಿದ್ದನ್ನು ದುಡ್ಡು ಕೊಟ್ಟು ತೆಗೆದುಕೊಳ್ಳುವುದು ಪ್ರೊಕ್ಯೂರ್‌ಮೆಂಟು. ಲೆವಿಸಿಸ್ಟಂ ಅಂದರೆ, ಒಬ್ಬನಲ್ಲಿ 10 ಎಕರೆಯಿರಲಿ, 100 ಎಕರೆಯಿರಲಿ ಅವನ ಅವಶ್ಯಕತೆಗಳೇನೇ ಇರಲಿ ಆತನು ಇಂದಿಷ್ಟು ಕೊಟ್ಟೇ ಕೊಡಬೇಕು ಎಂಬುದು. ಇದರ ಜೊತೆಗೆ ಬೇರೆ ಪ್ರೊಕ್ಯೂರ್‌ಮೆಂಟ್ ಕೂಡ ಮಾಡಬೇಕಾಗುತ್ತದೆ. ಲೆವಿ ಮತ್ತು ಪ್ರೊಕ್ಯೂರ್‌ಮೆಂಟ್—ಎರಡೂ ಆದರೇನೆ ನಮಗೆ ಆಹಾರ ಸಾಕಾದಷ್ಟು ಸಂಗ್ರಹಣೆ ಆಗುವುದು. ಇಲ್ಲದಿದ್ದರೆ ಸಂಗ್ರಹಣೆ ಆಗುವುದೇ ಇಲ್ಲ. ಯಾವಾಗ ಸರ್ಕಾರದವರ ಮನಸ್ಸಿಗೆ, ಜನರ ಮನಸ್ಸಿಗೆ ಈಗಿನ ಕ್ಷಾಮ ಡಾಮರಗಳ ಪರಿಸ್ಥಿತಿಯಲ್ಲಿ ಆಹಾರ ಸಂಗ್ರಹಣೆ ಮಾಡಬೇಕೆಂದೆನಿಸುತ್ತದೆಯೋ ಆಗ ಅವರು ಈ ರೀತಿ ಪ್ರೊಕ್ಯೂರ್‌ಮೆಂಟ್ ಮಾಡಲೇಬೇಕಾಗುತ್ತದೆ; ಮತ್ತು ಕೇಂದ್ರ ಸರ್ಕಾರದಿಂದಲೂ ತೆಗೆದುಕೊಳ್ಳಲೇ ಬೇಕಾಗುತ್ತದೆ.

ಆದ್ದರಿಂದ ಈಗ ಯಾವರೀತಿ ಸಂಗ್ರಹಿಸಬೇಕೆನ್ನುವ ಪ್ರಶ್ನೆ ಬರುತ್ತದೆ. ಜನರಿಗೆ ಈಗಾಗಲೇ ಗೊತ್ತಿದೆ. ಅಸೆಸ್‌ಮೆಂಟ್ ಮಾಡುವಾಗ ಎಷ್ಟೋ ವೇಳೆ 10 ಎಕರೆಯಲ್ಲಿ ರಾಗಿ ಹಾಕಿದ್ದರೆ 4 ಎಕರೆಯಲ್ಲಿ ಹಾಕಿದ್ದಾರೆಂದು ಬರೆದಿರುತ್ತಾರೆ. ಇನ್ನು ಕೆಲವುಕಡೆ ಎರಡೇ ಎಕರೆಯಲ್ಲಿ ಬೆಳೆ ಮಾಡಿದ್ದರೆ ನಾಲ್ಕು ಎಕರೆಯಲ್ಲಿ ಬೆಳೆದಿದ್ದಾರೆಂದು H. S. ಫಾರಂನಲ್ಲಿ ಬರೆದಿರುತ್ತಾರೆ. ಆದ್ದರಿಂದ H. S. ಫಾರಂ ಬರೆಯುವುದನ್ನು ವರ್ಷೇ ವರ್ಷೇ ಬರೆಯಬೇಕೆನ್ನುವುದು ಸರಿಯಿಲ್ಲ. ಈಗ ನಮ್ಮಲ್ಲಿ ಹಿಂದಿನ 10 ವರ್ಷಗಳಿಂದ ಲೆಕ್ಕವಿದೆ. ಅಲ್ಲದೆ ನಮ್ಮಲ್ಲಿ ಜಾರಿಯಲ್ಲಿರುವ ಧಾನ್ಯ ಸಂಗ್ರಹಣ ನೀತಿಯೂ ಬಹಳ ಶಾಸ್ತ್ರೀಯವಾಗಿದೆಯೆನ್ನಬಹುದು. ಹಿಂದೆ ತಿರುಮಲರಾಯರು ಧಾನ್ಯ ವಸೂಲಿ ಕ್ರಮ, ಸಂಗ್ರಹಣ

* Asterisk indicates their speech has not been revised by member concerned.

ನೀತಿಯನ್ನು ಪರಿಶೀಲಿಸಬೇಕೆಂದು ಇಂಡಿಯಾ ದೇಶದ ಅನೇಕ ಕಡೆ ಹೋಗಿ ಬಂದು ಕೊನೆಗೆ ಮೈಸೂರು ದೇಶದಲ್ಲಿರುವ ಸಂಗ್ರಹಣ ನೀತಿ—assessment and procurement ಪದ್ಧತಿಯೇ ಬಹಳಮಟ್ಟಿಗೆ ಶಾಸ್ತ್ರೀಯವಾದದ್ದೆಂದು ಅಭಿಪ್ರಾಯ ಕೊಟ್ಟಿದ್ದಾರೆ.

ಶ್ರೀ ಎಲ್. ಸಿದ್ದಪ್ಪ.—ಆಗ ಯಾರು ಆಹಾರ ಮಂತ್ರಿಗಳಾಗಿದ್ದವರು ?

ಶ್ರೀ ಟಿ. ಮರಿಯಪ್ಪ.—ಆಗೇನೂ ಅವರು ಡೆಪ್ಯುಟಿ ಮಿನಿಸ್ಟರ್ ಆಗಿರಲಿಲ್ಲ; ಪಾರ್ಲಿಮೆಂಟ್ ಸದಸ್ಯರು ಮಾತ್ರ ಆಗಿದ್ದರು. ಈರೀತಿ ಮೈಸೂರಿನಲ್ಲಿರುವ ನೀತಿಯೇ ಚೆನ್ನಾಗಿದೆಯೆಂದು ಅವರೂ ಅಭಿಪ್ರಾಯಪಟ್ಟಿದ್ದಾರೆ.

ಅಲ್ಲದೆ ನಮ್ಮಲ್ಲಿ ಪ್ರೊಕ್ಯೂರ್‌ಮೆಂಟ್ ಕೂಡ ಹೆಚ್ಚು ಕಿರುಕುಳದ್ದಲ್ಲವೆಂದು ಹೇಳುತ್ತೇನೆ ಆದರೂ ನಾನೂ ಒಪ್ಪುತ್ತೇನೆ, ಕೆಲವು ಕೀಳುದರ್ಜೆಯ ನೌಕರರು ಏನೋ ಆಸೆಗೆ ತುತ್ತಾಗಿ ಕಿರುಕುಳಗಳನ್ನು ಕೊಟ್ಟಿರಬಹುದು; ಕೆಲವು ಊರುಗಳಲ್ಲಿ ದ್ವೇಷಕ್ಕಾಗಿ ಕಿರುಕುಳಗಳನ್ನು ಕೊಟ್ಟಿರಬಹುದು; ಕಲವರು ದುಡ್ಡಿನ ವ್ಯಾಮೋಹಕ್ಕಾಗಿ ತೊಂದರೆ ಕೊಟ್ಟಿರಬಹುದು; ಎಷ್ಟೋ ಜನ ಗೋಡೌನಿನಲ್ಲಿದ್ದುಕೊಂಡೇ ಚೀಲಕ್ಕೆ ಒಂದೊಂದು ಸೇರೇ ತೆಗೆದುಕೊಂಡು ಚೀಲಮಾಡಿ ಮಾರಿರಬಹುದು. ಆದರೆ ಇಂಥದೆಲ್ಲ ನಮ್ಮಲ್ಲಿ ಸರಿಯಾದ ದೇಶಭಕ್ತರಿದ್ದರೆ ಬರುತ್ತಿರಲಿಲ್ಲ. ಒಟ್ಟಿನಲ್ಲಿ ನಮ್ಮಲ್ಲಿರುವ assessment ಮತ್ತು ಪ್ರೊಕ್ಯೂರ್‌ಮೆಂಟ್ ಪದ್ಧತಿಯೇ more scientific ಆಗಿರುವಂತಹುದು. ಆದರೆ ಕಿರುಕುಳಗಳನ್ನು ತಪ್ಪಿಸಬೇಕು. ಅದನ್ನು ತಪ್ಪಿಸಬೇಕಾದರೆ ಮೂಲಕ್ಕೆ ಹೋಗಬೇಕು. ಪ್ರತಿ ವರ್ಷವೂ ಪ್ರತಿ ಜಮೀನಿಗೂ ಸರಿಯಾಗಿ H. S. ಫಾರಂ ಬರೆಯಬೇಕೆಂದರೆ ಬಹಳ ಕಷ್ಟ. ಹತ್ತು ವರ್ಷ ಈ ಆಹಾರದ ಹತೋಟಿಯನ್ನು ನಡೆಸಿ ನಮ್ಮಲ್ಲಿ ಯಾರುಯಾರು ಸರ್ಪ್ಲಸ್ ಹೋಲ್ಡರುಗಳಿದ್ದಾರೆಂಬುದು ಗೊತ್ತಿದೆ. ಸುಮಾರು $2\frac{1}{2}$ ಲಕ್ಷ ಜನ ನಮ್ಮಲ್ಲಿ ಸರ್ಪ್ಲಸ್ ಹೋಲ್ಡರುಗಳಿದ್ದಾರೆ. ಆದ್ದರಿಂದ ದೇಶದಲ್ಲಿ ವ್ಯವಸಾಯ ಮಾಡುವ ಲಕ್ಷಾಂತರ ಜನರ ಪೈಕಿ ಈ $2\frac{1}{2}$ ಲಕ್ಷ ಜನರನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡರೆ ಸಾಕು. ಬಾಕಿಯವರಿಗೆ ಆಹಾರವನ್ನೊದಗಿಸುವುದಕ್ಕೆ ಶಕ್ತಿಯಿಲ್ಲವೆಂದು ಹೇಳಬಹುದು. ಎಷ್ಟು ಜನರು ತಮಗೆ ಒಂದು ವರ್ಷಕ್ಕೆ ಪೂರಾ ಬೇಕಾದಷ್ಟು ದವಸವನ್ನೂ ಬೆಳೆದುಕೊಳ್ಳುವುದಿಲ್ಲವೆಂದು ಮಾನ್ಯ ಮಿತ್ರರಿಗೇ ದೃಢಪಟ್ಟಿದೆ. ಅದರಲ್ಲೂ ಚುನಾವಣೆಯ ಸಂದರ್ಭದಲ್ಲಿ ನೀವೆಲ್ಲಾ ಹಳ್ಳಿಗಾಡಿನವರ ಹತ್ತಿರ ಹೋಗಬೇಕಾಗಿ ಬಂದು ನೀವೇ ನೋಡಿರುವುದರಲ್ಲಿ ಎಷ್ಟೋ ಊರುಗಳಲ್ಲಿ 10 ಜನ ರಾಗಿ ಬೆಳೆಯುವವರಿದ್ದರೆ 100 ಜನ ರಾಗಿ ಸಾಕಾಗುವಷ್ಟು ಬೆಳೆದುಕೊಳ್ಳದ ಬಡವರಿದ್ದಾರೆಂಬುದು ಮನಗಂಡಿದ್ದೀರಿ. ಅದೇ ಬತ್ತ ಬೆಳೆಯುವ ಕಡೆಗಳಾದ ಹಾಸನ, ಶಿವಮೊಗ್ಗ ಮುಂತಾದ ಕಡೆಗಳಲ್ಲಿ ಹಾಗಲ್ಲ. ಅಲ್ಲಿ ಬತ್ತದ ಸರ್ಪ್ಲಸ್ ಹೋಲ್ಡರುಗಳು ಜಾಸ್ತಿಯಿದ್ದಾರೆ. ಎಷ್ಟೋ ಸರ್ಪ್ಲಸ್ ಹೋಲ್ಡರುಗಳು ಸಾವಿರ ಪಲ್ಲಾಗಳ ಮೇಲೆ ಕೊಡುವವರಾಗಿದ್ದಾರೆ. ನಮ್ಮ ಮಾನ್ಯ ಮಿತ್ರರಾದ ಶ್ರೀನಿವಾಸಯ್ಯಂಗಾರ್‌ರವರೇ ಒಂದು ಉದಾಹರಣೆ. ಅವರೂ ಬೇಕಾದಷ್ಟು ಕೊಡುತ್ತಿದ್ದಾರೆ; ಯಾವ ತೊಂದರೆಯನ್ನೂ ಪಟ್ಟುಕೊಳ್ಳುವುದಿಲ್ಲ. ಈರೀತಿ ಬತ್ತದ ಪ್ರೊಕ್ಯೂರ್‌ಮೆಂಟಿನಲ್ಲಿ ಯಾವ ತೊಂದರೆಯೂ ಇಲ್ಲವೆನ್ನಬಹುದು. ಅದರಲ್ಲೂ ಬೇಗ ಒಕ್ಕಿದ ಕೂಡಲೆ ಕೊಟ್ಟುಬಿಡುತ್ತಾರೆ. ಏಕೆಂದರೆ ಜಳ್ಳು ಹಸಿ ಎಲ್ಲವನ್ನೂ ಸರ್ಕಾರದವರಿಗೆ ತಳ್ಳಿಬಿಡಬಹುದು.

ಶ್ರೀ ಕೆ. ವಿ. ಶಂಕರಗೌಡ (ಮಂಡ್ಯ).—ಎಲ್ಲರೂ ಹಾಗೆ ಮಾಡುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ಎಲ್ಲರೂ ಹಾಗೆ ಮಾಡುತ್ತಾರೆಂದಲ್ಲ. ಬತ್ತದ ವಸೂಲಿ ಅಷ್ಟು ಸುಲಭವಾಗಿದೆಯೆಂದು ಹೇಳುತ್ತಿದ್ದೇನೆ. ಕೃಷ್ಣರಾಜನಗರ ತಾಲ್ಲೂಕಿನ ವಿಷಯವನ್ನು ಹೇಳುವುದಾದರೆ, ಹೋದಸಲ ಚುನಾವಣೆ ಬಿರುಸಾಗಿ ನಡೆಯುವ ಕಾಲದಲ್ಲೇ—ಆಗ ಸಾಮಾನ್ಯವಾಗಿ ಪ್ರೊಕ್ಯೂರ್‌ಮೆಂಟನ್ನು ನಿಲ್ಲಿಸಬೇಕಾಗಿತ್ತು, ಏಕೆಂದರೆ ಜನರ ಗಮನವೆಲ್ಲಾ ಚುನಾವಣೆಯ ಕಡೆಗಿರುತ್ತದೆ—ಅಂಥಾ ಕಾಲದಲ್ಲಿ ಇಪ್ಪತ್ತೇ ದಿವಸಗಳಲ್ಲಿ ಒಂದು ಲಕ್ಷದ 71 ಸಾವಿರ ಪಲ್ಲಾ ಬತ್ತದ ಪ್ರೊಕ್ಯೂರ್‌ಮೆಂಟ್ ಆಗಿದೆ. ಈ ಪ್ರಕಾರ ಬತ್ತದ ವಿಷಯದಲ್ಲಿ ಸಂಗ್ರಹಣೆಗೆ ಏನೂ ತೊಂದರೆಯೇ ಇಲ್ಲ. ತೊಂದರೆಯಿರುವುದೆಲ್ಲಾ ರಾಗಿಯ ಪ್ರೊಕ್ಯೂರ್‌ಮೆಂಟಿನ ವಿಚಾರದಲ್ಲಿ. ಏಕೆಂದರೆ ಸಣ್ಣಪುಟ್ಟ ರೈತರುಗಳಿಂದ ಇದನ್ನು ಸಂಗ್ರಹಿಸಬೇಕಾಗಿದೆ. ಸಾಮಾನ್ಯವಾಗಿ ರಾಗಿ ಕೊಡಬೇಕಾದರೆ ಬಹಳಮಟ್ಟಿಗೆ ಹಿಂಜರಿಯುತ್ತಾರೆ. ಏಕೆಂದರೆ ಅದನ್ನು ಒಂದೆರಡು ವರ್ಷ ಇಡಬಹುದಾಗಿದೆ.

ಆದ್ದರಿಂದ ನಾವೀಗ ಕಿರುಕುಳವನ್ನು ತಪ್ಪಿಸಬೇಕಾದರೆ, ಪ್ರತಿಯೊಂದು ಊರಿನಲ್ಲಿಯೂ ಸರ್ಪ್ಲಸ್ ಹೋಲ್ಡರುಗಳ ಪಟ್ಟಿಮಾಡುವುದು; ಆಮೇಲೆ 5 ವರ್ಷದ ಸರಾಸರಿ ಲೆಕ್ಕ ತೆಗೆದುಕೊಳ್ಳುವುದು. ಯಾರು ಯಾರು ಸರ್ಕಾರಕ್ಕೆ ಎಷ್ಟು ಕೊಟ್ಟಿದ್ದರೋ ಅದೆಲ್ಲಾ ಲೆಕ್ಕಇದೆ, ಹೊಸದಾಗಿ ಪಟ್ಟಿಮಾಡಬೇಕಾಗಿಲ್ಲ—ಒಂದು ವರ್ಷ ನಾಲ್ಕಾಣೆ ಬೆಳೆ ಆಗಿರಬಹುದು, ಇನ್ನೊಂದು ವರ್ಷ 8 ಆಣೆ ಆಗಿರಬಹುದು—ಹೀಗೆ ಒಟ್ಟಿನಲ್ಲಿ 5 ವರ್ಷದ ಸರಾಸರಿ ತೆಗೆದುಕೊಂಡರೆ ಪ್ರಾಯಶಃ ಎಲ್ಲರಿಗೂ ನ್ಯಾಯ ದೊರೆಯುವಂತೆ ಮಾಡಬಹುದು, ಅಷ್ಟೊಂದು ಕಷ್ಟವಾಗಲಾರದೆಂದು ಹೇಳಬಯಸುತ್ತೇನೆ. 10 ವರ್ಷದ ಸರ್ಪ್ಲಸ್ ಹೋಲ್ಡರುಗಳ ಪಟ್ಟಿಮಾಡಿ, ಅದರಲ್ಲೂ 5 ವರ್ಷದ ಸರಾಸರಿ ತೆಗೆದುಕೊಂಡು ನಾವು ಸುಲಭವಾಗಿ ವಸೂಲು ಮಾಡಿಕೊಳ್ಳಬಹುದು. ಅಲ್ಲದೆ ಈಗ ನಮಗೆ ಹಳ್ಳಿಗಾಡಿನವರಿಗೆ ಆಹಾರ ಕೊಡಬೇಕೆನ್ನುವ obligation ಬೇರೆ ಇಲ್ಲ. ಕೇವಲ ಈ ಮೂರು ಪಟ್ಟಣಗಳಲ್ಲಿ, ಇಲ್ಲಿ ಕಾನೂನಿನ ಬಲಾತ್ಕಾರವಿರುವುದರಿಂದ ಮತ್ತು ಇಲ್ಲಿ ಹೆಚ್ಚು ಜನ non-producers ಇರುವುದರಿಂದ ಇಲ್ಲಿ ಕೊಡಬೇಕಾಗುತ್ತದೆ. ಅವರಿಗಾಗಿ ಸ್ವಲ್ಪ ಪ್ರೊಕ್ಯೂರ್ ಮಾಡಿಕೊಂಡರೆ ಸಾಕಾಗಬಹುದು. ನಾವು ಪ್ರೊಕ್ಯೂರ್ ಮಾಡದೆ ಹೋದರೆ ಕೇಂದ್ರ ಸರ್ಕಾರದವರು ಕೊಡುವುದೇ ಇಲ್ಲ. ಏಕೆಂದರೆ ಆ ಸರ್ಕಾರದವರ ಉದ್ದೇಶ commitment ಪ್ರತಿ ವರ್ಷವೂ ಕಡಮೆಯಾಗುತ್ತಾ ಬಂದು ಇನ್ನೈದು ವರ್ಷಗಳಲ್ಲಿ ಪರದೇಶದ ಆಮದುಗಳ ಮೇಲೆ ನಾವು depend ಆಗುವುದು ತಪ್ಪಬೇಕೆಂದು. ಅದರಂತೆ ನಾವು ಡೀಕಂಟ್ರೋಲ್ ಗುರಿಯನ್ನು ಮುಟ್ಟಬೇಕಾದರೆ ಈಗಿನಿಂದಲೇ ತಳಹದಿ ಹಾಕಿಕೊಂಡು ಹೋಗಬೇಕು. ಅದಕ್ಕೆ ಇದೇ ಪ್ರಥಮ ಸೋಪಾನ. ಆದ್ದರಿಂದ ಪ್ರತಿಯೊಂದು ಊರಿಗೂ ಸರ್ಪ್ಲಸ್ ಹೋಲ್ಡರುಗಳ ಪಟ್ಟಿಯನ್ನು ಮಾಡಬೇಕು. ಅದರಲ್ಲೂ ಎಷ್ಟೋ ಜನ ತಪ್ಪಿಸಿಕೊಂಡು ಹೋಗಬಹುದು. ತಪ್ಪಿಸಿಕೊಂಡು 100 ಪಲ್ಲ ಕೊಡುವ ಕಡೆ 50 ಪಲ್ಲ ಕೊಡುವವರೂ ಎಷ್ಟೋ ಜನ ಇರುತ್ತಾರೆ. ಎಲ್ಲಿಯವರೆಗೆ ನಮ್ಮ ದೇಶದಲ್ಲಿ ಸತ್ಯ ತಾಂಡವವಾಡು

(ಶ್ರೀ ಟಿ. ಮರಿಯಪ್ಪನವರು).

ವುದಿಲ್ಲವೋ ಅಲ್ಲಿಯವರೆಗೆ ಇವೆಲ್ಲಾ ನಡೆಯುತ್ತಲೇ ಇರುತ್ತವೆ. ಇಂಥಾದ್ದಕ್ಕೆಲ್ಲಾ ಅವಕಾಶ ಕೊಟ್ಟು ಸರ್ಪ್ಲಸ್ ಹೋಲ್ಡರುಗಳ ಪಟ್ಟಿ ಮಾಡಬಹುದು. ಅವರಿಗೆ ಆಗಿರುವುದರಲ್ಲಿ 25% ರಷ್ಟು ಬಿಟ್ಟು ಉಳಿದುದನ್ನು ತೆಗೆದುಕೊಳ್ಳೋಣ. ಅವರುಗಳಲ್ಲೂ marginನಲ್ಲಿರುವ ಅಂದರೆ ಕೇವಲ 10 ಸೇರು, 20 ಸೇರು ಕೊಡಬೇಕಾಗಿರುವವರನ್ನು ಬಿಟ್ಟು, ಉಳಿದ ಮಹನೀಯರಲ್ಲೂ ಹಿಂದೆ ಅನ್ಯಾಯವಾಗಿ ಸೇರಿರುವವರನ್ನೂ ಬಿಟ್ಟು ಮತ್ತು ಕರಡು ಜಮೀನಾಗಿ ಕಡಮೆ ಬೆಳೆಯಾಗಿರುವುದನ್ನೂ ವಜಾಮಾಡಿ, ಮಿಕ್ಕವರಿಂದ ಮಾತ್ರ ಧಾನ್ಯ ಸಂಗ್ರಹಣೆಮಾಡಿದರೆ ಹೆಚ್ಚು ತೊಂದರೆಗೆ ಆಸ್ಪದವಾಗುವುದಿಲ್ಲ. ಇದರಿಂದ ಯಾರು ಹೆಚ್ಚಿಗೆ ಬೆಳೆದಿರುತ್ತಾರೋ ಅವರಿಗೆ ಹೆಚ್ಚು ಕಿರುಕುಳವಾಗುವುದಕ್ಕೆ ಅವಕಾಶವಿರುವುದಿಲ್ಲ. ತಮ್ಮ ಮನೆಗಾಗಿ 25% ರಷ್ಟು ಇಟ್ಟುಕೊಂಡು ಮಿಕ್ಕ 75% ರಷ್ಟನ್ನಾದರೂ ಸರ್ಕಾರದವರಿಗೆ ಕೊಟ್ಟು ಬಾಕಿಯವರಿಗೆ ಅನ್ನ ಹಾಕುವುದಕ್ಕೆ ಅವರಿಗೆ ಸಹಾಯಮಾಡುವುದು ಒಳ್ಳೆಯದು.

ಇನ್ನು flat rate levy ಪದ್ಧತಿಯಿಂದ ಏನು ತೊಂದರೆಯೆಂದು ಹೇಳುತ್ತೇನೆ. ಇದರಿಂದ ಯಾರಿಗೆ ಶಕ್ತಿಯಿಲ್ಲವೋ ಅವರೂ ಕೊಡಬೇಕಾಗಿ ಬರುತ್ತದೆ. ಎಷ್ಟೋ ಕಡೆ current fallows ಇರುತ್ತದೆ. ಕೆಲವರು ಹತ್ತಿ ಬೆಳೆದಿರುತ್ತಾರೆ, ಇನ್ನು ಕೆಲವರು ಕಬ್ಬು ಕಡಲೆಕಾಯಿ ಮುಂತಾದುವುಗಳನ್ನು ಬೆಳೆದಿರುತ್ತಾರೆ. ಅಂಥವರಿಗೆಲ್ಲಾ exemption ಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಅದನ್ನು ನಿರೋಧ ಮಾಡೋಣವೆಂದರೆ ಅವೂ ನಮ್ಮ ದೇಶಕ್ಕೆ ಬೇಕಾದುವೇ ಆಗಿವೆ. ಇಡೀ ಭಾರತದಲ್ಲಿ ಹತ್ತಿಗೂ ಕಬ್ಬಿಗೂ ಈಗಿನವರೆಗೂ ಕೊರತೆಯಿಲ್ಲದೆ, ನಮ್ಮ ಮೈಸೂರು ದೇಶದಲ್ಲಿಯೂ ಸಹ ಇದೇ ವರ್ಷತಾನೆ ಸಕ್ಕರೆ ವಿಷಯದಲ್ಲಿ ಸರ್ಪ್ಲಸ್ ಸ್ಥಿತಿಗೆ ಬಂದು ಹೊರಕ್ಕೆ ಕಳುಹಿಸುವಂತಾಗಿದ್ದೇವೆ. ಆದ್ದರಿಂದ ಎಲ್ಲಿಯವರೆಗೆ ಪದಾರ್ಥಗಳು shortage ಆಗಿರುತ್ತವೆ. ಅಲ್ಲಿಯವರೆಗೆ ಇದ್ದುದನ್ನೇ ವಿತರಣೆಯಿಂದ ಹಂಚಿಕೆ ಮಾಡಿಕೊಂಡು ಹೋಗುವುದೇ ಬುದ್ಧಿವಂತಿಕೆ. ಆದ್ದರಿಂದ flat rateನಲ್ಲಿ ಏಕರೇಜ್ ಆಧಾರದಮೇಲೆ ಕೊಡಬೇಕೆಂದರೆ ತೊಂದರೆಯಾಗುತ್ತದೆ. ಒಂದು ಎಕರೆಗೆ 3 ಪಲ್ಲಾ ಅಂದರೂ ಶ್ರೀನಿವಾಸಯ್ಯಂಗಾರ್ ಅಂಥವರೇನೋ ಸುಖವಾಗಿ ಕೊಟ್ಟುಬಿಡುತ್ತಾರೆ. ಅವರು ಇನ್ನೂ ಎಷ್ಟೋ ಹೆಚ್ಚಿಗೆ ಕೊಡುತ್ತಿದ್ದಾರೆ. ಆದ್ದರಿಂದ ಅಂಥವರಿಂದ ಮಾತ್ರ ತೆಗೆದುಕೊಳ್ಳುವುದನ್ನು ಬಿಟ್ಟು ಎಲ್ಲರನ್ನೂ ಕೊಡಬೇಕೆಂದು ಹೇಳುವುದು ಹೆಚ್ಚು ತೊಂದರೆಗೆ ಕಾರಣವಾಗುತ್ತದೆ.

ಅಲ್ಲದೆ ಸರ್ಪ್ಲಸ್ ಹೋಲ್ಡರುಗಳಿಂದ ತೆಗೆದುಕೊಳ್ಳುವುದರಲ್ಲೂ ಒಂದು ಪ್ರಾರ್ಥನೆ ಮಾಡುತ್ತೇನೆ: ಅವರಿಂದ ಸರಿಯಾದ ಲೆಕ್ಕ ತೆಗೆದುಕೊಂಡು ದವಸವನ್ನು ಕೇಳಿ; ಖಂಡಿತ ಎಲ್ಲರೂ ಸಂತೋಷವಾಗಿ ಕೊಡುತ್ತಾರೆ. ಅವರನ್ನು ಚೆನ್ನಾಗಿ ಗೌರವದಿಂದ ಕಾಣಿರಿ; ಅನ್ನದಾತರೆಂದು ಕರೆಯಿರಿ ಇನ್ನೂ ಗೊಬ್ಬರ, ಬೀಜ ಮುಂತಾದುವುಗಳನ್ನೊದಗಿಸಿ ಎಲ್ಲಾ ಸೌಲಭ್ಯಗಳನ್ನೂ ಕೊಡಿ. ಅವರಿಗೆ ಕಷ್ಟ ಬಂದರೆ ಪರಿಹಾರ ಕೊಡಿ. ಹೀಗೆಲ್ಲಾ ಅನುಕೂಲ ಕಲ್ಪಿಸಿ ಮಧುರ ವಾತಾವರಣ ಉಂಟುಮಾಡಿದರೆ ಸುಲಭವಾಗಿ ಧಾನ್ಯವನ್ನು ಸಂಗ್ರಹ ಮಾಡಬಹುದು. ಆದ್ದರಿಂದ ಈ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದವರು ದೀರ್ಘವಾಗಿ ಆಲೋಚನೆ ಮಾಡಲಿ. (Interruptions.) I do not want Sri. Shankarlinge Gowda to interrupt me. He seems to be very indecent in his talk.

Sri M. SHANKARLINGE GOWDA.—I rise to a point of order. He has no business to say that I am indecent. He must withdraw it.

Mr. SPEAKER.—The Member may go on.

ಶ್ರೀ ಟಿ ಮರಿಯಪ್ಪ.—ಆದ್ದರಿಂದ ವಿರೋಧಪಕ್ಷದವರಲ್ಲಿ ಒಂದು ಮನವಿಮಾಡಿಕೊಳ್ಳುತ್ತೇನೆ. ದೇಶ ಈಗ ಕಷ್ಟಕಾಲದಲ್ಲಿದೆ. ಇದು ಪಾರ್ಟಿ ಪ್ರಶ್ನೆಯಲ್ಲವೆಂದು ಇವರಾಂರವರೂ ಮೊದಮೊದಲು ಹೇಳುತ್ತಾರೆ. ಆದರೆ ಮಾತ್ರ ಕೊನೆಯಲ್ಲಿ ವಿರೋಧಿಸಿಬಿಡುತ್ತಾರೆ. ಅವರು ದಯವಿಟ್ಟು ಸಹಕರಿಸಲಿ, ಶ್ರೀ ಮಾರ್ಕ ಹುಚ್ಚೇಗೌಡರಲ್ಲಿಯೂ ನನ್ನದು ಇದೇ ಮನವಿ. ಅವರಲ್ಲೀಗ ಆಗಿರುವ ಒಂದು ಮಾರ್ಪಾಡು ನನಗೆ ಸಂತೋಷವನ್ನುಂಟುಮಾಡುತ್ತದೆ. ಅವರೀಗ ಖದ್ದರು ಬಟ್ಟೆ ಧರಿಸುವುದಕ್ಕೆ ಪ್ರಾರಂಭಿಸಿದ್ದಾರೆ. ಇನ್ನುಮೇಲೆ ಅವರೂ ನಮ್ಮ ಕಡೆಗೇ ಬರುವಂತಿದೆ. ಒಟ್ಟಿನಲ್ಲಿ ಅವರದೂ ನಮ್ಮದೂ ಒಂದೇ ಧ್ಯೇಯ—Social philosophy. ಬೊಂಬಾಯಿಗೆ ಹೋಗಿಬಂದಮೇಲೆ ಅವರೂ ಮಾರ್ಪಾಡಾಗಿರುವಂತಿದೆ. ಶ್ರೀಮಾರ್ಕ ಸಿದ್ದಪ್ಪನವರೇಕೋ ಮಾರ್ಪಾಡಾಗಿಲ್ಲ. ಶ್ರೀಮಾರ್ಕ ಇವರಾಂರವರೂ ಇನ್ನುಮೇಲೆ suit ಹಾಕುವುದನ್ನು ಬಿಟ್ಟುಬಿಡುತ್ತೇನೆಂದೂ ಪರದೇಶದ ಬಟ್ಟೆಗಳನ್ನು ಹಾಕುವುದಿಲ್ಲವೆಂದೂ ಹೇಳಿದ್ದಾರೆ. ಸ್ವದೇಶಾಭಿಮಾನ ಅವರಲ್ಲಿ ಮೂಡುವಂತಿದೆ. ಅಲ್ಲದೆ Democratic socialism ಎಂಬುದೇ ಅವರ ಗುರಿಯೂ ಆಗಿದೆ. ಆದ್ದರಿಂದ ದಯವಿಟ್ಟು ಪ್ರಾರ್ಥನೆಮಾಡಿ ಕೇಳಿಕೊಳ್ಳುತ್ತಿದ್ದೇನೆ—ಈ ಆಹಾರದ ವಿಚಾರದಲ್ಲಿ ಅವರು ಭಿನ್ನಾಭಿಪ್ರಾಯ ಸೂಚಿಸದಿರಲಿ ಎಂದು. ಈ ಕಷ್ಟಕಾಲದಲ್ಲಿ ಬಡಜನರನ್ನು ಹೇಗೆ ಕಾಪಾಡಬೇಕೆಂಬುದನ್ನು ಮಾತ್ರ ನೋಡಲಿ. ಹೋದ ವರ್ಷ ಕಷ್ಟಕಾಲವಾದ್ದರಿಂದ ನಮ್ಮ ದೇಶಕ್ಕೆ 1ಲಕ್ಷ 50 ಸಾವಿರ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಕೊಟ್ಟಿದ್ದರು. ಆದರೆ ಈ ಮಧ್ಯೆ ನಮ್ಮಲ್ಲಿ ಡಿಪೋಗಳಲ್ಲಿ ಈಗ ಕೆಲವು ತಿಂಗಳ ಹಿಂದೆ off-takes ಕಡಮೆಯಾಗಿತ್ತೆಂದು ಹೇಳಿ 50% ಕಡಮೆ ಮಾಡಿದರು. ಈಚೆಗೆ off-takes ಹೆಚ್ಚಾಗಿ ಆಹಾರದ ದಾಸ್ತಾನು ಕಡಮೆಯಾದ್ದರಿಂದ ಈಗ ಪುನಃ re-allotment ಮಾಡಿಕೊಳ್ಳಬಹುದು. ಈಗ ಸರ್ಕಾರದವರು ಅದಷ್ಟು ಹೆಚ್ಚಿಗೆ ಮೈಲೊ ದೊರಕಿಸಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಎಷ್ಟೋ ಜನರು ಇಂಥ ಕಷ್ಟಕಾಲದಲ್ಲಿ ಡಿಪೋವಿನಿಂದ 4 ಸೇರಿನಂತೆ ಧಾನ್ಯವನ್ನು ಕೊಂಡು 2ಸೇರಿನಂತೆ ಮಾರುತ್ತಿದ್ದಾರೆ. ಆದ್ದರಿಂದ ಈ ಕಷ್ಟ ಕಾಲದಲ್ಲಿ ಹೆಚ್ಚಿಗೆ ಮೈಲೋ ತರಿಸಿಕೊಟ್ಟು ಸಹಾಯಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

* ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ-ಹೆಗ್ಗಡದೇವನಕೋಟೆ) —ಮಾನ್ಯ ಮರಿಯಪ್ಪನವರು ಈಗ ತಾನೆ ಮಾತನಾಡಿದ ಆಹಾರದ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಸಭೆಗೆ ತಿಳಿಸಬಯಸುತ್ತೇನೆ. ಅವರು 5 ವರ್ಷದ ಸರಾಸರಿ ಲೆಕ್ಕ ತೆಗೆದುಕೊಂಡು ಅದರ ಮೇಲೆ levy ಮಾಡೋಣ, ಅದು ಸೂಕ್ತವೆಂದು ಹೇಳಿದರು. ಅದೇನೋ ಸರಿಯೇ. ಆದರೆ ನನ್ನ ಅಭಿಪ್ರಾಯದಲ್ಲಿ 5 ವರ್ಷದ ಸರಾಸರಿಗಿಂತ

10 ವರ್ಷದ ಸರಾಸರಿ ತೆಗೆದುಕೊಳ್ಳುವುದು ಸೂಕ್ತ ವೆಂದು ಅವರಿಗೆ ಹೇಳಬಯಸುತ್ತೇನೆ.

ಅಧ್ಯಕ್ಷರು.—ಅವರಿಗೆ ಹೇಳಬೇಕಾಗಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಇಲ್ಲಿ ಸಭೆಗೆ ತಿಳಿಸುತ್ತೇನೆ, 5 ವರ್ಷದ ಲೆಕ್ಕಮಾತ್ರ ತೆಗೆದು ಕೊಳ್ಳುದು ಸರಿಯಲ್ಲ, 10 ವರ್ಷದ್ದನ್ನು ತೆಗೆದು ಕೊಳ್ಳಬೇಕು ಎಂದು. ಏಕೆಂದರೆ ಹಿಂದೆ ಪ್ರೊಕ್ಯೂರ್ ಮೆಂಟ್ ಮಾಡುವುದರಲ್ಲಿ ವರ್ಷ ವರ್ಷಕ್ಕೂ Harvest Order ಬದಲಾವಣೆಯಾಗ ತ್ತಾ ಬಂದಿದೆ. ಈ ಕಾರಣ 10 ವರ್ಷದ ಲೆಕ್ಕ ತೆಗೆದುಕೊಂಡರೆ ಹೆಚ್ಚಿನ ತೊಂದರೆ ಯಾಗುವುದಿಲ್ಲವೆಂದು ನನ್ನ ಅಭಿಪ್ರಾಯ.

ಆದರೂ ಈ ಪದ್ಧತಿಯಲ್ಲಿ ಇನ್ನೊಂದು ಲೋಪ ಕಂಡುಬರುತ್ತದೆ. ಹಿಂದೆ ಧಾನ್ಯ ವಸೂಲುಮಾಡು ವಾಗ ಯಾವುದೋ ಒಂದು ರೀತಿಯಲ್ಲಿ ಡಿಮ್ಯಾಂಡನ್ನು ಗೊತ್ತುಮಾಡುತ್ತಿದ್ದರು. ಹಾಗೆ assessಮಾಡುವುದರಲ್ಲಿ ಮನೆಯಲ್ಲಿ ಎಷ್ಟುಜನರಿದ್ದಾರೆ, ಅವರಿಗೆ ರೇಷನ್ ಎಷ್ಟು ಕೊಡಬೇಕಾಗುತ್ತದೆ, ಅವನು ಎಷ್ಟು ಎಕರೆಯಲ್ಲಿ ಬೆಳೆದಿದ್ದಾನೆ ಎಂಬುದನ್ನೆಲ್ಲಾ ಪರಿಗಣಿಸಿ assess ಮಾಡುತ್ತಿದ್ದರು. ಅದರ ಪ್ರಕಾರ ಪ್ರೊಕ್ಯೂರ್ ಮೆಂಟ್ ನಡೆಯುತ್ತಿತ್ತು. ಹೀಗೆ ಡಿಮ್ಯಾಂಡ್ fix ಮಾಡಿರುವಾಗ ಕೆಲವರು 50 ಪಲ್ಲಾ ಗೊತ್ತು ಮಾಡಿದ್ದರೆ ಅದರಲ್ಲಿ 25 ಪಲ್ಲವನ್ನು ಮಾತ್ರ ಕೊಟ್ಟಿರ ಬಹುದು. ಇನ್ನು ಕೆಲವರು ಡಿಮ್ಯಾಂಡಿಗಿಂತಲೂ ಹೆಚ್ಚಿಗೆ ಕೊಟ್ಟಿರುವುದೂ ಉಂಟು. ಅಂಥ ಸಂದರ್ಭ ದಲ್ಲಿ ನೀವು ಈಗ ಮಾಡುವ ಆರ್ಡರ್ ಅವರಿಗೆ ತೊಂದರೆಗೆ ಕಾರಣವಾಗುತ್ತದೆ. ಯಾರು ಡಿಮ್ಯಾಂಡಿಗೆ ಸರಿಯಾಗಿ ಕೊಡದೆ ಕಳ್ಳಾಟ ಮಾಡಿಕೊಂಡು ಬಂದರೋ ಅವರಿಗೆ ಈ ಆರ್ಡರ್ ಅನುಕೂಲವಾಗಿರುತ್ತದೆ. ಡಿಮ್ಯಾಂಡಿಗಿಂತ ಜಾಸ್ತಿ ಕೊಟ್ಟು ಜಾಸ್ತಿ ದವಸವನ್ನು ಕೊಟ್ಟು ಕೊಂಡು ಯಾರು ಬಂದಿದ್ದರೋ ಅಂಥವರು ಈ ಪದ್ಧತಿಯಿಂದ ತೊಂದರೆಗೆ ಈಡಾಗುತ್ತಾರೆಂದು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ನಿಜ ಆ ಬೋನಸ್ ಕೊಡುವ ಪದ್ಧತಿಯಿದ್ದ ಕಾಲದಲ್ಲಿ ಕೆಲವರು 75 ಪಲ್ಲಾ ಡಿಮ್ಯಾಂಡ್ ಇದ್ದರೂ 100 ಪಲ್ಲಾದವರೆಗೂ ಕೊಟ್ಟು ಕೊಂಡು ಬಂದಿರುವವರಿದ್ದಾರೆ ಹಾಗೆ ಇಷ್ಟು ಪಲ್ಲಾ ಕೊಡ ಬೇಕೆಂದು ಹೇಳಿ ಡಿಮ್ಯಾಂಡ್ ಹಾಕಿ, ಅದರ ಮೇಲೆ ಯಾರು ಯಾರು ಕೊಟ್ಟಿದ್ದಾರೋ ಅವರ ವಿಷಯವನ್ನು ಬೇಕಾದರೆ ಸರ್ಕಾರದವರು ಯೋಚನೆ ಮಾಡಬಹುದು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆದ್ದರಿಂದ ಡಿಮ್ಯಾಂ ಡಿಗಿಂತ ಹೆಚ್ಚಾಗಿ ಕೊಟ್ಟಿರುವವರ ವಿಷಯದಲ್ಲಿ ಅವರ ಡಿಮ್ಯಾಂಡ್ ಎಷ್ಟಿತ್ತೋ ಅಷ್ಟನ್ನೇ ತೆಗೆದುಕೊಳ್ಳು ವುದನ್ನು ಪರಿಶೀಲನೆ ಮಾಡುವುದು ಸೂಕ್ತವೆಂದು ಹೇಳುತ್ತೇನೆ. ಈ ಒಂದು ಅಂಶವನ್ನು ಬಿಟ್ಟರೆ ಇನ್ನುಳಿದ ವಿಷಯಗಳಲ್ಲಿ ಅವರು ಹೇಳುವ ಪದ್ಧತಿ ಸರಿಯಾಗಿದೆ ಯೆಂದು ಕಾಣುತ್ತದೆ.

ಅಲ್ಲದೆ ಇವೊತ್ತಿನ ದಿವಸ ರೇಷನ್ ಪ್ರದೇಶಗ ಳಾಗಿರುವ ಈ ಮೂರು ಪಟ್ಟಣಗಳಿಗೆ ರೇಷನ್ ಹಂಚಿಕೆ ಗಾಗಿ ಈ ಸಂಗ್ರಹಣಕಾರ್ಯ ಕೈಕೊಳ್ಳಬೇಕಾಗಿದೆ ಯೆಂಬುದನ್ನು ಎಲ್ಲರೂ ಮನಗಂಡಿದ್ದೇವೆ. ಅಂದಮೇಲೆ ಈ ಮೂರು ಪಟ್ಟಣಗಳಿಗೆ ಬೇಕಾದ ಧಾನ್ಯ ಎಷ್ಟೆಂದು ನೋಡಬೇಕು ಅದಕ್ಕನುಸಾರವಾಗಿ ನಾವೆಷ್ಟು ಸಂಗ್ರ ಹಣ ಮಾಡಬೇಕಾಗುತ್ತದೆ. ನಮ್ಮಲ್ಲಿ ಉತ್ಪತ್ತಿ ಎಷ್ಟಾಗುತ್ತದೆ, ನಮಗೆ ರಾಗಿ ಎಷ್ಟುಬೇಕು, ಬತ್ತ ಎಷ್ಟು ಬೇಕು ಎಂಬುದನ್ನೆಲ್ಲಾ ಮೊದಲೇ ನಿಗದಿ ಮಾಡಿಕೊಳ್ಳುವುದು ನಮ್ಮ ಕರ್ತವ್ಯ. ಮುಖ್ಯವಾಗಿ ನಮಗೆ ಕಂಡು ಬಂದಿರುವಂತೆ ಈ ಪಟ್ಟಣಗಳಲ್ಲಿ ಹೆಚ್ಚಿಗೆ ಒದಗಿಸಬೇಕಾದದ್ದು ಬತ್ತ ಎಂದು ಹೇಳಿದರೆ ತಪ್ಪಲ್ಲ. ಮಾನ್ಯ ಮರಿಯಪ್ಪನವರೂ ಸಂಗ್ರಹಣ ಮಾಡುವುದರಲ್ಲಿ ರಾಗಿ, ಜೋಳಗಳನ್ನು ಸಂಗ್ರಹಣಮಾಡುವುದು ಬಹಳ ಕಷ್ಟವಾದದ್ದು, ಅದನ್ನು ಬೆಳೆಯುವ ಬಡರೈತರು ಗಳಿಂದ ಹೆಚ್ಚಿಗೆ ಪಡೆಯುವುದಕ್ಕೆ ಅವಕಾಶವಾಗು ವುದಿಲ್ಲವೆಂದು ಹೇಳಿರುವುದು ವಾಸ್ತವಿಕ ವಿಚಾರ. ಆದ್ದರಿಂದ ನಮಗೀಗ ಕೇಂದ್ರ ಸರ್ಕಾರದಿಂದ ಎಷ್ಟು ಬರುತ್ತದೆ, ನಮಗೆಷ್ಟು ವಾಸ್ತವವಾಗಿ ಬೇಕಾಗಿದೆ, ಎಂಬುದನ್ನೆಲ್ಲಾ ಲೆಕ್ಕಹಾಕಿಕೊಂಡು ನಾವೆಷ್ಟು ಸಂಗ್ರ ಹಣ ಮಾಡಬೇಕಾಗಿದೆ ಯೆಂಬುದನ್ನು ನೋಡಿದರೆ ಅವರು ಹೇಳಿದ ಶೇಕಡ 75ರಷ್ಟನ್ನು ಪ್ರೊಕ್ಯೂರ್ ಮಾಡಬೇಕೆಂಬುದನ್ನೂ ಕಡಮೆ ಮಾಡಬಹುದೆಂದು ತೋರುತ್ತದೆ. ಈ ಸಾರಿ ಮಳೆಯೂ ಸರಿಯಾಗಿ ಆಗದೆ ಬೆಳೆ ಬಹಳ ಕಡಮೆ ಆಗಿದೆ. ಆದ್ದರಿಂದ 5 ವರ್ಷದ ಸರಾಸರಿ ಲೆಕ್ಕಹಾಕಿ ಅಷ್ಟೇ ಕೊಡಬೇಕೆಂದು ಮಾಡಿದರೆ ಕೆಲವರಿಗೆ ಬಹಳ ತೊಂದರೆಯಾಗ ತ್ತದೆ. ಆದ್ದರಿಂದ ಇನ್ನೂ ರಿಯಾಯಿತಿ ತೋರಿಸಿ ಒಳ್ಳೆಯ ದರವನ್ನು ಗೊತ್ತುಮಾಡಿ ವಸೂಲು ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಆಹಾರ ಧಾನ್ಯ ಶೇಖರಣೆಮಾಡುವ ಪದ್ಧತಿಯಿಂದ ಯಾರು ಹೆಚ್ಚಿಗೆ ಬೆಳೆಯುತ್ತಾರೆ ಅವರು ಮಾತ್ರ ಕೊಡಬೇಕೆಂದಹಾಗಾ ಯಿತು; ಬೆಳೆಯದೆ ಇದ್ದವರಿಗೆ ಬಿಟ್ಟುಬಿಡಬೇಕೆಂದ ಹಾಗಾಯಿತು. ಆದ್ದರಿಂದ ಯಾರು ಬೆಳೆಯುತ್ತಾರೋ ಅವರಿಗೆಷ್ಟು ಕಷ್ಟವಿದೆಯೆಂಬುದನ್ನು ತಾವು ನೋಡ ಬೇಕು. ಹೆಚ್ಚಿಗೆ ಬೆಳೆಯುವುದಕ್ಕೆ ಹೆಚ್ಚಿಗೆ ಕಷ್ಟ ನಷ್ಟ ಗಳೂ ಇವೆ. ಈ ದೃಷ್ಟಿಯಿಂದ ಆತನಿಗೆ ಕೊಡುವ ದರ ವನ್ನು ಸೂಕ್ತವಾಗಿ ಹೆಚ್ಚಿಸಿಕೊಟ್ಟು ಸಹಾಯ ಮಾಡು ವುದು ಅವಶ್ಯಕವೆಂದು ಹೇಳಬಯಸುತ್ತೇನೆ. ಹಾಗಿಲ್ಲ ದಿದ್ದರೆ ದೇಶಕ್ಕೆ ಅನ್ನದಾತನೆಂದು ಯಾವನನ್ನು ಕರೆ ಯುತ್ತೇವೋ ಅವನಿಗೇ ಅನ್ಯಾಯ ಮಾಡಿದಹಾಗಾ ಗುತ್ತದೆ. ಯಾರು ನಮಗೆ ಅನ್ನಕೊಡುತ್ತಾನೋ ಅವನನ್ನೇ ತೊಂದರೆ ಗೀಡುಮಾಡುವುದು ಒಳ್ಳೆಯದಲ್ಲ. ಅದಕ್ಕೆ ಪ್ರತಿಯಾಗಿ ಆದಷ್ಟು ಉತ್ತೇಜನ ಅವನಿಗೆ ಕೊಟ್ಟು ಸಹಾಯ ಮಾಡಿದರೆ ಅವನು ಇನ್ನೂ ಅಷ್ಟು ಬೆಳೆದುಕೊಡುತ್ತಾನೆಂದು ಹೇಳಬಲ್ಲೆ.

2–30 P.M.

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಅಧ್ಯಕ್ಷರೆ, ಈಗ ಆಹಾರ ಧಾನ್ಯ ವಸೂಲಿಯ ವಿಚಾರದಲ್ಲಿ ದೇಶದಲ್ಲಿ ಯಾವ ರೀತಿ ವಸೂಲಿ ಕ್ರಮವನ್ನು ಕೈಕೊಳ್ಳಬೇಕೆಂಬ ವಿಚಾರವನ್ನು ಸರ್ಕಾರದವರು ವಿಮರ್ಶೆ ಮಾಡಿ ಸಭೆಯ ಮುಂದಿಟ್ಟಿದ್ದರೆ ಈ ಸಭೆಯ ಸಧ ಸ್ಯರು ಅದನ್ನು ವಿಮರ್ಶೆ ಮಾಡಿ ಒಂದು ಅಭಿಪ್ರಾಯ ಕೊಡುವುದಕ್ಕೆ ಅವಕಾಶವಾಗುತ್ತಿತ್ತು. ಆದರೆ ಅವರು ಮೊಗುಂ ಆಗಿ ಸಭೆಯ ಅಭಿಪ್ರಾಯವನ್ನು ಪಡೆದು ಅನಂತರ ತಮ್ಮ ಅಭಿಪ್ರಾಯವನ್ನು ಕೊಡು ವುದಕ್ಕೆ ಮನಸ್ಸು ಮಾಡಿರುವ ಹಾಗೆ ಭಾಸವಾಗುತ್ತದೆ.

ಆಹಾರ ವಸೂಲಿಯ ಸಂಬಂಧದಲ್ಲಿ ರೈತಾಪಿ ಜನರಿಗೆ ಅನುಕೂಲವನ್ನು ಹೆಚ್ಚುಮಾಡಬೇಕೆಂಬ ಉದ್ದೇಶವಿದೆ ಎಂದು ಜವಾಬ್ದಾರಿಯುತರಾದ ಮಾನ್ಯ ಸದಸ್ಯರು ಎಲ್ಲಾ ಸಂದರ್ಭಗಳಲ್ಲಿಯೂ ರೈತಾಪಿ ಜನರ ಮುಂದೆ ಹೇಳಿದ್ದಾರೆ. ಆ ಒಂದು ಮಾತನ್ನು ಗಮನದಲ್ಲಿಟ್ಟು ಕೊಂಡು ಈಗ ವಸೂಲಿ ಕ್ರಮವನ್ನು ಮುಂದುವರಿಸು ವುದಕ್ಕೆ ಪ್ರಯತ್ನಪಡಬೇಕಾಗಿದೆ. ಏಕೆಂದರೆ, ಸುಮಾರು 1942ನೆಯ ಇಸವಿಯಿಂದ ಇಂದಿನವರೆಗೆ ಹತ್ತು ವರ್ಷ

(ಶ್ರೀ ಎಸ್. ಸಿದಪ್ಪ.)

ಕಾಲ ಆಹಾರ ವಸೂಲಿ ಕ್ರಮದಿಂದ ಅನೇಕ ರೈತರು ತೊಂದರೆಗೊಳಗಾಗಿ ಅನೇಕರ ಮೇಲೆ, ಅನೇಕ ಗ್ರಾಮಗಳಲ್ಲಿ ಕೇಸುಗಳನ್ನು ಹಾಕಿ ಇದರಲ್ಲಿ ಕೆಲವರಿಗೆ ಬಹಳ ತೊಂದರೆ ಕೂಡ ಆಗಿದೆ. ನಮ್ಮ ಮಾಗಡಿ ತಾಲ್ಲೂಕಿನಲ್ಲೇ ಸುಮಾರು ನಾನೂರು ಆಹಾರ ಕೇಸುಗಳನ್ನು ಹಾಕಿದ್ದರು. ಸರ್ಕಾರದವರು ಪ್ರವೇಶಿಸಿದ್ದರಿಂದ ವಾಪಸು ತೆಗೆದುಕೊಳ್ಳಬೇಕಾಗಿ ಬಂತು. ಈ ಸಂಬಂಧವಾಗಿ ಹತ್ತು ಇಪ್ಪತ್ತು ಸಾರಿ ರೈತರು ಕೋರ್ಟುಗಳಿಗೆ ಹೋಗಬೇಕಾಗಿ ಬಂದಿದ್ದರಿಂದ ಅವರಿಗೆ ತೊಂದರೆಯಾಗಿದೆ. ಇಂಥಾ ತೊಂದರೆಗಳಾಗುತ್ತಿವೆ. ಈ ವಸೂಲಿ ಕ್ರಮದಲ್ಲಿ ಹಿಂದೆ ಇದೇ ಸಭೆಯಲ್ಲಿ ಮಾನ್ಯ ಸಚಿವರಾಗಿದ್ದ ಶ್ರೀ ಮರಿಯಪ್ಪನವರು ಕೂಡ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಹೇಳಿದ ಕೆಲವು ಸಲಹೆಗಳು ಸಾಧುವಾಗಿದ್ದುವು. ಐದು ವರ್ಷದ ಸರಾಸರಿ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಹೀಗೆ ಸರಾಸರಿಯನ್ನು ಹಾಕಿದರೆ, ಈ ವರ್ಷ ಸುಮಾರು ನಾಲ್ಕು ಐದು ಜಿಲ್ಲೆಗಳಲ್ಲಿ ಆಹಾರ ಧಾನ್ಯಗಳನ್ನು ಬೆಳೆದೇ ಇಲ್ಲ. ಇಂಥ ಸಂದರ್ಭದಲ್ಲಿ ವಸೂಲಿ ಕ್ರಮವನ್ನು ಕೈಕೊಳ್ಳುವಾಗ ಎಷ್ಟು ಕಷ್ಟ ಎಂಬುದನ್ನು ಸರ್ಕಾರದವರು ಪರ್ಯಾಲೋಚನೆ ಮಾಡಬೇಕಾಗಿದೆ. ಅಲ್ಲದೆ ಆಹಾರ ಧಾನ್ಯವನ್ನು ಕೊಂಡುಕೊಳ್ಳುವ ವಿಚಾರದಲ್ಲಿ ಯಾವ ಬೆಲೆಗೆ ಕೊಂಡುಕೊಳ್ಳುತ್ತಾರೆಂಬುದನ್ನು ಹೇಳಿಲ್ಲ. ರಾಗಿಯನ್ನು ಪಲ್ಲಕ್ಕೆ 30 ರೂಪಾಯಿಗಳಂತೆಯೂ ಬತ್ತವನ್ನು ಪಲ್ಲಕ್ಕೆ 25 ರೂಪಾಯಿಗಳಂತೆಯೂ ತೆಗೆದುಕೊಳ್ಳಲು ಸರ್ಕಾರದವರು ಮನಸ್ಸು ಮಾಡಬೇಕೆಂದು ನನ್ನ ಸೂಚನೆಯನ್ನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಕೊಡುತ್ತೇನೆ. ಏಕೆಂದರೆ ರೈತ ಬಹಳ ಕಷ್ಟಪಟ್ಟು ಆಹಾರ ಧಾನ್ಯ ಬೆಳೆದು ಸರ್ಕಾರಕ್ಕೆ ಕೊಡಬೇಕಾಗಿದೆ. ಅಲ್ಲದೆ ಕೆಲವು ಕಡೆ ಗೋಧಿ, ಕೆಲವು ಕಡೆ ಹತ್ತಿ, ಕೆಲವು ಕಡೆ ಕಬ್ಬು, ಆಲೂಗಡ್ಡೆ ತೆಂಗು ಮುಂತಾದ ಬೆಳೆಗಳನ್ನು ಬೆಳೆವ ಜನರು ಹೆಚ್ಚು ಹಣ ಸಂಪಾದನೆ ಮಾಡಿಕೊಳ್ಳುತ್ತಾರೆ. ರಾಗಿ, ಬತ್ತ ಬೆಳೆಯುವವರಿಗೆ ಹೆಚ್ಚು ಹಣ ಬರುವುದಿಲ್ಲ. ಆದಕಾರಣ ರಾಗಿ, ಬತ್ತ ಬೆಳೆಯುವ ರೈತರಿಗೆ ಹೆಚ್ಚು ಹಣ ಕೊಟ್ಟರೆ ಅವರ ಮನಸ್ಸಿಗೆ ನೋವಾಗದೆ ಆಹಾರ ದವಸವನ್ನು ರೈತರು ಕೊಡುವುದಕ್ಕೆ ಮನಸ್ಸು ಮಾಡುತ್ತಾರೆಂದು ಈ ಸಂದರ್ಭದಲ್ಲಿ ನಾನು ಸೂಚನೆ ಕೊಡಬೇಕಾಗಿದೆ. ಏನೇ ಆಗಲಿ ಸಂಸ್ಥಾನಾದ್ಯಂತವೂ ಅನೇಕ ಕಡೆಗಳಲ್ಲಿ ಕ್ಷಾಮ ಪರಿಸ್ಥಿತಿಯುಂಟಾಗಿರುವ ಈ ಸಂದರ್ಭದಲ್ಲಿ ಮೂರು ಪಟ್ಟಣಗಳಲ್ಲಿರುವ ಜನರಿಗೆ ಮಾತ್ರ ಸರ್ಕಾರದವರು ಆಹಾರ ಒದಗಿಸುತ್ತೇವೆಂದು ಹೇಳಿದ್ದಾರೆ. ಆದರೆ ಇನ್ನು ಮಿಕ್ಕ ಕಡೆ ಏನು ಮಾಡುತ್ತಾರೆಂಬುದನ್ನು ತಿಳಿಸಿಲ್ಲ.

ಆಹಾರ ವಸೂಲಿಯಲ್ಲಿ ದೊಡ್ಡ ದೊಡ್ಡ ರೈತರು ಮತ್ತು ಸರ್‌ಪ್ಲಸ್ ಹೋಲ್ಡರುಗಳಿಂದ ಮಾತ್ರ ಧಾನ್ಯ ವಸೂಲು ಮಾಡುತ್ತೇವೆಂತಲೂ ಮಿಕ್ಕವರನ್ನು ಬಿಡುತ್ತೇವೆಂದೂ ಹೇಳುವುದಾದರೆ, ಒಂದು ಊರಿನಲ್ಲಿ 90 ಜನ ಬಡವರು ಹತ್ತು ಜನ ಬೆಳೆಯುವವರು ಇರುತ್ತಾರೆ. ಈ 90 ಜನರಿಗೆ ಆಹಾರ ಒದಗಿಸುವುದಕ್ಕೆ ಸರ್ಕಾರದವರು ಖಂಡಿತವಾಗಿ ಮನಸ್ಸು ಮಾಡಬೇಕಾಗುತ್ತದೆ. ಏಕೆಂದರೆ ಇದುವರೆಗೂ ಫೇರ್‌ಪ್ರೈಸ್ ಡಿಪೋಗಳಲ್ಲಿ ಹ್ಯಾಯವರಿಗೆ ದವಸ ಕೊಡುತ್ತೇವೆಂದು ಹೇಳಿ ಅವರಿಗೆ ಸಮರ್ಪಕವಾದ ರೀತಿಯಲ್ಲಿ ಆಹಾರ ಒದಗಿಸಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇನ್ನು ಮುಂದೆ ಈ ರೀತಿ ಮಾಡುವುದು ಸಾಧ್ಯವಿಲ್ಲ. ಏಕೆಂದರೆ ಅನೇಕ ತಾಲ್ಲೂಕುಗಳಲ್ಲಿ ಹಳ್ಳಿಗಳಲ್ಲಿ ಕ್ಷಾಮ ಪರಿಸ್ಥಿತಿ ಉಂಟಾಗಿರುವುದು ಮಾನ್ಯ ಸಭಾ ಸದಸ್ಯರಿಗೂ ಸರ್ಕಾರದವರಿಗೂ ಗೊತ್ತಿರುವ ವಿಷಯ. ಆದಕಾರಣ ಈ ಸಂದರ್ಭದಲ್ಲಿ ಆಹಾರವನ್ನು ಎಲ್ಲರಿಗೂ ಕೊಡಬೇಕಾಗುತ್ತದೆ. ಅಂದಮೇಲೆ ಕಮ್ಯಾಂಡಿಯರಿಂಗ್ ಪದ್ಧತಿ ಇದ್ದಹಾಗಾಗುತ್ತದೆ.

[Sri A. BHEEMAPPA NAIK—In the Chair.]

ದವಸವನ್ನು ವಸೂಲುಮಾಡಿದ ಮೇಲೆ, ಪ್ರಜೆಗಳಿಗೆ ಜವಾಬ್ದಾರಿಯಾದ ಸರ್ಕಾರವಾಗಿರುವಾಗ ಎಲ್ಲಾ ಪ್ರಜೆಗಳ ವಿಷಯವನ್ನೂ ಗಮನದಲ್ಲಿಟ್ಟುಕೊಂಡು, ಹೊರಗಿನಿಂದ ಎಷ್ಟು ತರಿಸಬೇಕು, ಇಲ್ಲಿ ಎಷ್ಟು ವಸೂಲು ಮಾಡಬೇಕೆಂದು ಗೊತ್ತುಮಾಡಬೇಕು. ಏನೇ ಆಗಲಿ ನಮ್ಮ ಸಂಸ್ಥಾನದಲ್ಲಿ ಕೊಂಡುಕೊಳ್ಳುವ ಧಾನ್ಯಕ್ಕೆ ಹೆಚ್ಚು ಬೆಲೆ ಕೊಡುವ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ವಿರೋಧಿಸುವುದಿಲ್ಲ. ಏಕೆಂದರೆ, ಅವರಿಂದ ತಂದು ಮಾರುವಾಗ ಹೆಚ್ಚಿನ ಬೆಲೆಗೆ ತಂದು ಅದರಿಂದಾಗುವ ನಷ್ಟ ಸರ್ಕಾರದ ಮೇಲೆ ಬೀಳುತ್ತದೆ. ಹೀಗಿರುವಾಗ ಇಲ್ಲಿ ರೈತರಿಗೆ ಹೆಚ್ಚು ಬೆಲೆ ಕೊಡುವುದರಲ್ಲಿ ಸರ್ಕಾರಕ್ಕೆ ನಷ್ಟವಾಗುವುದಿಲ್ಲ. ಅಲ್ಲಿಂದ ತರಿಸಲು ತಗಲತಕ್ಕ ವ್ಯಾಗನ್ ಖರ್ಚು ಉಳಿಯುತ್ತದೆ; ಅಲ್ಲದೆ ಹೊರಗಿನಿಂದ ದವಸವನ್ನು ತರುವುದಕ್ಕಾಗಿ ಇಲ್ಲಿನ ಅಧಿಕಾರಿಗಳನ್ನು ಕಳುಹಿಸುವುದಕ್ಕಾಗುವ ಖರ್ಚು ಉಳಿಯುತ್ತದೆ. ಇದನ್ನೆಲ್ಲಾ ಸರ್ಕಾರ ಆಲೋಚನೆ ಮಾಡಬೇಕು. ರೈತರ ಮೇಲೆ ಇನ್ನೂ ಕಮ್ಯಾಂಡಿಯರಿಂಗ್ ಉಳಿದುಕೊಂಡಿದೆ ಎಂದು ರೈತರಿಗೆ ಅರ್ಥವಾಗುತ್ತದೆ. ಆದುದರಿಂದ ಸರ್ಕಾರದವರು ನಮ್ಮ ಆಹಾರ ನೀತಿಯನ್ನು, ವಸೂಲಿ ಕ್ರಮ, ಎಷ್ಟು ತರಿಸುತ್ತಾರೆ. ಬಡ ಜನರಿಗೆ ಒದಗಿಸುವುದಕ್ಕೆ ಏನು ವ್ಯವಸ್ಥೆ ಮಾಡುತ್ತಾರೆ ಎಂಬ ಅಂಶವನ್ನೆಲ್ಲಾ ಸಭೆಯ ಮುಂದಿಟ್ಟಿದ್ದರೆ, ನಾವು ಅದರ ಮೇಲೆ ನಮ್ಮ ಅಭಿಪ್ರಾಯ ಕೊಡುವಾಗ ಕೆಲವು ವಿಷಯಗಳನ್ನು ತಿಳಿಸುವುದಕ್ಕೆ ಅವಕಾಶವಾಗುತ್ತಿತ್ತು. ಹಾಗೆ ಮಾಡದೆ ಮೊಗುಂ ಆಗಿ ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಮಾಡಿದ್ದೇವೆಂದು ದೇಶಕ್ಕೆ ತಿಳಿಸುವುದಕ್ಕೆ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲವೆಂದು ಅರ್ಥವಾಗುತ್ತದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಈ ಸಭೆಯ ಮೂಲಕ ಸರ್ಕಾರಕ್ಕೆ ತಿಳಿಸುವುದಿಷ್ಟೆ: ಆಹಾರವನ್ನು ಬೆಳೆದು ಕೊಡುವ ಜನರಿಗೆ ಹೆಚ್ಚು ಬೆಲೆಯನ್ನು ಕೊಡುವುದು ನ್ಯಾಯ. ಸಂಸ್ಥಾನಾದ್ಯಂತ ಬಡಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಶೇಖರಣೆ ಮಾಡುವುದಲ್ಲದೆ, ಹೊರಗಿನಿಂದ ತರಿಸಿ, ಯಾವ ಹಳ್ಳಿಯಲ್ಲಿಯೂ ಆಹಾರ ಒದಗಿಸಿಲ್ಲವೆಂಬ ಕೂಗು ಬಾರದೆಯಿರುವ ರೀತಿಯಲ್ಲಿ ಏರ್ಪಾಡು ಮಾಡುವುದಾಗಿ ಇನ್ನು ಮುಂದೆ ಒಂದು ವರ್ಷ ಕಾಲದವರೆಗೆ ಸರ್ಕಾರ ಭರವಸೆ ಕೊಡಬೇಕಾಗುತ್ತದೆ. ಆಭರವಸೆಯನ್ನು ಕೊಡುವುದಲ್ಲದೆ, ಪೂರ್ತಿಯಾಗಿ ದೇಶದ ಆಹಾರ ಭದ್ರತೆ ಮತ್ತು ಕ್ಷಾಮ ಪರಿಸ್ಥಿತಿಯಿರುವ ಜಿಲ್ಲೆಗಳ ಭದ್ರತೆಯನ್ನು ಕಾಪಾಡುವುದು ಸರ್ಕಾರದವರ ಮಡಿಲಿಗೆ ಬಿದ್ದಿದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಎಲ್ಲಾ ಪ್ರಜೆಗಳಿಗೂ ಆಹಾರವನ್ನೊದಗಿಸುವ ವ್ಯವಸ್ಥೆಯನ್ನು ಯಾವ ರೀತಿ ಮಾಡುತ್ತಾರೆಂಬುದನ್ನು ಅವರು ಸಭೆಗೆ ತಿಳಿಸಬೇಕೆಂದು ಹೇಳಿ, ನನಗೆ ಈ ರೀತಿ ನಾಲ್ಕಾರು ವಿಷಯಗಳನ್ನು ತಿಳಿಸಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನೂ ಸದಸ್ಯರನ್ನೂ ವಂದಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಮಾನ್ಯ ಆಹಾರ ಸಚಿವರು ಅವರ ಹೇಳಿಕೆಯಲ್ಲಿ

ಈ ಕಂಟ್ರೋಲ್ ಪದ್ಧತಿಯನ್ನು ಆದಷ್ಟು ಜಾಗ್ರತೆ ತೆಗೆದು ಹಾಕಬೇಕೆಂಬುದೇ ಸರ್ಕಾರದ ನೀತಿ ಎಂದು ಅಪ್ಪಣೆ ಕೊಡಿಸಿದ್ದಾರೆ. ಇದು ತುಂಬಾ ಅಭಿನಂದನೀಯವಾದ ವಿಚಾರ ಸರಣಿ. ಏಕೆಂದರೆ ಕಂಟ್ರೋಲ್ ಸಂಪೂರ್ಣವಾಗಿ ಹೋಗಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಸಂಸ್ಥಾನಾದ್ಯಂತ ಕಂಟ್ರೋಲ್ ಹೋಗಬೇಕೆಂಬ ಆಸೆ ಎಲ್ಲರಿಗೂ ಇವೆ. ಪ್ರತಿಯೊಬ್ಬ ರೈತ, ಜಹಗೀರ್ದಾರರೇ ಅಲ್ಲ, ಸಣ್ಣ ಪುಟ್ಟ ಜಮೀನ್ದಾರರು ಕೂಡ ಕಂಟ್ರೋಲಿನಿಂದಾದ ಕಿರುಕುಳಗಳನ್ನು ಬಹಳ ವರ್ಷಗಳಿಂದ ಅನುಭವಿಸಿ ಎಂದಿಗೆ ಈ ಕಂಟ್ರೋಲು ಹೋದೀತೋ ಎಂಬ ಆಸೆಯನ್ನಿಟ್ಟು ಕೊಂಡಿದ್ದಾರೆ. ಆದರೆ ವಸ್ತು ಸ್ಥಿತಿ ಏನಾಗಿದೆ? ಅವರು ಅಪ್ಪಣೆ ಕೊಡಿಸಿರುವ ಹಾಗೆ, ಸಂಪೂರ್ಣವಾಗಿ ಕಂಟ್ರೋಲ್ ತೆಗೆಯುವುದಕ್ಕೆ ದೇಶದಲ್ಲಿ ಮಳೆ ಬೆಳೆಯಿಲ್ಲದೆ, ಪರಿಸ್ಥಿತಿ ಸರಿಯಾಗಿಲ್ಲದೇ ಯಿರುವಾಗ, ಕೆಲವು ಕಡೆ ಕ್ಷಾಮ ವಿರುವ ಕಾರಣ ಅವರಿಗೆ ಸರ್ಕಾರದವರು ಆಹಾರವನ್ನು ಕೊಡಬೇಕಾಗಿದೆ. ಅಲ್ಲದೆ ಪ್ರಜೆಗಳಿಗೆ ಆಹಾರವನ್ನು ಹೊರಗಿನಿಂದ ತರಿಸಲು, ಆಹಾರದ ಬೆಲೆ ಏರಿರುವುದರಿಂದ ಒಂದಕ್ಕೆ ನಾಲ್ಕರಷ್ಟು ಹಣ ಕೊಟ್ಟು ತರಿಸಿ, ಸರ್ಕಾರದವರು ನಷ್ಟ ಮಾಡಿಕೊಂಡು ಜನರಿಗೆ ಕಡಮೆ ಬೆಲೆಗೆ ಕೊಡಬೇಕಾಗಿದೆ. ಹೊರಗಿನಿಂದ ಬರುವ ಆಹಾರ ಕೊಂಡ ಬೆಲೆಗೇ ಕೊಡಬೇಕಾದರೂ ರೂಪಾಯಿಗೆ ಒಂದು ಸೇರಿನಂತೆ ಮಾರಬೇಕಾಗುತ್ತದೆ. ಈ ತೊಂದರೆಯಿರುವುದರಿಂದ ಒಂದಲ್ಲ ಒಂದು ರೀತಿಯಲ್ಲಿ ಸಂಸ್ಥಾನದಲ್ಲಿ ಆಹಾರ ಶೇಖರಣೆ ಮಾಡಬೇಕಾಗಿದೆಯೆಂಬ ವಿಚಾರವನ್ನು ಮಂತ್ರಿಗಳು ಹೇಳಿದ್ದಾರೆ. ಇದನ್ನು ನಾವು ಒಪ್ಪಲೇ ಬೇಕಾಗುತ್ತದೆ. ಹಾಗೆ ಶೇಖರಣೆ ಮಾಡುವಾಗ ಇದುವರೆಗೆ ಶೇಖರಣೆ ಮಾಡತಕ್ಕ ಪದ್ಧತಿಯಲ್ಲಿ ಏನೇನು ತೊಂದರೆಗಳಿವೆಯೋ ಅವನ್ನು ನಿವಾರಣೆಮಾಡಿ ಯಾವ ರೀತಿಯಲ್ಲಿಯೂ ರೈತರಿಗೆ ತೊಂದರೆ ಅಥವಾ ಕಿರುಕುಳವಿಲ್ಲದ ರೀತಿಯಲ್ಲಿ ಮಾಡಲು ಯಾವ ನೀತಿ ಅನುಸರಿಸಬೇಕೆಂಬುದು ಈಗಿರುವ ಸಮಸ್ಯೆ. ಇದಕ್ಕೆ ಉತ್ತರವಾಗಿ ಸಚಿವರ ಹೇಳಿಕೆಯಲ್ಲಿ 'ಲೆವಿ' ಪದ್ಧತಿಯ ಮೂಲಕ ಶೇಖರಣೆಮಾಡಬೇಕೆಂದು ಹೇಳಿದ್ದಾರೆ. 'ಲೆವಿ' ಪದ್ಧತಿ ಏನೆಂಬುದನ್ನು ನಿರ್ದಿಷ್ಟವಾಗಿ ಅವರು ಹೇಳಲಿಲ್ಲವೆಂದು ಕೆಲವರು ಮಾನ್ಯ ಸದಸ್ಯರು ಆಕ್ಷೇಪಣೆ ಮಾಡಿದರು. ಇದಕ್ಕೆ ಶ್ರೀಗಳಾದ ವೀರಣ್ಣಗೌಡರೂ ಮರಿಯಪ್ಪನವರೂ ಯಾವುದಾದರೂ ನಿರ್ದಿಷ್ಟವಾದ ಪ್ರಮಾಣದಲ್ಲಿ ದವಸವನ್ನು ರೈತರು ಸರ್ಕಾರಕ್ಕೆ ಕೊಡಬೇಕೆಂದು ಹೇಳಿದರು. ಇದು ಸರಿಯಾದ ಅರ್ಥವೆಂದು ನನ್ನ ಭಾವನೆ. ಹಿಂದಿನ ಪದ್ಧತಿಗೂ ಇದಕ್ಕೂ ವ್ಯತ್ಯಾಸವೇನೆಂದರೆ, ಇದುವರೆಗೆ Procurement by assessment ಇತ್ತು; ಇದರಲ್ಲಿ ರೈತರಿಗೆ ತೊಂದರೆ, ಕಿರುಕುಳ ಇತ್ತು. ನನ್ನ ಜಮೀನಿನಲ್ಲಿ ಎಕರೆಗೆ ಹತ್ತು ಪಲ್ಲ ಬತ್ತ ನಾಲ್ಕು ಪಲ್ಲ ರಾಗಿ ಬೆಳೆದರೆ, ಪಟೇಲರು ಶ್ಯಾನುಭೋಗರು ಬಂದು, ನೀನು ಹತ್ತು ಪಲ್ಲ ಬತ್ತ ನಾಲ್ಕು ಪಲ್ಲ ರಾಗಿ ಬೆಳೆದಿದ್ದೀಯ ಎಂದು ಹೇಳಬೇಕು. ಅನಂತರ. ನನ್ನ ಸಂಸಾರದ ಜನರಿಗೆ ಸರ್ಕಾರ ಗೊತ್ತು ಮಾಡಿರುವಂತೆ ತಲೆಗೆ ಆರು ಔನ್ಸಿನಂತೆಯೋ ಇನ್ನೆಷ್ಟೋ ಬೇಕಾಗುವುದನ್ನು ಲೆಕ್ಕಾಚಾರಹಾಕಿ ಗೊತ್ತುಮಾಡಿ ಅದನ್ನು ನನಗೆ ಬಿಟ್ಟು ಬಾಕಿ ದವಸವನ್ನು ಸರ್ಕಾರಕ್ಕೆ ತೆಗೆದುಕೊಳ್ಳುತ್ತಿದ್ದರು. ಇದರಿಂದ ಕಿರುಕುಳ ಹೆಚ್ಚೆಂಬುದನ್ನು ವಿವರಿಸಬೇಕಾಗಿಲ್ಲ, ಸದಸ್ಯರೆಲ್ಲರಿಗೂ ದೇಶಕ್ಕೂ ಗೊತ್ತಿರುವ ವಿಷಯ. ಈ ರೀತಿಯ ಕಿರುಕುಳ ಯಾವ ರೀತಿ ನಿವಾರಿಸುವುದು ಎಂಬ ಬಗ್ಗೆ ಒಂದು ಸಲಹೆ ಸಭೆಯ ಮುಂದಿದೆ. ನಿರ್ದಿಷ್ಟ ಪ್ರಮಾಣದಲ್ಲಿ ದವಸವನ್ನು ರೈತರು ಸರ್ಕಾರಕ್ಕೆ ಕೊಡಬೇಕೆಂದು ಇದರಿಂದ ಸರ್‌ಪ್ಲಸ್ ಹೋಲ್ಡರುಗಳಿಗೆ ಇದುವರೆಗಿದ್ದ ಕಿರುಕುಳ ತಪ್ಪುತ್ತದೆಂದೂ ಸೂಚಿಸಿದ್ದಾರೆ. ಎಕರೆಗೆ ಎಷ್ಟೇ ಬೆಳೆಯಲ್ಲಿ ಸರಾಸರಿ ನಾಲ್ಕಾರು ವರ್ಷದಿಂದ ರೈತರು ಎಷ್ಟು ಕೊಡುತ್ತಿದ್ದರೋ ಅದರಲ್ಲಿ ಮುಕ್ಕಾಲು ಭಾಗದಷ್ಟು, ಎಂದರೆ ನೂರು ಪಲ್ಲ ಕೊಡುತ್ತಿದ್ದರೆ ಎಪ್ಪತ್ತೈದು ಪಲ್ಲ ಕೊಡಬೇಕೆಂದು ಹೇಳಿದರು. ಯಾವ ಲೆಕ್ಕಾಚಾರದಮೇಲೆ ಹೀಗೆ ಕೊಡಬೇಕೆಂದು ಹೇಳುತ್ತಿದ್ದಾರೋ ನನಗೆ ಚೆನ್ನಾಗಿ ಅರ್ಥವಾಗಿಲ್ಲ. ಅಂತೂ ಯಾವುದಾದರೂ ಒಂದು ಗೊತ್ತಾದ ಮೊತ್ತವನ್ನು ಕೊಡಬೇಕು. ಆದರೆ ಶೇಕಡ 75 ರಷ್ಟು ಕೊಡಿ ಎಂದು ಹೇಳುವುದಕ್ಕೆ ಏನು ಆಧಾರವಿದೆ, 50 ರಷ್ಟು ಕೊಡಿ ಎಂದು ಹೇಳುವುದಕ್ಕೆ ಏನು ಆಧಾರ ಎಂಬುದು ಗೊತ್ತಿಲ್ಲ. ಹೀಗೆ ಏನೂ ಆಧಾರವಿಲ್ಲದೆ ಮುಕ್ಕಾಲು ಭಾಗ ಕೊಡಿ ಎಂದು ಹೇಳುವುದರಲ್ಲಿ ಅರ್ಥ ಗೊತ್ತಾಗಲಿಲ್ಲ.

ಒಬ್ಬ ಸದಸ್ಯರು.—ಹಿಂದಿನ ಸರಾಸರಿ ಡಿಮ್ಯಾಂಡಿನ ಲೆಕ್ಕದ ಆಧಾರದ ಮೇಲೆ.

ಶ್ರೀ ಡಿ. ದೇವರಾಜ ಅರಸ್.—ಶ್ರೀ ಮರಿಯಪ್ಪನವರು ಮತ್ತು ವೀರಣ್ಣಗೌಡರು, ನೂರು ಪಲ್ಲದಲ್ಲಿ ಮುಕ್ಕಾಲು ಭಾಗ ಕೊಡಿ ಇನ್ನು ಕಾಲುಭಾಗ ಇಟ್ಟುಕೊಳ್ಳಿ ಎಂದು ಹೇಳುತ್ತಾರೆ. ಇದಕ್ಕೆ ಏನು ಆಧಾರ?

ಇನ್ನೊಂದು ವಿಷಯ ಮಂತ್ರಿಗಳು ಅಪ್ಪಣೆಕೊಟ್ಟರು. ಸಂಸ್ಥಾನದಲ್ಲಿ ಸ್ಟ್ಯಾಚುಟರಿ ರೇಷನಿಂಗ್ ಜಾರಿಯಲ್ಲಿರುವ ಕೋಲಾರ ಚಿನ್ನದಗಣಿ, ಬೆಂಗಳೂರು, ದಾವಣಗೆರೆ, ಈ ಮೂರು ಪ್ರದೇಶಗಳಿಗೆ ಆಹಾರವನ್ನು ಸರ್ಕಾರದವರು ಹಂಚುವ ಪದ್ಧತಿಯನ್ನನುಸರಿಸಿಕೊಂಡು ಬಂದಿದ್ದಾರೆ, ಬಾಕಿ ಕಡೆ ಈ ಪದ್ಧತಿ ಇಲ್ಲ ಎಂದು ಅವರು ಅಪ್ಪಣೆಕೊಟ್ಟರು. ಹೀಗೆ ಈ ಪ್ರದೇಶಗಳಿಗೆ ಒಂದು ವರ್ಷಕ್ಕೆ ಬೇಕಾದಷ್ಟು ಧಾನ್ಯ ಸುಮಾರು 12 ಲಕ್ಷ ಪಲ್ಲ ಬತ್ತವೆಂತಲೂ ಎರಡು ಲಕ್ಷ ಪಲ್ಲ ಮಿಲೆಟ್ಸ್ ಎಂತಲೂ ಅವರು ಹೇಳಿದರು. ಇದನ್ನು ಸಂಸ್ಥಾನದಲ್ಲಿ ಶೇಖರಣೆಮಾಡಬೇಕು. ಹೊರಗಿನಿಂದ ತರಿಸತಕ್ಕ ಧಾನ್ಯಗಳ ಜೊತೆಗೆ ಇಷ್ಟನ್ನು ಇಲ್ಲಿ ಶೇಖರಣೆ ಮಾಡಬೇಕು ಎಂದು ಅಪ್ಪಣೆ ಕೊಡಿಸಿದ್ದಾರೆ. ಇದೊಂದು ಆಧಾರವಾಗಿ ಇಟ್ಟುಕೊಳ್ಳೋಣ. ಸರ್ಕಾರಕ್ಕೆ ಈ 12 ಲಕ್ಷ ಪಲ್ಲ ಬತ್ತ, ಎರಡು ಲಕ್ಷ ಪಲ್ಲ ರಾಗಿ ಜೋಳ ಸಂಸ್ಥಾನದ ಸರಪ್ಲಸ್ ಹೋಲ್ಡರುಗಳಿಂದ ಬರಬೇಕಾಗುತ್ತದೆ. ಇದರ ಜೊತೆಗೆ ಹೊರಗಿನಿಂದ ತರಿಸಿಕೊಂಡು ಹಂಚಬೇಕಾಗುತ್ತದೆ. 12 ಲಕ್ಷ ಪಲ್ಲವನ್ನು ಕೊಡುವವರು ಎರಡೂವರೆ ಲಕ್ಷ ಜನ ಸರ್‌ಪ್ಲಸ್ ಹೋಲ್ಡರುಗಳಿರಬೇಕು. ಇದನ್ನು ಯಾವ ಆಧಾರದ ಮೇಲೆ ಲೆಕ್ಕ ಹಾಕಿರುವುದು?

ಶ್ರೀ ಎಸ್. ಸಿದ್ದಪ್ಪ.—ನೂರು ಪಲ್ಲಕ್ಕೆ ಎಪ್ಪತ್ತೈದು ಪಲ್ಲ ಕೊಡಬೇಕೆಂದು ಹೇಳಿದರಲ್ಲ ಅದೇ ಆಧಾರ.

ಶ್ರೀ ಡಿ. ದೇವರಾಜಅರಸ್.—ಇನ್ನೂ ಕಡಮೆ ಏಕೆ ಕೊಡಬಾರದು? ನೀವು 75 ಪಲ್ಲ ಕೊಡಬೇಕೆಂದು ಹೇಳಿದಿರಿ. ಲೆಕ್ಕಾಚಾರಹಾಕಿ 12 ಲಕ್ಷ ಪಲ್ಲ ಬರಬೇಕಾದರೆ 75 ಪಲ್ಲ ಕೊಡಬೇಕೆಂದು ತೋರಿಸಿದರೆ ಒಪ್ಪೋಣ. ಆದರೆ ಹಾಗಿಲ್ಲದೆ ಇನ್ನೂ ಕಡಮೆ ಕೊಡಬೇಕಾದರೆ ಲೆಕ್ಕಾಚಾರದ ಪ್ರಕಾರ ಕಡಮೆ ತೆಗೆದುಕೊಳ್ಳಿ. ತಮಗೆ 2ಲಕ್ಷ ಪಲ್ಲ ಬೇಕಾಗಿರುವಾಗ ರಾಗಿ, ಜೋಳ, ಇವುಗಳನ್ನು ಶೇಕಡ 75 ಪಲ್ಲಗಳಂತೆ ವಸೂಲು ಮಾಡಬೇಕೆಂದು ಹೇಳಿದ್ದರ ಅರ್ಥ ಏನೋ ನನಗೆ ಆಗುತ್ತಿಲ್ಲ. ಹಿಂದೆ 12 ಲಕ್ಷ ಪಲ್ಲಗಳನ್ನು ಒದಗಿಸಬೇ

(ಶ್ರೀ ಡಿ. ದೇವರಾಜ ಅರಸ್).

ಕಾಗಿದ್ದ ಕಾಲದಲ್ಲೇ 60 ಪಲ್ಲ ಕೂಡ ವಸೂಲು ಮಾಡಿಲ್ಲ. ತಮಗೆ ಬೇಕಾಗಿದ್ದರೆ ತಾವು ಶೇಕಡ 80 ರಷ್ಟನ್ನು ಬೇಕಾದರೂ ತೆಗೆದುಕೊಳ್ಳಿ. ತಮಗೆ ಮಿರೋ 2 ಲಕ್ಷ ಪಲ್ಲವಲ್ಲ ಅದಕ್ಕೆ ಇನ್ನೂ ಹೆಚ್ಚಿಗೆ ಬೇಕಾದರೂ ತರಿಸಿಕೊಳ್ಳಿ. ತಮ್ಮ ಬಫರ್‌ಸ್ಟಾಕ್ ಎಷ್ಟಿರಬೇಕೋ ಅಷ್ಟನ್ನೂ ಮಾಡಿಕೊಳ್ಳಿ; ಅದಕ್ಕೆ ನಾನು ಕೂಡ ಬೇಂದು ಹೇಳುವುದಿಲ್ಲ. ತಾವು ವರ್ಷಾದ್ಯಂತವೂ ಎಲ್ಲ ಕಡೆಯೂ ಫೇರ್‌ಪ್ರೈಸ್ ಡಿಪೋಗಳನ್ನು ತೆರೆಯಬೇಕಾದಂಥ ಆವಶ್ಯಕತೆ ಕೂಡ ತಮಗಿರುವುದಿಲ್ಲ. ಬೇರೆಕಡೆ ದವಸಧಾನ್ಯಗಳು ಸರಾಗವಾಗಿ ಸಿಕ್ಕುತ್ತಿರುವಾಗ ಯಾರು ತಾನೆ ನಿಮ್ಮ ಫೇರ್‌ಪ್ರೈಸ್ ಡೀಪೋಗಳಿಗೆ ಬಂದು ಕೊಳ್ಳುತ್ತಾರೆ? ರೈತನಾದವನಂತೂ ಖಂಡಿತ ನಿಮ್ಮ ಡಿಪೋಗಳಿಗೆ ಬರುವುದಿಲ್ಲ ಈ ಕಾರಣದಿಂದ ತಾವು ಎಲ್ಲಾ ಕಾಲದಲ್ಲೂ, ಎಲ್ಲ ಕಡೆಯೂ ಈ ಫೇರ್‌ಪ್ರೈಸ್ ಡಿಪೋಗಳನ್ನು ತೆಗೆಯಬೇಕಾಗಿರುತ್ತದೆ ದು ಹೇಳುವುದಕ್ಕೆ ಅವಕಾಶವಿಲ್ಲ.

Mr. CHAIRMAN.—You have already taken 8 minutes. Will you conclude it early?

ಶ್ರೀ ಡಿ. ದೇವರಾಜ ಅರಸ್.—If the Chair kindly permits me another five minutes, I shall be able to finish my speech.

Mr. CHAIRMAN.—Yes.

ಶ್ರೀ ಡಿ. ದೇವರಾಜ ಅರಸ್.—ಆದುದರಿಂದ ತಾವು ಇದನ್ನೇ ಒಂದು ಬೇಸಿಸ್ ಆಗಿ ಇಟ್ಟುಕೊಂಡು ಆ ಲೆಕ್ಕಾಚಾರದ ಪ್ರಕಾರ ರಾಗಿ, ಜೋಳವನ್ನು ವಸೂಲು ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಈಗಾಗಲೇ ನನ್ನ ಮಾನ್ಯ ಮಿತ್ರರನೇಕರು ತಿಳಿಸಿರುವಂತೆ ಅನೇಕ ಕಡೆ ಖುಷ್ಕಿ ಬೆಳೆ ನಷ್ಟವಾಗಿದೆ. ಕೆಲವು ಕಡೆ 4—6 ಆಣೆ ಬೆಳೆ ಇದ್ದರೆ ಹೆಚ್ಚಾಯಿತು. ಅಥವಾ ತಾವು ಒಂದುವೇಳೆ ನಾಲ್ಕಾಣೆ ಬೆಳೆಯಾಗಿರುವ ಕಡೆ ರೈತರು ಅರ್ಜಿಹಾಕಿಕೊಳ್ಳಬೇಕೆಂದು ಹೇಳುವುದಾದರೆ, ಅದು ಎಷ್ಟು ಜನರಿಗೆ ಸಾಧ್ಯವಾದೀತು? ಇದು ಬಹಳ ಕಷ್ಟತರಕ್ಕೆ ದಾರಿ ಹಾಕತಕ್ಕದ್ದಾಗಿದೆ. ತಾವೇನಾದರೂ ಒಂದು ಕನಿಷ್ಠ ಪರಿಮಿತಿಯನ್ನು ಗೊತ್ತುಮಾಡಿ ಅಮಲ್ದಾರುಗಳಿಗೆ ಈ 75 ಪಲ್ಲ ಧಾನ್ಯ ವಸೂಲಮಾಡಬೇಕೆಂದು ಹೇಳಿ ಕಡೆಗೆ 25 ಪಲ್ಲ ಸಹ ವಸೂಲಾಗದಂಥ ಕಷ್ಟ ನಿಷ್ಠೂರಗಳ ಪ್ರಮೇಯವನ್ನು ಮಾತ್ರ ಖಂಡಿತ ತಾವು ತಂದೊಡ್ಡಬೇಡಿ ಎಂದು ನಾನು ಸರ್ಕಾರದವರಲ್ಲಿ ಮನವಿಮಾಡಿಕೊಳ್ಳುತ್ತೇನೆ. ಅಲ್ಲದೆ ತಾವು ರೈತರಿಗೆ ಬಿಟ್ಟುಕೊಡುವ ದವಸವನ್ನು ಸರ್ಕಾರದವರು ನಿಗದಿಮಾಡಿದ ಧಾರಣೆಗೆ ಅತನು ಸಂಸ್ಥಾನದಲ್ಲಿ ಎಲ್ಲಿ ಬೇಕಾದರೂ ನಿರಾತಂಕವಾಗಿ ಮಾರಾಟಮಾಡಿಕೊಳ್ಳಲು ಅವಕಾಶ ಕೊಡಬೇಕು. ಹಾಗೆ ತಾವು Free ಸ್ಕೋಪನ್ನು ಕೊಡದೆಹೋದರೆ ಪುನಃ ಅದೇ ಬ್ಲಾಕ್‌ಮಾರ್ಕೆಟ್ ರಗಳೆಗಳೂ, ಪೋಲೀಸರಿಂದ ತೊಂದರೆ ಇತ್ಯಾದಿ ನಾನಾ ತೊಂದರೆಗಳುಂಟಾಗಲು ಅವಕಾಶವಾಗುತ್ತದೆ. ಆದ್ದರಿಂದ ತಾವು Free movementಗೆ ಅವಕಾಶವನ್ನು ಕೊಡಬೇಕು.

ಇಲ್ಲಿಯತನಕ ಮಾತನಾಡಿರತಕ್ಕ ಸದಸ್ಯರಾರೂ ಈ ಧಾರಣೆ ಹೆಚ್ಚಿಸುವ ವಿಚಾರವಾಗಿ ವಿರೋಧಾಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದಿಲ್ಲ. ಆದಕಾರಣ ನಾನು ಹೇಳಬೇಕಾಗಿರುವುದು ಇಷ್ಟೇ—ಈಗ ತಾವು ರೈತರಿಗೆ ಎಷ್ಟು ಪ್ರಮಾಣದಲ್ಲಿ ಭತ್ತಕ್ಕೆ ಬೆಲೆಗಳನ್ನು ಕೊಡುತ್ತಿದ್ದೀರೋ ಅದೇ ಪ್ರಮಾಣದಲ್ಲಿ ಬೆಲೆಯನ್ನು ತಾವು ಎಲ್ಲ ಧಾನ್ಯಕ್ಕೂ ಕೊಡಬೇಕೆಂದು ತಿಳಿಸುತ್ತೇನೆ. ಈಗ ತಾವು ಭತ್ತ ಒಂದನೇ ದರ್ಜೆಯದಕ್ಕೆ ಪಲ್ಲ ಒಂದಕ್ಕೆ 21 ರೂ. ನಂತೆಯೂ, 2ನೇ ದರ್ಜೆಯದಕ್ಕೆ ಪಲ್ಲ ಒಂದಕ್ಕೆ 19 ರೂಪಾಯಿ ಪ್ರಕಾರವೂ ಕೊಡುತ್ತಿದ್ದೀರಿ. ಅದೇ ಪ್ರಕಾರ ರಾಗಿ, ಜೋಳಗಳಿಗೂ ಸಹ ತಾವು ಪಲ್ಲಕ್ಕೆ 25 ರ ಪಾಯಿಗಳಂತೆ ಧಾರಣೆ ಹೆಚ್ಚು ಕೊಡಬೇಕೆಂದು ತಿಳಿಸುತ್ತೇನೆ. ಈಗ ತಾವು ಪಲ್ಲ ರಾಗಿಗೆ 20 ರೂಪಾಯಿಗಳ ದರವನ್ನು ನಿಗದಿಮಾಡಿದ್ದೀರಿ. ಅದನ್ನು 25 ರೂಪಾಯಿಗಳಿಗೆ ಹೆಚ್ಚಿಸಬೇಕು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ……..

ಶ್ರೀ ಎಲ್. ಸಿದ್ದಪ್ಪ.—ನಮ್ಮ ಪಾರ್ಟಿಯವರು ಪಲ್ಲಕ್ಕೆ 30 ರೂಪಾಯಿಗಳಂತೆ ಕೊಡಬೇಕೆಂದು ತಿಳಿಸಿದ್ದಾರೆ.

ಶ್ರೀ ಡಿ. ದೇವರಾಜ ಅರಸ್. ನನ್ನ ಸಲಹೆಯೂ ಕೂಡ ಕನಿಷ್ಠಪಕ್ಷ ಪಲ್ಲಕ್ಕೆ 25 ರೂಪಾಯಿಗಳು ಇರಬೇಕೆಂದು. ಸರ್ಕಾರದವರು ಒಂದನೇ ದರ್ಜೆ ಭತ್ತಕ್ಕೆ ಏನೊಂದು ಪರಮಾವಧಿ ಬೆಲೆಯನ್ನು ನಿರ್ಧರಿಸುತ್ತಾರೋ ಆ ಬೆಲೆಯನ್ನು ರಾಗಿ ಮತ್ತು ಜೋಳಕ್ಕೂ ಸಹ ನಿಗದಿಮಾಡಬೇಕೆಂದು ನಾನು ತಿಳಿಸುತ್ತೇನೆ. ಮಾನ್ಯ ಸದಸ್ಯರಲ್ಲಿ ಅನೇಕರಿಗೆ ಈ ಬಾರ್ಟರ್ ಸಿಸ್ಟಂ ಗೊತ್ತಿರಬಹುದು. ಆ ಪದ್ಧತಿ ಪ್ರಕಾರ ಗ್ರಾಮಾಂತರ ಪ್ರದೇಶಗಳಲ್ಲಿ ಈಗ್ಲೂ ಒಂದು ಪಲ್ಲ ರಾಗಿ ಕೊಟ್ಟರೆ ಒಂದೂವರೆ ಪಲ್ಲ ಭತ್ತ, ಅದಲ್ಲೂ, ಕೊಯಮತ್ತೂರು ಸಣ್ಣ ಭತ್ತವೇ ಸಿಕ್ಕುತ್ತದೆ. ಇಂದು ಈ ರೀತಿ ತೆಗೆದುಕೊಂಡು ಹೋಗುತ್ತಿದ್ದಾರೆ. ಇದೊಂದು ಉತ್ಪ್ರೇಕ್ಷೆಯೇನೂ ಅಲ್ಲ. ಮತ್ತೆ ಕೆಲವು ಕಡೆ ಒಂದು ಪಲ್ಲ ರಾಗಿಗೆ ಒಂದು ಪಲ್ಲ ಭತ್ತ ಸಿಕ್ಕುತ್ತದೆ. ಖುಷ್ಕಿ ಬೆಳೆ ತೆಗೆಯುವುದರಲ್ಲೂ ಎಷ್ಟು ಕಷ್ಟವಿದೆಯೆಂಬ ವಿಚಾರ ತಮಗೂ ಗೊತ್ತಿದೆ. ಅದನ್ನು ನಾನು ಪುನಃ ವಿಮರ್ಶೆ ಮಾಡಬೇಕಾದ ಅಗತ್ಯವೇನೂ ಇಲ್ಲ. ಈ ಕಾರಣಗಳಿಂದ ನಾನು ಸರ್ಕಾರದವರು ಭತ್ತಕ್ಕೆ ಯಾವ ಪ್ರಮಾಣದ ಬೆಲೆ ಕೊಡುತ್ತಾರೋ ಅದೇ ಪ್ರಮಾಣದ ಬೆಲೆಯನ್ನು ರಾಗಿ, ಜೋಳಕ್ಕೂ ನಿರ್ಧರಮಾಡಬೇಕೆಂದು ತಿಳಿಸುತ್ತೇನೆ.

ಶ್ರೀ ಎಲ್. ಸಿದ್ದಪ್ಪ.—ಹಾಗೆ ನಿಮ್ಮ ಹುಣಸೂರು ತಾಲ್ಲೂಕಿನಲ್ಲಿ ಇದ್ದರೂ ಇರಬಹುದು.

Sri D. DEVARAJ URS.—Not only in Hunsur Taluk but throughout Mysore Distict. I am personally aware off. I do not know about Shimoga District. The Hon'ble Member may kindly enlighten me on the matter. ಆದರೆ ಹೀಗೆ ರೇಟನ್ನು ಹೆಚ್ಚಿಸಿಕೊಡಬೇಕೆಂದು ಕೇಳುವಾಗ ಇದಕ್ಕೆ ಸರ್ಕಾರದವರು ಒಂದು ಅಡ್ಡಿಯನ್ನು ತಂದೊಡ್ಡಬಹುದು. ಅದೇನೆಂದರೆ, ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಪ್ರಶ್ನೆ, ಆದ್ದರಿಂದ ನಾವು ಇಲ್ಲಿ ಧಾರಣೆವಾಸಿಗಳನ್ನು, ಅವರ ಅನುಮತಿ ಪಡೆಯದೆ ಏಕ್‌ದಂ ಹೆಚ್ಚಿಸುವುದಕ್ಕೆ ಆಗುವುದಿಲ್ಲ ಎಂದು. ಅದಕ್ಕೆ ನಾನು ಸಲಹೆಮಾಡುವುದಿಷ್ಟೇ: ಈ ಅಸೆಂಬ್ಲಿಯ ಮಾನ್ಯ ಸದಸ್ಯರುಗಳೆಲ್ಲರೂ ಬಹಳ ಒತ್ತಾಯಮಾಡಿ ಒಂದು ನಿರ್ಣಯವನ್ನು ಮಾಡಿದ್ದೇ ಆದರೆ ನಾವು ಅವರ ತೆ ನಡೆಯಲೆ ಬೇಕಾಗಿದೆ ಅದಕ್ಕಾಗಿ ಧಾರಣೆ ಹೆಚ್ಚಿಸಲು ಅನುಮತಿ ಕೊಡಬೇಕೆಂದು ನಮ್ಮ ಸರ್ಕಾರದವರು

ಕೇಂದ್ರ ಸರ್ಕಾರಕ್ಕೆ ಮನವಿಮಾಡಬಹುದು. ಆ ರೀತಿ ಒತ್ತಾಯ ಹಾಕತಕ್ಕದ್ದು ನ್ಯಾಯವಾಗಿದೆ. ಆ ಪ್ರಕಾರ ಅವರೂ ಕೂಡ ಇದಕ್ಕೆ ಒಪ್ಪಲೇಬೇಕಾಗಿದೆ. ಹಾಗೆ ಅವರು ಒಪ್ಪುತ್ತಾರೆಂದು ನಾನು ಹೇಳುವುದಕ್ಕೆ ಕಾರಣ, ನಮ್ಮ ಅಕ್ಕಪಕ್ಕದ ನೆರೆ ಪ್ರಾಂತಗಳಲ್ಲಿ ಅವರು ಭತ್ತದ ಧಾರಣೆಯನ್ನು ಪಲ್ಲಕ್ಕೆ 26,27,28 ರೂಪಾಯಿಗಳಿಗೆ ಹೆಚ್ಚಿಸಲು ಅನುಮತಿಯನ್ನು ನೀಡಿರುವಾಗ ಇಂದು ನಾವು ಕೇಳತಕ್ಕ ಸಂದರ್ಭದಲ್ಲಿ ಇದು ನ್ಯಾಯವಾಗಿಯೂ ಇದೆ, ಇದನ್ನು ಒಪ್ಪಲೇಬೇಕಾಗಿದೆ ಎಂಬುದನ್ನು ಅವರು ತಿಳಿದ ಕೊಳ್ಳಲಾರರೇನು? ಅದಕ್ಕಾಗಿ ನಮ್ಮ ಸರ್ಕಾರಕ್ಕೆ ಈ ಮಾನ್ಯ ಸಭೆಯು ಸದಸ್ಯರೆಲ್ಲರೂ ಬೆಂಬಲನೀಡಬೇಕೆಂದೂ, ಆ ರೀತಿ ಒಂದು ನಿರ್ಣಯಮಾಡಿ, ಅದನ್ನು ಇಂಡಿಯಾ ಸರ್ಕಾರದವರ ಮುಂದಿಟ್ಟು, ನಮ್ಮ ಸರ್ಕಾರ ಧಾರಣೆವಾಸಿಗಳನ್ನು ಹೆಚ್ಚುಮಾಡಬೇಕೆಂದು ಸಲಹೆಮಾಡಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಅಧ್ಯಕ್ಷರೇ, ನನ್ನ ಮಾನ್ಯ ಮಿತ್ರರನೇಕರು ಈಗಾಗಲೇ ಈ ಆಹಾರ ಸಂಗ್ರಹಣ ಕಾರ್ಯದಲ್ಲಿ ಬಹಳವಾಗಿ ಮಾತನಾಡಿರುತ್ತಾರೆ. ಆದರೆ ನಾನು ಈ ವಿಚಾರದಲ್ಲಿ ಕೇವಲ ಒಂದೆರಡು ನನ್ನ ಸಲಹೆಗಳನ್ನು ಮಾತ್ರ ಕೊಡಬೇಕೆಂದು ಬಯಸುತ್ತೇನೆ. ಸರ್ಕಾರಕ್ಕೆ ರೈತನು ತಾನು ಸರಾಸರಿ ಬೆಳೆದ ದವಸ ಧಾನ್ಯಗಳಲ್ಲಿ ಶೇಕಡ 75ರಷ್ಟನ್ನು ಕೊಡಲು ಸಾಧುವಾದುದಾಗಿದೆಯೆಂಬ ಅಭಿಪ್ರಾಯ ಎಲ್ಲರಲ್ಲೂ ಇದ್ದಹಾಗೆ ತೋರುತ್ತಿದೆ. ಆದರೆ ಈ ವರ್ಷ ಮಳೆ ಸಕಾಲಕ್ಕೆ ಬಾರದೆ ಅಭಾವ ಉಂಟಾಗಿದ್ದುದರ ದೆಸೆಯಿಂದಲೂ ಮತ್ತು ಸಾಕಷ್ಟು ಗೊಬ್ಬರ-ಗೋಡುಗಳನ್ನು ಹಾಕಲು ರೈತನಿಗೆ ಯತ್ನವಿಲ್ಲದೆ ಹೋಗಿರುವುದರಿಂದಲೂ ಈ ಸಾರ್ತಿ ಭತ್ತದಬೆಳೆ ನಾನಾ ಪ್ರದೇಶಗಳಲ್ಲೂ ಸಹ ಬಹಳವಾಗಿ ನಲುಗಿ ಹೋಗಿದೆ. ಒಂದು ರೂಪಾಯಿನ ಬೆಳೆ ಯಾವ ಪ್ರಾಂತದಲ್ಲೂ ಆಗಿಲ್ಲ. ಈಗ ನಾನು ಈ ಬಗ್ಗೆ ಹೇಳಬೇಕೆಂದಿರುವ ನನ್ನ ಅಭಿಪ್ರಾಯವೇನೆಂದರೆ, ತಾವೀಗ ದಾವಣಗೆರೆಯಲ್ಲಿ ಕಂಟ್ರೋಲನ್ನಿಟ್ಟು ಅದರ ಅಜುಬಾಜು ಪ್ರದೇಶದಲ್ಲಿ ಕಂಟ್ರೋಲನ್ನು ತೆಗೆದ ಹಾಕಿದುದರಿಂದ ಈ ದಿವಸ ಅಲ್ಲಿ ಬಿಳಿ ಜೋಳದ ಅಭಾವ ತಪ್ಪಿಹೋಗಿ ಜನರಿಗೆ ಅದು ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುತ್ತಿದೆ. ತಾವೀ ದಿವಸ ಬೆಂಗಳೂರು ನಗರ ಮತ್ತು ಕೆ. ಜಿ. ಎಫ್. ಈ ಪ್ರದೇಶಗಳಲ್ಲಿ ಎಂದರೆ ಶೇಕಡ 30ರಷ್ಟು ಪ್ರದೇಶದಲ್ಲಿ ಆಹಾರ ಹತೋಟಿಯನ್ನು ಜಾರಿಯಲ್ಲಿಟ್ಟುಕೊಂಡು ಇನ್ನುಳಿದ 70-75ರಷ್ಟು ಪ್ರದೇಶದಲ್ಲಿ ಇದನ್ನು ತಪ್ಪಿಸಿರುವ ಕಾರಣ ದೇಶದಲ್ಲಿರುವ ಜನರೆಲ್ಲಾ ಬಹಳ ಸಂತೋಷವನ್ನುಂಟುಮಾಡಿದೆ. ಈ ಹಿಂದೆ ಜನರು ನಾನಾ ತೆರದ ಕಷ್ಟಗಳಿಗೆ ಒಳಗಾಗಿ ಸ್ಥಳೀಯ ಅಧಿಕಾರಿಗಳ ಕಿರುಕುಳಗಳನ್ನು ತಡೆಯಲಾರದೆ ಬಹಳವಾಗಿ ನೊಂದು ಹೋಗಿದ್ದರು. ಈ ದಿವಸ ಆಡಳಿತ ನಡೆಸುತ್ತಿರುವ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಕಂಟ್ರೋಲು ಬಿಸಿಯನ್ನು ಆದಷ್ಟು ಕಡಮೆಮಾಡುತ್ತಾ ಬಂದಿರುವ ಕಾರಣ ಇಂದು ಜನರು ಆ ಹಿಂದಿನ ಕಷ್ಟವನ್ನೆಲ್ಲಾ ಮರೆಯುತ್ತಾ ಬರುತ್ತಿದ್ದಾರೆ. ಇಂದಿರತಕ್ಕ ಸರ್ಕಾರ ಪ್ರಗತಿಗಾಮಿಯಾದ ಮಾರ್ಗದಲ್ಲಿ ಕೆಲಸ ಮಾಡುತ್ತಿರುವುದರಿಂದ ದೇಶ ಒಳ್ಳೆಯ ಸ್ಥಿತಿಯಲ್ಲಿದೆ. ಆಡಳಿತ ಸುವ್ಯವಸ್ಥಿತವಾಗಿ ನಡೆದುಕೊಂಡು ಬರುತ್ತಿದೆ. ಇದು ಬಹಳ ಒಳ್ಳೆಯದು. ಹೀಗಿರುವಾಗ ನಾವು ಮುಂದೆ ಜಾರಿಗೆ ತರಬೇಕೆಂದು ಆಲೋಚನೆಮಾಡುತ್ತಿರುವುದು ದೇಶದ ಜನರಿಗೆ ಹೇಗಿರಬೇಕು, ಅದು ಹೇಗಿದ್ದರೆ ಅವರಿಗೆಲ್ಲಾ ಸಮಾಧಾನ ಮತ್ತು ಸಂತೋಷಕರವಾಗಿರುತ್ತದೆ ಎಂಬುದನ್ನು ಆಲೋಚನೆಮಾಡಿ ಒಂದು ತೀರ್ಮಾನಕ್ಕೆ ಬರತಕ್ಕದ್ದು ನಮ್ಮ ಎಲ್ಲರ ಇಂದಿನ ಕರ್ತವ್ಯವಾಗಿರುತ್ತದೆ. ನಮ್ಮನ್ನು ಆರಿಸಿ ಚುನಾವಣೆ ಮಾಡಿ ಕಳುಹಿಸಿರತಕ್ಕ ಜನರ ಹಿತವನ್ನು ನಾವು ಕಾಯಬೇಕಾಗಿದೆ. ಅವರ ಉಪಕಾರಕ್ಕೆ ಪ್ರತ್ಯುಪಕಾರ ನೀಡಬೇಕು. ಅವರು ನಮ್ಮೆಲ್ಲರನ್ನೂ ಕೊಂಡಾಡಬೇಕು, ಅಂಥ ರೀತಿಯಲ್ಲೇ ನಾವಿಗನ್ನು ತೀರ್ಮಾನಮಾಡಬೇಕಾಗಿದೆ. ನಾವು ಮಾಡತಕ್ಕ ತೀರ್ಮಾನವು ದೇಶದ ಜನರನ್ನು ಆನಂದಸಾಗರದಲ್ಲಿ ತೇಲಾಡುವಂತೆ ಮಾಡತಕ್ಕದ್ದಾಗಿರಬೇಕು. ತಾವು ಬೇಕಾದರೆ 30 ಭಾಗ ಬಿಟ್ಟು 70 ಭಾಗವನ್ನೇ ತೆಗೆದುಕೊಳ್ಳಿ. ಆದರೆ ಧಾರಣೆ ವಿಚಾರದಲ್ಲಿ ರಾಗಿ, ಜೋಳ ಮತ್ತು ಭತ್ತ ಇವುಗಳಿಗೆಲ್ಲಕ್ಕೂ ಒಂದೇ ಧಾರಣೆ ಇರಬೇಕು. ಅಂದರೆ ನಣ್ಣ ಭತ್ತಕ್ಕೆ ಪಲ್ಲ 26 ರೂಪಾಯಿ, ದಪ್ಪಕ್ಕೆ 25 ರೂಪಾಯಿ. ಆದರೆ ತಾವು ಭತ್ತಕ್ಕೆ ಸ್ವಲ್ಪ ಜಾಸ್ತಿ ಧಾರಣೆ ಮಾಡಿದರೂ ಚಿಂತೆಯಿಲ್ಲ. ಅದಕ್ಕೆ ಹೆಚ್ಚಿನ ದುಡ್ಡು ಕೊಟ್ಟು ತಿನ್ನುವ ಜನರಿದ್ದಾರೆ. ಆದರೆ ರಾಗಿ ಬಡವರ ಆಹಾರ. ಇದಕ್ಕೆ ಬೆಲೆ ಸ್ವಲ್ಪ ಕಡಮೆ ಇರಬೇಕಾದದ್ದು ನ್ಯಾಯ.

ಇನ್ನು ಎರಡನೆಯದಾಗಿ, ಇಂದು ದೇಶದಲ್ಲಿ ಒಂದು ಒಳ್ಳೆಯ ಭಾವನೆ ಎಲ್ಲೆಲ್ಲಿಯೂ ಮೂಡುತ್ತಿದೆ. ಈ ದಿವಸ ಈ ವಿಚಾರವನ್ನು ಸರ್ಕಾರದವರು ಬಹಳ ಜಾಣತನದಿಂದ ಸಭೆಯ ಮುಂದೆ ತಂದಿದ್ದಾರೆ. ಅವರು ಹೀಗೆ ಮಾಡಲು ಅವರ ಉದ್ದೇಶವೇನಿರಬಹುದೆಂದರೆ—ಎಲ್ಲಾ ಸದಸ್ಯರೂ ಇದನ್ನು ದೀರ್ಘವಾಗಿ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಅವರವರೇ ಗುದ್ದಾಟಮಾಡಿಕೊಂಡು ಬರಲಿ, ತದನಂತರ ಬೇಕಾದರೆ ಅವರು ಅಲ್ಲಲ್ಲೇ ಕೆಲವು ಪದಗಳನ್ನು ಬೇಕಾದರೆ ತಿದ್ದುಪಡಿ ಮಾಡಿಕೊಂಡು ಅದನ್ನು ಅನುಮೋದಿಸಿದರಾಯಿತು ಎಂಬ ಭಾವನೆಯಿಂದ ಹೀಗೆ ಮಾಡಿರಬಹುದು. ಸಣ್ಣ ಭತ್ತಕ್ಕೆ ಪಲ್ಲ ಒಂದಕ್ಕೆ 28 ರೂಪಾಯಿಗಳಂತೆ ನಿಗದಿ ಮಾಡಿದರೆ ದಪ್ಪಭತ್ತಕ್ಕೆ ಸ್ವಲ್ಪ ಕಡಮೆಯಾಗಿ ಮಾಡಬೇಕಾಗುತ್ತದೆ. ಇಷ್ಟನ್ನು ಹೇಳಿ ನಾನು ನನ್ನ ಭಾಷಣವನ್ನು ಪೂರೈಸುತ್ತೇನೆ.

Mr. CHAIRMAN.—Sir. K. Lakkappa, can you finish your Speech now or would you like to speak after lunch or would you commence now and speak after lunch?

ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಸ್ವಾಮಿ, ಇದುವರೆಗೂ ನನ್ನ ಮಿತ್ರರನೇಕರು ಮಾಡಿರತಕ್ಕ ಭಾಷಣಗಳನ್ನು ಕೇಳಿದ್ದರಲ್ಲಿ ಎಲ್ಲರ ಅಭಿಪ್ರಾಯಗಳೂ ಧಾನ್ಯ ಶೇಖರಣೆ ಬಗ್ಗೆ ಒಂದೇ ಆಗಿರುವಂತೆ ಕಾಣುತ್ತಿದೆ. ಮತ್ತು ಈ ಧಾನ್ಯ ಶೇಖರಣೆಯ ವಿಚಾರದಲ್ಲಿ ಸರ್ಕಾರದವರ ಅಭಿಪ್ರಾಯವೂ ಸಹ ಇದೇ ರೀತಿಯಾಗಿರಬಹುದೆಂದು ತೋರುತ್ತದೆ. ಆದರೆ ಈ ದಿವಸ ನಮ್ಮ ಮುಂದೆ ಇರತಕ್ಕದ್ದು ಈ ಧಾನ್ಯ ಶೇಖರಣೆ ಬಗ್ಗೆ ನಾವು ಯಾವ ನೀತಿಯನ್ನು ಅನುಸರಿಸಬೇಕೆಂಬ ಒಂದು ದೊಡ್ಡ ಸಮಸ್ಯೆ. ಅನೇಕ ಜನರು ಅನೇಕ ರೀತಿಯಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಶ್ರೀಮಾನ್ ಮರಿಯಪ್ಪನವರೂಸಹ ಈ ಧಾನ್ಯಶೇಖರಣೆ ಕ್ರಮ ಹೇಗಿರಬೇಕೆಂಬ ಬಗ್ಗೆ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

Sri H. SIDDAVEERAPPA.—Let the Hon'ble Member speak in the Microphone Sir, I cannot hear him.

Sri K. LAKKAPPA.—There is something wrong with the Microphone Sir. ಶ್ರೀ ಮರಿಯಪ್ಪನವರು ಧಾನ್ಯ ಶೇಖರಣೆಯ ಬಗ್ಗೆ ಸಾಧುವಾದ ಮಾರ್ಗ ಯಾವುದೆಂಬುದನ್ನು ತಿಳಿಸಿದ್ದಾರೆ. ಅದೇ ಸಾಧುವಾದ ಮಾರ್ಗವೆಂದು ನಾನೂ ಒಪ್ಪಿಕೊಳ್ಳುವವನಾಗಿದ್ದೇನೆ. ಆದರೆ ಧಾನ್ಯವಸೂಲಿ ಕಾಲದಲ್ಲಿ ನಾವು ಕೆಲವರಿಗೆ ರಿಯಾಯಿತಿ ತೋರಿಸಬೇಕೆಂದು ತಿಳಿಸಿದ್ದಾರೆ. ಹಿಂದಿದ್ದ ಕಂಟ್ರೋಲ್ ಆರ್ಡರ್‌ಗಳ ಪ್ರಕಾರ ಅಲ್ಪಸ್ವಲ್ಪ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದವರಿಗೆಲ್ಲ ಹಾಗೆ ಒಂದು ವಸೂಲಿ ರಿಯಾಯಿತಿಯನ್ನು ಕೊಡುತ್ತಿದ್ದರು. ಅದನ್ನು ಅವರು ಗಮನದಲ್ಲಿಟ್ಟುಕೊಂಡೇ ಅದನ್ನು ಹೇಳಿರಬೇಕು. ಆದರೆ ಅವರು ಸಾಮಾನ್ಯವಾಗಿ 10, 20, 25 ಸೇರು ಕೊಡಬೇಕಾದ ಜನರನ್ನು ಎಕ್ಸೆಂಪ್ಟ್ ಮಾಡಬೇಕೆಂದು ಹೇಳಿದ್ದಾರೆ. ಆದರೆ ಅದು ಅಷ್ಟು ಸೂಕ್ತವಾದ ಮಾರ್ಗವೆಂದು ಹೇಳಲಾರೆ. ಇದು ಪೂರಾ ಕಡಮೆ ಆಯಿತು. ಆದ್ದರಿಂದ ಈ ರಿಯಾಯಿತಿಯನ್ನು ಒಂದು ಪಲ್ಲ ಮಾತ್ರ ಅದಕ್ಕೆ ಕಡಮೆಯಾಗಿ ಯಾರು ಯಾರು ಸರ್ಕಾರಕ್ಕೆ ದವಸವನ್ನು ಕೊಡುತ್ತಿದ್ದರೋ ಅಂಥವರಿಗೆಲ್ಲ ಕೊಡಬೇಕೆಂದು ನಾನು ಸೂಚಿಸುತ್ತೇನೆ. ಹಾಗಿಲ್ಲದೆ ಅವರು ತಿಳಿಸಿದ ಪ್ರಕಾರ 5 ಸೇರಿಗೆ ಮೇಲ್ಪಟ್ಟು ಕೊಡುತ್ತಿದ್ದವರೆಲ್ಲರೂ ಈಗಲೂ ಕೊಡಬೇಕೆಂದರೆ, ಉದಾಹರಣೆಗೆ 30 ಸೇರು ಧಾನ್ಯಕೊಡತಕ್ಕ ಒಬ್ಬ ರೈತ ಅದನ್ನು ಸರ್ಕಾರಿ ಡಿಪೋಕ್ಕೆ ಕೊಡತಕ್ಕ ಉದ್ದೇಶದಿಂದ 10–15 ಮೈಲಿ ದೂರದಿಂದ ಒಂದು ಗಾಡಿ ಬಾಡಿಗೆ ಮಾಡಿಕೊಂಡು, ಒಂದು ದಿವಸದ ತನ್ನ ಉದ್ಯೋಗವನ್ನು ಕೆಡಿಸಿಕೊಂಡು ಬರಬೇಕಾಗುತ್ತದೆ. ಹೀಗೆ ಅನೇಕರಿಗೆ ಇದರಿಂದ ತೊಂದರೆಗಳಾಗುತ್ತಿವೆ.

Mr. CHAIRMAN.—We will take it after lunch. We will meet again at 3–30 P.M.

The house rose for Lunch at Three of the Clock and reassembled at Thirty-two Minutes past Three of the Clock.

[MR. SPEAKER in the Chair].

Sri J. MOHAMED IMAM (Jagalur).—I want to bring to your kind notice the general discomfort we are undergoing in the course of this session. Practically, during the lunch hour, we have no place to sit. The whole roofing is leaky and we have no accommodation to take lunch or coffee, as can be seen under the present condition. Nor have we got a proper lounge. There is some lounge farther off, which is very difficult to find out. It is fit to be used as a sitting room rather than as a lounge. Some arrangement is necessary to be made somewhere near the Assembly Hall.

Mr. SPEAKER.—We will see tomorrow.

ಶ್ರೀ ಕೆ. ಲಕ್ಕಪ್ಪ.—ಶ್ರೀಮಾನ್ ಟಿ. ಮರಿಯಪ್ಪನವರು ತಮ್ಮ ಸಲಹೆಗಳನ್ನು ಕೊಡತಕ್ಕ ಕಾಲದಲ್ಲಿ ಒಂದು ಸೂಚನೆಯನ್ನು ಕೊಟ್ಟರು: ಸರ್ಪ್ಲಸ್ ಹೋಲ್ಡರುಗಳ ಪಟ್ಟಿಯನ್ನು ತಯಾರು ಮಾಡುವ ಕಾಲದಲ್ಲಿ 10 ಸೇರಿಗೆ ಒಳಪಟ್ಟು ಯಾರು ರಾಗಿ ಕೊಡುತ್ತಿದ್ದರೋ, ಹಾಗೆಯೇ ಬತ್ತದ ವಿಚಾರದಲ್ಲಿ 25 ಸೇರಿಗೊಳಪಟ್ಟು ಯಾರು ಯಾರು ಕೊಡುತ್ತಿದ್ದರೋ ಅವರನ್ನೆಲ್ಲಾ ಸರ್‌ಪ್ಲಸ್ ಹೋಲ್ಡರ್ಸ್ ಲಿಸ್ಟಿನಿಂದ ಬಿಟ್ಟುಬಿಡಬೇಕೆಂದು ಹೇಳಿ ಸಲಹೆಮಾಡಿದರು. ಆ ರೀತಿ ಕಡಮೆ ದವಸ ಕೊಡುತ್ತಿದ್ದವರನ್ನು ಕೈಬಿಡುವುದು ಒಂದು ಸೂಕ್ತವಾದ ಸಲಹೆಯಾಗಿದೆ. ಆದರೆ ಇದರ limitನ್ನು ಇಷ್ಟು ಕೆಳಗಿಡದೆ ಸುಮಾರು ಒಂದು ಪಲ್ಲದವರೆಗೂ ಯಾರು ಯಾರು ಕೊಡುತ್ತಿದ್ದರೊ ಅವರುಗಳಿಗೆಲ್ಲಾ ವಿನಾಯಿತಿಕೊಡುವುದು ಇನ್ನೂ ಸೂಕ್ತವಾದುದು ಎಂದು ನಾನು ಸೂಚಿಸಲು ಇಷ್ಟಪಡುತ್ತೇನೆ. ಏಕೆಂದರೆ ಹಿಂದಿನ ಪ್ರೊಕ್ಯೂರ್‌ಮೆಂಟ್ ಆರ್ಡರ್ ಪ್ರಕಾರ 30–40-50 ಸೇರುಗಳನ್ನು ಯಾರು ಕೊಡುತ್ತಿದ್ದರೋ ಅವರು ಈ ದವಸವನ್ನು ಸರ್ಕಾರದ ಡಿಪೋವಿಗೆ ಕೊಡುವುದಕ್ಕೆ 10 15 ಮೈಲಿಗಳ ದೂರದಿಂದಲೂ ಬಂದು ಕೊಡಬೇಕಾಗುತ್ತದೆ. ಇದರಿಂದ ಅವರಿಗೆ ಬಹಳ ತೊಂದರೆಯಾಗುತ್ತದೆ. ಕೇವಲ 30 ಸೇರಿಗೆ 5-6 ರೂಪಾಯಿಗಳು ಆಗಬಹುದು—ಅಂಥಾದಕ್ಕೆ 5-6 ರೂಪಾಯಿ ಬಾಡಿಗೆ ಕೊಟ್ಟು ತಂದುಕೊಡಬೇಕಾದ ಪ್ರಮೇಯ ಬರುತ್ತದೆ. ಆದ್ದರಿಂದ ಈಗ ಹೆಚ್ಚಿಗೆ ಆಹಾರದ ಅವಶ್ಯಕತೆಯಿಲ್ಲದಿರುವಾಗ, ಒಂದು ಪಲ್ಲದ ಮೇಲ್ಪಟ್ಟು ಯಾರು ಯಾರು ಸರ್ಪ್ಲಸ್ ಹೋಲ್ಡರುಗಳಾಗಿದ್ದರೋ ಅವರಿಂದ ಮಾತ್ರ ತೆಗೆದುಕೊಳ್ಳುವುದು ಒಳ್ಳೆಯ ಮಾರ್ಗ. ಈ ಉದಾರ ನೀತಿಯಿಂದ ಬಹುಜನ ಸಣ್ಣ ಪುಟ್ಟ ಸರ್ಪ್ಲಸ್ ಹೋಲ್ಡರುಗಳಿಗೆ ಬಹಳ ಉಪಕಾರಮಾಡಿದ ಹಾಗಾಗುತ್ತದೆಂದು ನಾನು ಸೂಚಿಸಬಯಸುತ್ತೇನೆ.

ಎರಡನೆಯದಾಗಿ ಪ್ರೊಕ್ಯೂರ್‌ಮೆಂಟ್ ಮಾಡತಕ್ಕ ಸಮಯದಲ್ಲಿ ದವಸದ ಬೆಲೆಯನ್ನು ಹಿಂದೆ ಕೊಡುತ್ತಿದ್ದುದಕ್ಕಿಂತಲೂ ಜಾಸ್ತಿಯಾಗಿ ಕೊಡಬೇಕೆಂದು ನನ್ನ ಮಿತ್ರರು ಸೂಚಿಸಿದ್ದಾರೆ. ಅದು ನಿಜವಾಗಿಯೂ ಸಾಧುವಾದದ್ದು ಮತ್ತು ಅತ್ಯಾವಶ್ಯಕವಾದದ್ದೆಂದು ಭಾವಿಸುತ್ತೇನೆ. ಕೆಲವರು ಒಂದು ಶಂಕೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ, ಹಾಗೆ ಬೆಲೆ ಜಾಸ್ತಿ ಮಾಡುವ ಪಕ್ಷಕ್ಕೆ issue price ಕೂಡ automatic ಆಗಿ ಜಾಸ್ತಿ ಮಾಡಬೇಕಾಗುತ್ತದೆ ಎಂದು Issue priceನ್ನು ಜಾಸ್ತಿಮಾಡಿದರೆ ಕೊಳ್ಳತಕ್ಕವರಿಗೆ ತೊಂದರೆಯಾಗುತ್ತದೆಂದು ಕೆಲವರ ಅಭಿಪ್ರಾಯವಾಗಿದೆ. ಆ ರೀತಿ issue priceನ್ನು ಜಾಸ್ತಿಮಾಡುವುದು ಸಾಧುವಾದದ್ದಲ್ಲ. ಆದ್ದರಿಂದ issue priceನ್ನು ಅಷ್ಟೇ ಇಟ್ಟುಕೊಳ್ಳುವ ಮಾರ್ಗವನ್ನು ನಾವು ಕಂಡುಹಿಡಿಯಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಇದಕ್ಕೆ ಅವಕಾಶವಿದೆಯೆಂದು ತೋರುತ್ತದೆ. ಹೇಗೆಂದರೆ ಮುಂದಿನ ಸಾಲಿನಿಂದ ಲೆವಿ ಪದ್ಧತಿಯನ್ನೇ ಆಗಲಿ ಯಾವುದನ್ನೇ ಆಗಲಿ ನೀವು ಜಾರಿಗೆ ತರಬೇಕೆಂದು ಅಭಿಪ್ರಾಯ

ಪಟ್ಟರೂ ಅದರಂತೆ ಎಲ್ಲಾ ಕಡೆಯಲ್ಲೂ ಸದ್ಯಕ್ಕೆ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಬೇಕಾದ ಅವಶ್ಯಕತೆಯಿರುವುದಿಲ್ಲ. ಏಕೆಂದರೆ ಈ ಸುಗ್ಗಿಯ ಕಾಲದಲ್ಲಿ ಬೆಂಗಳೂರು, ಕೆ.ಜಿ.ಎಫ್. ಮತ್ತು ದಾವಣಗೆರೆ—ಈ ಮೂರು ಪ್ರದೇಶಗಳನ್ನು ಬಿಟ್ಟರೆ ಮಿಕ್ಕ ಕಡೆ ಇಂಥ ಡಿಪೋಗಳನ್ನಿಟ್ಟುಕೊಳ್ಳಬೇಕಾಗಿಲ್ಲವೆಂದು ಹೇಳಬಹುದು. ಆದರಿಂದ ಆ ಡಿಪೋಗಳಿಗೆ ಸಿಬ್ಬಂದಿ ಮುಂತಾದ ಖರ್ಚುಗಳಿಗಾಗಿ ಕೊಡುತ್ತಿದ್ದ ಹಣವನ್ನು ಖೋತಾ ಮಾಡಿ, ಈ ಉಳಿತಾಯದ ಹಣದಿಂದ ಈ ಸಿಟಿಗಳಲ್ಲಿ ಮಾರುವ ದವಸಗಳ issue priceನ್ನು ಸರಿಪಡಿಸುವುದಕ್ಕೆ ಸಾಧ್ಯವಿದೆಯೆಂದು ಹೇಳುತ್ತೇನೆ. ಈ ರೀತಿ ಮಾಡಿ ಹಾಲಿಯಿರುವ ದವಸದ ಬೆಲೆಯನ್ನು ಕೊನೆಯ ಪಕ್ಷ 25 ರೂಪಾಯಿಗಳಿಗಾದರೂ ಏರಿಸುವುದು ನ್ಯಾಯವಾಗಿಯೂ ಸಾಧುವಾದುದೆಂದು ನಮ್ಮ ಅಭಿಪ್ರಾಯ. ನಮ್ಮ ನೆರೆಹೊರೆ ಪ್ರಾಂತವಾದ ಬೊಂಬಾಯಿನಲ್ಲಿ ಪ್ರೊಕ್ಯೂರ್‌ಮೆಂಟ್ ದರ ಏನಿದೆ, ನಮ್ಮಲ್ಲೇನಿದೆಯೆಂದು ಹೋಲಿಸಿ ನೋಡಿದರೆ ನಮಗೂ ಅವರಿಗೂ 7-8 ರೂಪಾಯಿ ವ್ಯತ್ಯಾಸವಿದೆ ಅಂಥ ಸಂದರ್ಭದಲ್ಲಿ ನಾವು ಮೊದಲಿದ್ದ ಪ್ರೊಕ್ಯೂರ್‌ಮೆಂಟ್ ದರಕೊಟ್ಟರೆ ನಮ್ಮ ಸೀಮೆಯ ದವಸ ನೆರಹೊರೆ ಪ್ರಾಂತಕ್ಕೆ ಸಾಗಿ ಹೋಗುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ಸಂಸ್ಥಾನದೊಳಗಡೆ ದವಸದ ಬೆಲೆಹೆಚ್ಚಿ ಏರುಪೇರಾಗುವುದಕ್ಕೆ ಅವಕಾಶವಿದೆ. ಇದನ್ನು ತಪ್ಪಿಸಬೇಕಾದರೆ ನಮ್ಮಲ್ಲಿನ ಬೆಲೆಯನ್ನು ನೆರೆಹೊರೆ ಪ್ರಾಂತಗಳಲ್ಲಿನ ಧಾರಣೆಗೆ ಸರಿತೂಗುವ ರೀತಿಯಲ್ಲಿ ಹೆಚ್ಚಿಸುವುದು ನ್ಯಾಯವಾದ ಮಾರ್ಗವಾಗಿದೆ. ಈ ಅಂಶವನ್ನು ಕೇಂದ್ರ ಸರ್ಕಾರದವರ ಮುಂದಿಟ್ಟು ಕೊನೆಯ ಪಕ್ಷ 25 ರೂಪಾಯಿಗಳಂತಾದರೂ ನಿಗದಿಮಾಡುವುದು ಅವಶ್ಯಕವೆಂದು ಸೂಚಿಸುತ್ತೇನೆ.

ಕೊನೆಯದಾಗಿ ನನ್ನ ಮಾನ್ಯ ಮಿತ್ರರಾದ ದೇವರಾಜ ಅರಸರವರು ಹೇಳಿದ ಹಾಗೆ ಪ್ರೊಕ್ಯೂರ್‌ಮೆಂಟ್ ಮಾಡುವ ಕಾಲದಲ್ಲಿ ಸರ್ಪ್ಲಸ್‌ನಲ್ಲಿ 25% ಬಿಟ್ಟು ಉಳಿದ 75% ಶೇಖರಣೆಮಾಡಬೇಕೆಂಬುದು ಕೆಲವರ ಅಭಿಪ್ರಾಯವಾಗಿದೆ. ಆದರೆ ಈಗಿನ ವಾಸ್ತವಿಕ ಸನ್ನಿವೇಶವನ್ನು ಗಣನೆಗೆ ತೆಗೆದುಕೊಂಡು ನೋಡಿದರೆ ಇದು ಸ್ವಲ್ಪ ಹೆಚ್ಚೆಂದು ತೋರುತ್ತದೆ. ಇಲ್ಲಿ ಎಲ್ಲರಿಗೂ ಗೊತ್ತಿರುವ ಹಾಗೆ ಈ ಸಾರಿ ಸಂಸ್ಥಾನಾದ್ಯಂತ ಸಕಾಲದಲ್ಲಿ ಮಳೆಯಾಗದೆ ದೇಶ ಕ್ಷಾಮಡಾಮರಗಳಿಗೆ ತುತ್ತಾಗಿರುವುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಹಿಂದಿನ 5 ವರ್ಷಗಳ ಸರಾಸರಿ ತೆಗೆದುಕೊಂಡು ಅದರಂತೆ ಕೊಡಬೇಕೆಂದರೆ, ಹಿಂದಿನ 5 ವರ್ಷಗಳ ಸರಾಸರಿ ಬೆಳೆಯೇನಾಗಿತ್ತು, ಅದಕ್ಕಿಂತಲೂ ಈ ಸಾರಿ ಕಡಮೆ ಬೆಳೆಯಾಗುತ್ತದೆ. ಆದ್ದರಿಂದ ಇಂಥ ಸಂದರ್ಭದಲ್ಲಿ ಶೇಕಡ 25ರಷ್ಟು ಬಿಟ್ಟರೆ ಏನೂ ಸಾಲದು. ಆದ್ದರಿಂದ ಇನ್ನೂ ಜಾಸ್ತಿಬಿಟ್ಟುಕೊಟ್ಟು ಜನರಿಗೆ ಯಾವ ಕಿರುಕುಳವೂ ಇಲ್ಲದಂತೆ ಮಾಡುವುದಕ್ಕೆ ಪ್ರಯತ್ನಪಡಬೇಕೆಂದು ನಾನು ಸೂಚಿಸುತ್ತೇನೆ.

*ಶ್ರೀ ಎಂ. ಶಂಕರಲಿಂಗೇಗೌಡ. — ಅಧ್ಯಕ್ಷರೇ, ನಮ್ಮ ಮಾನ್ಯ ಮಂತ್ರಿಗಳು ಕೊಟ್ಟಂಥ ಭಾಷಣದ ಪ್ರತಿಯನ್ನು ಅವರು ನನ್ನ ಕೈಗೆ ಕೊಟ್ಟ ಮೇಲೆಯೇ ಅದನ್ನು ಸರಿಯಾಗಿ ನೋಡಿ ಮಾತನಾಡೋಣವೆಂದು ಹೇಳಿ ಈಗ ನಾನು ಮಾತನಾಡಲು ನಿಂತಿದ್ದೇನೆ. ಅವರ ಭಾಷಣದಿಂದ ನನಗೇನು ಅರ್ಥವಾಗುತ್ತದೆಂದರೆ, ಆಹಾರ ಮಂತ್ರಿಗಳು ಬೆಂಗಳೂರು, ದಾವಣಗೆರೆ, ಕೆ. ಜಿ. ಎಫ್.—ಈ ಮೂರು ಪ್ರದೇಶಕ್ಕೆ ಮಾತ್ರ, ಅಂದರೆ ಈ 10 ಲಕ್ಷ ಪ್ರಜಾ ಸಂಖ್ಯೆಗೆ ಮಾತ್ರ ಆಹಾರವನ್ನೊದಗಿಸುವುದಕ್ಕಾಗಿ ಒಂದು ಲಕ್ಷದ 52 ಸಾವಿರ ಟನ್ ದಿನಸಿಯನ್ನು ನಾವು ಒದಗಿಸಬೇಕಾಗುತ್ತದೆ, ಇಂಡಿಯಾ ಸರ್ಕಾರದವರು 75,000 ಟನ್ ಕೊಡುತ್ತಾರೆ, ಇದಾಗಿ ಕೊಂಚಸಾಲದೆ ಬರುವ ದಿನಸಿಯನ್ನು ನಮ್ಮ ಸಂಸ್ಥಾನದಲ್ಲೇ ಪ್ರೊಕ್ಯೂರ್‌ಮಾಡಬೇಕೆಂದಿದ್ದೇವೆ ಎಂದು ಹೇಳಿದ ಹಾಗಾಯಿತು. ಈ ಪ್ರಕಾರ ದೇಶದಲ್ಲಿ ಈ ಮೂರು ಪ್ರದೇಶಗಳ ಜನರನ್ನು ಮಾತ್ರ ಅವರು ಲೆಕ್ಕಹಾಕಿದ್ದಾರೆ.

ಶ್ರೀ ವಿ. ವೆಂಕಟಪ್ಪ (ಚೆನ್ನಪಟ್ಟಣ).—ಈ ಮೂರು ಜನಕ್ಕೆ ಮಾತ್ರ ಅಲ್ಲ. It includes buffer stocks to be given wherever necessary.

Sri M. SHANKARLINGE GOWDA.—The buffer stock does not give at the rate of even one chatak for over 80 lakhs of people. I know that calculation.

ಶ್ರೀ ವಿ. ವೆಂಕಟಪ್ಪ.—80 ಲಕ್ಷಕ್ಕೂ ಈಗ ಕೊಡುತ್ತಿದ್ದಾರೆಯೇ!

ಶ್ರೀ ಎಂ. ಶಂಕರಲಿಂಗೇಗೌಡ.—ಮಂತ್ರಿಗಳು ಅದಕ್ಕೆಲ್ಲಾ ಉತ್ತರ ಹೇಳುತ್ತಾರೆ; ತಾವಲ್ಲ ಉತ್ತರ ಹೇಳುವುದು.

ಶ್ರೀ ಎಚ್. ಸಿದ್ದವೀರಪ್ಪ.—ಅವರು ಯಾವ ಪಾರ್ಟಿಯ ಸರ್ಕಾರ ಆಳುತ್ತಿದೆಯೋ ಆ ಪಾರ್ಟಿಯ ಪರವಾಗಿ ಹೇಳುತ್ತಿದ್ದಾರೆ.

ಶ್ರೀ ಎಂ. ಶಂಕರಲಿಂಗೇಗೌಡ.—'ಬಫರ್‌ಸ್ಟಾಕ್' ಎಂಬುದು 4 ಲಕ್ಷ ಪಲ್ಲ ಮಾತ್ರ. ಇದು ಉಳಿದ 80 ಲಕ್ಷ ಪ್ರಜೆಗೂ ಸಾಕಾಗುತ್ತದೆಯೇ?

ಶ್ರೀ ವಿ. ವೆಂಕಟಪ್ಪ.—80 ಲಕ್ಷಕ್ಕೂ ಕೊಡಬೇಕೆಂದು ಎಲ್ಲೂ ಹೇಳಿಲ್ಲ. ಹಾಗೆ ಕೊಡುವುದೂ ಇಲ್ಲ!

ಶ್ರೀ ಎಂ. ಶಂಕರಲಿಂಗೇಗೌಡ.—ಹಾಗಾದರೆ ಕಂದಾಯ ಕೊಡುವುದೇಕೆ ನಾವು? ನಮಗೂ ಕೊಡುವುದೇ. ನಾನು ಹೇಳುವುದು ನಮಗೂ ನೀವು ಎಲ್ಲರಿಗೂ ಕೊಡುವುದನ್ನು ಕೊಡಬೇಕು ಎಂದು. ಸರ್ಕಾರದವರು ಈಗ ಲೆಕ್ಕಹಾಕಿರುವುದು 10 ಲಕ್ಷ ಪ್ರಜಾ ಸಂಖ್ಯೆಗೆ ಮಾತ್ರ. ಇಂಡಿಯಾ ಸರ್ಕಾರದಿಂದ ಇಷ್ಟು ಬರುತ್ತಿದೆ, ಅದಕ್ಕೆ ಸಾಲದೆ ಬರುವುದನ್ನು ಈಗ ಉಳಿದ ದೇಶದ 80 ಲಕ್ಷ ಪ್ರಜೆಗಳಿಂದ ವಸೂಲು ಮಾಡಿಕೊಳ್ಳಬೇಕೆಂದು ಮಾಡಿದ್ದಾರೆ............

ಶ್ರೀ ವಿ. ವೆಂಕಟಪ್ಪ.—ತಿರುಗಿ ತಪ್ಪೇ ಹೇಳುತ್ತಾರೆ! 80 ಲಕ್ಷ ಪ್ರಜೆಗಳಿಂದಲೂ ತೆಗೆದುಕೊಳ್ಳುವುದಿಲ್ಲ. $2\frac{1}{2}$ ಲಕ್ಷ ಚಿಲ್ಲರೆ ಜನರಿಂದ ಮಾತ್ರ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಶಂಕರಲಿಂಗೇಗೌಡ.—ನಮ್ಮಲ್ಲಿಯೂ ಗ್ರಾಮಾಂತರಗಳಲ್ಲಿ ಬೆಳೆಯದೆ ಇರುವವರಿದ್ದಾರೆ. ಪ್ರತಿ ಮನೆಯಲ್ಲಿಯೂ ದನಕಾಯುವವರಿದ್ದಾರೆ, ಕಳೆ ಕೀಳುವವರಿದ್ದಾರೆ. ಕಸ ಗುಡಿಸುವವರಿದ್ದಾರೆ. ಇವರೆಲ್ಲರನ್ನೂ ಲೆಕ್ಕಹಾಕಿ ಎಷ್ಟು ಜನರಿಗೆ ಕೊಡಬೇಕೆಂದು ಲೆಕ್ಕಹಾಕಲಿ. ಅದಿಲ್ಲದೆ ಪಟ್ಟಣದವರಿಗೆ ಮಾತ್ರ 15 ಲಕ್ಷ ಸಾಕೆಂದು ಹೇಳಿ 12ಲಕ್ಷ ಪಲ್ಲ ಬತ್ತ, 2ಲಕ್ಷ ಪಲ್ಲ ರಾಗಿ ಒಂದು ಲಕ್ಷ ಪಲ್ಲ ಜೋಳ ಸಾಕೆಂದು ಹೇಳಿ ಒಂದು proposal ಸಭೆಯ ಮುಂದಿಟ್ಟರೆ ಹೇಗೆ? ಅದಿರಲಿ; ದೇಶದಲ್ಲಿ ಮೊದಲು ಎಷ್ಟು ಬೆಳೆಯುತ್ತದೆಂದು ಲೆಕ್ಕ ಮಾಡೋಣ; ಹೋದ ವರುಷ ಈ ವರ್ಷಕ್ಕಿಂತಲೂ ಚೆನ್ನಾಗಿತ್ತೆಂದು ತಾವೇ ಒಪ್ಪುತ್ತೀರಿ. ಅಂಥಾದ್ದರಲ್ಲಿ ಹೋದ ವರ್ಷ 24 ಲಕ್ಷ ಪಲ್ಲ ಅಕ್ಕಿ, 2 ಲಕ್ಷ ಪಲ್ಲ ರಾಗಿ

(ಶ್ರೀ ಎಂ. ಶಂಕರಲಿಂಗೇಗೌಡ).

ಮತ್ತು 3 ಲಕ್ಷದ 20,000 ಪಲ್ಲ ಜೋಳ ಆಯಿತೆಂದು ತಾವೇ ಹೇಳಿದ್ದೀರಿ. ಹೋದವರ್ಷ ಆದ ಬೆಳೆಗೂ ಮಳೆಗೂ, ಈ ವರ್ಷದ್ದಕ್ಕೂ ಲೆಕ್ಕ ಹಾಕಿದರೆ ಈ ವರ್ಷ ಎಷ್ಟು ಹೆಚ್ಚಿಗೆ ತರಿಸಿಕೊಳ್ಳಬೇಕೆಂಬುದನ್ನು ಯೋಚನೆಮಾಡಿ. ತಾವೇ ಈಗ 35 ಲಕ್ಷ ಪ್ರಜಾ ಸಂಖ್ಯೆಗೆ ಆಹಾರವಿಲ್ಲದ ಹಾಗಾಗಿದೆಯೆಂದು ಪಂಡಿತ್ ಜವಾಹರಲಾಲ್‌ರವರಿಗೆ ತಿಳಿಸಿದ್ದೀರಿ. ಆದ್ದರಿಂದ ಈ 35 ಲಕ್ಷದಲ್ಲಿ 10 ಲಕ್ಷ ಸಿಟಿಯವರನ್ನು ಬಿಟ್ಟು ಮಿಕ್ಕ 25 ಲಕ್ಷ ಜನ ಗ್ರಾಮಾಂತರಗಳ ಕಡೆಯಿದ್ದಾರೆಂದು ಹೇಳಿದಹಾಗಾಯಿತು. ಈ 25 ಲಕ್ಷ ಪ್ರಜೆಗೂ ನೀವು ಆಹಾರವನ್ನು ಕೊಡಬೇಡವೇ? ಅವರಿಗೆ ಏರ್ಪಾಡು ಮಾಡಲೇಬೇಕು. ನಾನು ಹೇಳುವುದು ಇವರಿಗೂ ಬೇಕು ಒಪ್ಪಿಕೊಳ್ಳುತ್ತೇನೆ. ಈಗ ನೀವು 50 ತಾಲ್ಲೂಕುಗಳಲ್ಲಿ ಬೆಳೆ ಆಗಿಲ್ಲ ಎಂದು ಹೇಳಿ m p ಗಳನ್ನು ತಯಾರುಮಾಡಿ ಇಂಡಿಯಾ ಸರ್ಕಾರಕ್ಕೆ ಒಪ್ಪಿಸಿದ್ದೀರಿ. ಈ 50 ತಾಲ್ಲೂಕುಗಳಲ್ಲಿ ಎಷ್ಟು ಬೆಳೆ ಆಗಿದೆ? ಯಾವ ತಾಲ್ಲೂಕಿನ ಸದಸ್ಯರನ್ನೇ ಕೇಳಿ, ಜೋಳ ಕೇಳಿ, ಇಲ್ಲ; ನವಣೆ ಕೇಳಿ, ಇಲ್ಲ; ರಾಗಿ ಕೇಳಿ, ಇಲ್ಲ; ಈ ರೀತಿ ಉತ್ತರ ಪ್ರತಿಯೊಬ್ಬರಲ್ಲಿಯೂ ಹುಟ್ಟುತ್ತದೆ. ಇನ್ನು ಏನಿದೆ ಎಂದರೆ ಬತ್ತ. 15 ಲಕ್ಷ ಪಲ್ಲ ಬತ್ತವನ್ನ ದೇವರು ಒಂದೇ ಸಲ ಕಿತ್ತುಕೊಳ್ಳುತ್ತಿದ್ದ. ಆದರೆ ಸ್ವಲ್ಪ ಮಳೆ ಬಂದುಹಾಗೋ ಹೀಗೋ ಬತ್ತ ಆಗುತ್ತದೆ. ಮಲೆನಾಡಿನಲ್ಲಿ ಬತ್ತದ ಫಸಲು ಬೆಂದು ಹೋಗಿತ್ತು. ಅದೂ ಕೂಡ ಚಿಗುರಿ, ಸ್ವಲ್ಪ ದಿನಸಿ ಕಡಮೆ ಆಗಬಹುದೇ ಹೊರತು, ಅ ಥಾ ಕ್ಷಾಮ ಮಲೆನಾಡಿನಲ್ಲಿ ಬರುವುದಿಲ್ಲ ಅದೂ ಅಲ್ಲದೆ ಬೇಸಿಗೆ ಬೆಳೆ ಒಂದು ಲಕ್ಷ ಎಕರೆ ಸಾಗು ಆಗುವ ಕೆರೆಗಳು ಇವೆ. ಮಾರ್ಕೋನಹಳ್ಳಿ, ಅಂಜನಾಪುರ, ಕಣ್ವ, ಭೈರಮಂಗಲ, ಕಡಬ ಮತ್ತು ಗುಬ್ಬಿ, ಇಂಥ ಕೆರೆಗಳ ಕೆಳಗೆ ಒಂದು ಲಕ್ಷ ಎಕರೆ ಜಮಾನು ಇದೆ. ಅಲ್ಲಿ ಮಾಗಿಯ ಕೊನೆಗೆ ಒಂದು ಫಸಲು ಬರುತ್ತದೆ. ನಮ್ಮ ದೇಶದಲ್ಲಿ ಬತ್ತ ಎಷ್ಟಾಗುತ್ತದೆ ಎನ್ನುವುದರ ಲೆಖ್ಖ ನೋಡೋಣ. ಹೋದ ವರ್ಷದ ಬೆಳೆಯ ಲೆಖ್ಖಾಚಾರದ ಪ್ರಕಾರ 24 ಲಕ್ಷ ಪಲ್ಲ ಅಕ್ಕಿ ಮೇಲೆ ಸಿಕ್ಕುವುದೇ ಇಲ್ಲ. ಆದರೆ ಈ ವರ್ಷ ಒತ್ತವೂ ಕೂಡ ನೊಂದುಬಿಟ್ಟಿದ. ಆದುದರಿಂದ ಈ ವರ್ಷ ಅದಕ್ಕಿಂತ ಕಡಮೆ ಬೆಳೆಯಾಗುತ್ತದೆ. 24ಲಕ್ಷ ಪಲ್ಲ ಅಕ್ಕಿಯೊಳಗ 6 ಲಕ್ಷ ಪಲ್ಲ ಕೊಡಬೇಕು ಎಂದು ಕೇಳುತ್ತಿದ್ದೀರಿ. 48 ಲಕ್ಷ ಪಲ್ಲ ಬತ್ತದಲ್ಲಿ 12 ಲಕ್ಷ ಪಲ್ಲ ಬತ್ತ ಕೇಳುತ್ತಿದ್ದೀರಿ. ಇದನ್ನು ಯಾವ ರೀತಿ ವಸೂಲು ಮಾಡುವುದು ? ರಾಗಿ ಕಡಮೆ ಮಾಡಿದ್ದೀರಿ, 2 ಲಕ್ಷ ಮಾಡಿದ್ದೀರಿ. ಹೇಗಾದರೂ ಮಾಡಿ ತೆಗೆದುಕೊಳ್ಳಬಹುದು. ಅದು negligible point. 12 ಲಕ್ಷ ಪಲ್ಲ ಬತ್ತವನ್ನು ಯಾವ ರೀತಿ ರೈತರಿಂದ ತೆಗೆದುಕೊಳ್ಳತಕ್ಕುದು ಎನ್ನುವುದು ಒಂದ ಪ್ರಶ್ನೆ. ಸರ್ಕಾರದವರೂ ಕೂಡ 'ನಿಮ್ಮ' ಅಮೂಲ್ಯವಾದ ಸಲಹೆಗಳನ್ನು ಸರ್ಕಾರಕ್ಕೆ ಕೊಡಿ, ನಾವು ನಿಮ್ಮ ಸಲಹೆಯಂತೆ ಮಾಡುತ್ತೇವೆ ಎಂದು ಬೇಡಿಕೊಳ್ಳುತ್ತಿದ್ದಾರೆ. ನಾನು levy and procurement, ಮತ್ತು assessment and procurement ಎಂಬ ಬಗ್ಗೆ Dicti nary ನೋಡಿದೆ. ಎಲ್ಲಾ ಒಂದೇ. ಎಲ್ಲವನ್ನೂ ಜನಗಳಿಂದಲೇ ಕಿತ್ತುಕೊಳ್ಳುವುದು ಈಗ ಇರತಕ್ಕಂಥ procurement ನಲ್ಲಿ 10 ವರ್ಷಗಳಿಂದ ಒಂದು ತರಹಬಂದಿದೆ. 10 ವರ್ಷಗಳಿಂದ, ಯಾವ ಯಾವ ರೀತಿ ಅನ್ಯಾಯ ಮಾಡಿದರೂ ಕೂಡಾ, ಪ್ರತಿ ವರ್ಷವೂ 15 ಲಕ್ಷ ಪಲ್ಲ ಬತ್ತವನ್ನು ಜನಗಳಿಂದ ಕಿತ್ತಿದ್ದಾರೆ. ಹೋದವರ್ಷ ಅಂದರೆ 1951ರಲ್ಲಿ ಕೂಡ 17,83,000 ಪಲ್ಲ ಬತ್ತ ಜನಗಳಿಂದ ತೆಗೆದುಕೊಂಡಿದ್ದಾರೆ. 1952ರ figures ಮಾತ್ರ ಕೊಟ್ಟಿಲ್ಲ. ಈ ವರ್ಷ ಎಷ್ಟು ಪಲ್ಲ ಬತ್ತ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತೇನೆ. ಈ ವರ್ಷ 5 ಲಕ್ಷ ಪಲ್ಲ ಕಡಮೆ ಮಾಡಿದ್ದೀರಿ.

ತಾವು ಹೊಸ ಮಂತ್ರಿಮಂಡಲ ಬಂದ ಕಾಲದಲ್ಲಿ de-control ಮಾಡಿದುದರಿಂದ...........

ಶ್ರೀ ವಿ. ವೆಂಕಟಪ್ಪ.—De-control ಮಾಡಲಿಲ್ಲ.

ಶ್ರೀ ಎಂ. ಶಂಕರಲಿಂಗೇಗೌಡ.— Control ಸಡಿಲಿಸಿದರು.

ಶ್ರೀ ವಿ. ವೆಂಕಟಪ್ಪ.—ಜನರು ತಪ್ಪು ತಿಳಿದುಕೊಳ್ಳುವುದಕ್ಕೆ ಅವಕಾಶಮಾಡಬಾರದು.

ಶ್ರೀ ಎಂ. ಶಂಕರಲಿಂಗೇಗೌಡ.—Control ಇಲ್ಲ. ಅದರ ಪ್ರಕಾರವೇ ನಡೆಯುತ್ತಿದೆ. ಸರ್‌ಪ್ಲಸ್ ವಿಷಯ...

ಶ್ರೀ ವಿ. ವೆಂಕಟಪ್ಪ.—ತಾವು ಕೊಡದೇ ಇರುವವರ ಮಾತು ಹೇಳುತ್ತಿದ್ದೀರಿ. ಕೊಟ್ಟಿರುವುದು ನಿಮಗೆ ಏನುಗೊತ್ತಿದೆ? ಗೊತ್ತಿಲ್ಲದೇ ಇರುವ ಮಾತು ಯಾತಕ್ಕೆ ?

Mr SPEAKER.—Sri Shankarlinge Gowda, if you are not serious, and do not proceed, I will have to request you to resume your seat.

ಶ್ರೀ ಎಂ. ಶಂಕರಲಿಂಗೇಗೌಡ.—12 ಲಕ್ಷ ಪಲ್ಲ ಬತ್ತವನ್ನು ಹೇಗೆ ತೆಗೆದುಕೊಳ್ಳಬೇಕು ಎಂದು ಕೆಲವರು ಸೂಚಿಸಿದ್ದಾರೆ. 25 ಸೇರಿನಂತೆ ತೆಗೆದುಕೊಳ್ಳಿ, 48 ಲಕ್ಷ ಪಲ್ಲ ಬತ್ತ ಬರುತ್ತದಂತೆ............

SRI V. VENKATAPPA—It is quite wrong. Nobody has said, 25 ಸೇರಿನಂತೆ ತೆಗೆದುಕೊಳ್ಳಬೇಕು. ಇಲ್ಲಿ ಇರುವ ಒಬ್ಬ ಸದಸ್ಯರೂ ಆ ರೀತಿ ಎಂದು ಹೇಳಲಿಲ್ಲ.

ಶ್ರೀ ಎಂ. ಶಂಕರಲಿಂಗೇಗೌಡ.—ಹೋದ ವರ್ಷ ಆಗಿರತಕ್ಕ ದಿ ಸಿ ಬೆಳೆಗಿಂತ ಈ ವರ್ಷ ಬೆಳೆ ಕಡಮೆ ಆಗಿರುವುದರಿಂದ 12 ಲಕ್ಷ ಪಲ್ಲ ಬತ್ತವನ್ನು ತೆಗೆದುಕೊಂಡು ನಗರಗಳ ಜನರಿಗೆ ಕೊಡುವುದರಿಂದ ಹಳ್ಳಿಯವರಿಗೆ ಬಹಳ ಕಷ್ಟವಾಗುತ್ತದೆ. ಆದುದರಿಂದ Government of India ಏನು ಕೊಡುತ್ತಾರೋ ಅದನ್ನು ನಗರದ ಜನರಿಗೆ ಹಂಚಬೇಕು. ನಾವು ಬೆಳೆದದ್ದನ್ನು ನಮ್ಮಲ್ಲಿಯೇ fair price depot ಗಳಲ್ಲಿ ಇಟ್ಟುಬಿಡಬೇಕು. ನಾವು ಕಷ್ಟಪಟ್ಟು ಬೆಳೆದುದನ್ನು ನಮ್ಮ ರೈತರಿಗೆ ಇಲ್ಲದೆ ಸಿಟಿಗಳವರಿಗೆ ಕೊಟ್ಟು ಅವರನ್ನು feed ಮಾಡುತ್ತಾ ಬಂದರೆ, ನಗರಗಳಲ್ಲಿ ಕಲಸ ಮಾಡಿದರೆ 12 ounce, 16 ounce ಆಹಾರ ಸಿಗುತ್ತದೆ ಎಂದು ಜನಗಳು ಹಳ್ಳಿಗಳಿಂದ ಸಿಟಿಗಳಿಗೆ ನುಗ್ಗಿ, ಪ್ರತಿ ದಿವಸ ಪಟ್ಟಣಗಳಲ್ಲಿ ಜನಸಂಖ್ಯೆ ಹೆಚ್ಚುತ್ತಾ ಬರುತ್ತದೆ. ಅವರು ಯಾತಕ್ಕೆ ಹೀಗೆಂದರೆ ತೆಗೆದುಕೊಳ್ಳುತ್ತಾರೆ? ಹೇಗಾದರೂ ರೇಷನ್ ಸಿಗುತ್ತದೆ ಎಂದು ಪಟ್ಟಣಗಳಿಗೆ ಹೋಗುತ್ತಾರೆ. ಹಾಗಾದರೆ 12 ಲಕ್ಷ ಪಲ್ಲ ದಿನಸಿ ಹೇಗೆ ಬರಬೇಕು ಎಂದು ಕೇಳಬಹುದು. ನಾನು ಹೇಳುವುದು ಇಷ್ಟೇ. ರೈತರಿಗೆ ಇಲ್ಲದೆ ಇರವಾಗ, ರೈತರಲ್ಲಿ ದಿನಸಿ ಸ್ಟಾಕ್ ಇಲ್ಲದೆ ಇರುವಾಗ, ಹಳ್ಳಿಯಿಂದ ಕಿತ್ತುಕೊಂಡು ಬಂದು ನಗರಗಳಿಗೆ ಕೊಡ ಡಿ. ನಿಮ್ಮ ಲೆಖ್ಖಾಚಾರದ ಪ್ರಕಾರ ರಾಗಿ ಬೆಳೆ ಹೋಗಿದೆ; ಜೋಳದ ಬೆಳೆ ಹೋಗಿದೆ; ಬತ್ತ ನಾಲಾ ಬೈಲು ಮತ್ತು ಮಲೆನಾಡಿನಲ್ಲಿ ಖೋತಾ ಆಗಿದೆ. ಒಂದು ಲಕ್ಷ ಎಕರೆಯೊಳಗೆ ವೈಶಾಖೀ ಬೆಳೆ ಬರುತ್ತದೆ. ಆದುದರಿಂದ

ಇಂಡಿಯಾ ಸರ್ಕಾರದವರು ಕೊಡುವ 7,50,000 ಪಲ್ಲ ದಿನಸಿಗಳಲ್ಲಿ ಕೋಲಾರ ಗೋಲ್ಡ್ ಫೀಲ್ಡ್ ಮುಂತಾದ ನಗರಗಳಿಗೆ ಎಷ್ಟು ಬೇಕೋ ಅಷ್ಟನ್ನು ಕೊಡಿ, ನಮ್ಮಲ್ಲಿ ಬೆಳೆದುದನ್ನು ನಮ್ಮಲ್ಲಿ fair price depot ಗಳಲ್ಲಿ ಇಟ್ಟುಬಿಟ್ಟು ನಮಗೆ ಹಂಚಬೇಕು.

ಒಬ್ಬ ಸದಸ್ಯರು.—ಹಾಗಾದರೆ procure ಮಾಡ ಬೇಕು !

ಶ್ರೀ ಎಂ. ಶಂಕರಲಿಂಗೇಗೌಡ.—Procure ಮಾಡಿ ಕೊಳ್ಳೋಣ. ಹಿಂದೆ ಇದ್ದ Procurement scheme ನಲ್ಲಿ ಸ್ವಲ್ಪ ತೊಂದರೆಗಳಿವೆ. ನೀವು ನಮಗೆ ಕೊಡಲಿಲ್ಲ. ಡಿಪೋ ಇಟ್ಟರೂ, ಡಿಪೋಗಳಿಗೆ ಹೋಗ ಲಿಲ್ಲ. ನೀವು ನಮಗೆ ಬಿಟ್ಟುಬಿಡಿ. ಹಳ್ಳಿಯವರೇ ಕೊಂಡುಕೊಳ್ಳಲಿ. Fair price ಸಿಕ್ಕುತ್ತದೆ. Demad and supply ಇದ್ದಹಾಗೆ ಬೆಲೆ ಹೆಚ್ಚುತ್ತದೆ ಅದನ್ನು ಬಿಟ್ಟು ಬಿಟ್ಟು ನಾವು ಬೆಳೆದದ್ದನ್ನು ಇವೊತ್ತಿನ ವರೆಗೂ ತಿನ್ನಿಸಿ, ತಿನ್ನಿಸಿ ಸಾಕಾಗಿದೆ. ಇವೊತ್ತಿನ ವರೆಗೂ ಮಾಡಿದ ಪಾಪ ಸಾಕು. ನೀವು ಬೆಳೆದು ನಗರಗಳಿಗೆ ಪುಕಸಟ್ಟೆ ಕಳುಹಿಸುವುದಕ್ಕೂ ಆಗುವುದಿಲ್ಲ, ಕೊಡುವುದಕ್ಕೂ ಆಗುವುದಿಲ್ಲ. ಆದುದರಿಂದ ಅವರಿಗೆ ಎಷ್ಟು ದಿನಸಿ ಬೇಕೋ ಅಷ್ಟನ್ನು Government of India ದಿಂದ ತರಿಸಿಕೊಡಿ. ನಾವು ಬೆಳೆದದ್ದನ್ನು ಡಿಸ್ಟ್ರಿಕ್ಟ್ Headquarters ನಲ್ಲಿ ಸ್ಟಾಕ್ ಮಾಡಿ ನಮಗೆ ಕೊಡಿ. 12 ಲಕ್ಷ ಪಲ್ಲ ದಿನಸಿ levy ಮೂಲಕ ಸಿಕ್ಕುವುದಿಲ್ಲ. Procurement ನಲ್ಲಿ ಸ್ವಲ್ಪ defects ಇವೆ. ಅವನ್ನು ಸರಿಪಡಿಸಿಬಿಟ್ಟು ವಸೂಲು ಮಾಡಿದರೆ ಪ್ರತಿ ವರ್ಷ 15 ಲಕ್ಷ ಪಲ್ಲ ಬರುತ್ತದೆ. ಆದ್ದರಿಂದ ಈ ವರ್ಷ 12 ಲಕ್ಷ ಪಲ್ಲ ಬರುವುದರಲ್ಲಿ ಯಾವ ಅನು ಮಾನವೂ ಇಲ್ಲ. 25 ರೂಪಾಯಿ ಮಾಡಬೇಕು, ಎಂದು ಹೇಳುತ್ತಾರೆ. ಹೀಗೆ 25—30 ರೂಪಾಯಿ ಎಂದು ಹೇಳಿಕೊಂಡು ಹೋದರೆ ಬೆಲೆ ಏರುತ್ತಾ, ಏರುತ್ತಾ ಹೋಗುತ್ತದೆ. ದಿನಸಿ price fair price ಮಾಡ ಬೇಕು. ಇಷ್ಟ ಇದ್ದರೆ ಸರ್ಕಾರದವರು ಹೆಚ್ಚಿಸಬಹುದು ಆದರೆ ಸರ್ಕಾರದವರು ಹೆಚ್ಚಿಸಬೇಡಿ ರೈತರು ಅವರವರ ಡಿಮ್ಯಾಂಡ್ ಮೇಲೆ ಎಷ್ಟಕ್ಕೆ ಬೇಕಾದರೂ ಮಾರಬಹುದು. ಸರ್ಕಾರದವರೇ 25 ರೂಪಾಯಿ ಎಂದರೆ ಅಕ್ಕಿ ಪಲ್ಲಕ್ಕೆ 85 ರೂಪಾಯಿ ಆಗುತ್ತದೆ. ಇದು ದೇವರ ಮಾಯೆ. 2 ಹದ, 3 ಹದ ಮಳೆ ದೇವರು ಕೊಟ್ಟಿದ್ದರೆ, ಹೀಗೆ ಏನೂ ಆಗುತ್ತಿರಲಿಲ್ಲ ಆದುದರಿಂದ 12 ಲಕ್ಷ ಪಲ್ಲ ದಿನಸಿ ಖಂಡಿತವಾಗಿಯೂ ನಿಮಗೆ ಸಿಗುತ್ತದೆ, ಯಾವ ವಿಧವಾದ ಭಯವೂ ಇಲ್ಲ. ನಮ್ಮ ದೇಶದ ಅಕ್ಕಿಯನ್ನು ಖಂಡಿತವಾಗಿಯೂ ನಗರ ಗಳಿಗೆ ಕೊಡಬೇಡಿ. ಹಾಗೆ ಕೊಟ್ಟರೆ, ರೈತರು ದೊಂಬಿ ಏಳುವುದು ಖಂಡಿತ.

Sri J. MOHAMED IMAM.—I am not going to make a speech, but I want to make a statement regarding the procedure adopted here. Of course, as requested by the Home Minister, we are not treating this as a party issue and we are very glad to give our full co-operation, our ideas and our suggestions. But for all this, we want to have necessary materials before us and with that view, since yesterday, we have been asking for the copies of the report of the Committee that was appointed by the Government to examine the levy system. The Chief Minister promised to lay it on the Table. Perhaps the Home Minister also promised to give it before 3 P.M. We do not want to make random statement. Whatever we want to say, we want to say with authority and after deep and mature consideration. We regret very much that the report is not made available to us till now and so the necessary data is not available to us. We do not want to beat about the bush and make random statements. So, unless copies of the report are made available to us, none of my party men are going to take part in the debate or give our suggestions which may be relevant or irrelevant to this House. It is with extreme regret that we have taken this decision. If the Government are anxious to obtain our views, let them make the copies of the report available to us and if any other time is fixed we will be very glad to offer our views. Without any material, without anything before us, we cannot make any suggestions. Sir, of late, it has become the practice of the present Government not to place any of their concrete proposals before this House They want us to offer our views. They are practically asking us to walk into their trap and get us caught up. Therefore we are extremely sorry to say that we are unable to participate in the discussion without necessary material or report. They should be placed before us for our consideration. It is only after that, we can think of taking part in the deliberation of this matter.

4 P.M.

ಶ್ರೀ ಎಚ್. ಸಿದ್ಧವೀರಪ್ಪ.—Sir, Let me make the position clear. ಶ್ರೀಮಾನ್ ಇಮಾಂ ಸಾಹೇಬರು ಒಂದು ವಿಷಯವನ್ನು ಮಟ್ಟಿಗೆ ತಮ್ಮ ಗಮನಕ್ಕೆ ಈ ದಿವಸದ ಕಾರ್ಯಕಲಾಪಗಳು ಪ್ರಾರಂಭ ವಾದಾಗಿನಿಂದಲೂ ತರುತ್ತಿದ್ದಾರೆ. ನಿನ್ನೆಯ ದಿವಸ ಸಮಿತಿಯ ವರದಿಯನ್ನು ಕೊಡುತ್ತೇವೆಂದು ಹೇಳಿ ದುದೂ ನಿಜ, ತಾವು ಅಪ್ಪಣೆ ಮಾಡಿದುದೂ ನಿಜವೇ. ಒಂದು ವಿಷಯವನ್ನು ಮಟ್ಟಿಗೆ ನಾನು ಈ ಸಮಯದಲ್ಲಿ ಹೇಳಬೇಕಾಗಿದೆ. ಅದನ್ನು ಹೇಳುತ್ತೇನೆ. ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಪಟ್ಟಾಭಿರಾಮನ್ ರವರು ಒಂದು ಅಂಶವನ್ನು ಹೇಳಿದರು. ಸರ್ಕಾರ

(ಶ್ರೀ ಎಚ್. ಸಿದ್ದವೀರಪ್ಪ).

ತನ್ನ ಜವಾಬ್ದಾರಿಯನ್ನು ಹೊರಲೇಬೇಕು, ಆ ಜವಾಬ್ದಾರಿಯನ್ನು ನಿರ್ದಿಷ್ಟವಾಗಿ ಹೊರಲೇಬೇಕು. ಆ ರೀತಿ ನಿರ್ದಿಷ್ಟವಾದ ನೀತಿಯನ್ನಿಡದೇ ಇದ್ದರೆ ಕರ್ತವ್ಯ ಲೋಪವಾದೀತು ಎಂದು ಹೇಳಿದರು. ಈ ಸಮಯದಲ್ಲಿ ನಾನು ಹೇಳುವುದಿಷ್ಟೆ. ಈ ಮಾನ್ಯ ಸಭೆಯವರ ಅಭಿಪ್ರಾಯವನ್ನು ಪಡೆದು ಪ್ರಕೃತ ಸಂಬಂಧದಲ್ಲಿ ಯಾವ ನೀತಿಯನ್ನೇ ಅನುಸರಿಸಿದರೂ ಕೂಡ ಅದರ ಸಂಪೂರ್ಣ ಜವಾಬ್ದಾರಿ ಸರ್ಕಾರಕ್ಕೇ ಸೇರಿದದು ಎಂಬ ತತ್ವವನ್ನು ನಾವು ಬಿಟ್ಟುಕೊಡುವುದಿಲ್ಲ. ಯಾವುದೇ ನೀತಿಯನ್ನು ಜಾರಿ ಮಾಡಿದರೂ ಅದರ ಸಂಪೂರ್ಣ ಜವಾಬ್ದಾರಿಯ ಹೊರೆಯನ್ನು ಸರ್ಕಾರವೇ ಹೊರುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತೇನೆ. ಈ ವಿಚಾರದಲ್ಲಿ ಅವರಿಗೂ ನಮಗೂ ಭಿನ್ನಾಭಿಪ್ರಾಯವಿಲ್ಲವೆಂದು ಹೇಳುತ್ತೇನೆ. ಏನು ಕಾರಣದಿಂದ ಸರ್ಕಾರದವರು ಈ ವರದಿಯನ್ನು ಸಭೆಯ ಮುಂದಿಡಲಿಲ್ಲ ಎಂಬುದನ್ನು ಹೇಳುತ್ತೇನೆ. ಇತ್ತೀಚೆಗೆ ಸರ್ಕಾರದವರು ತಮ್ಮ ನೀತಿ ಏನೆಂಬುದನ್ನು ತಿಳಿಸುತ್ತಿಲ್ಲ, ಹಾಗೆಯೇ ಈ ವಿಷಯದಲ್ಲಿಯೂ ತಮ್ಮ ನೀತಿ ಹೀಗಿದೆ ಎಂಬುದನ್ನು ಸ್ಪಷ್ಟಪಡಿಸಿಲ್ಲ ಎಂದು ಶ್ರೀಮಾನ್ ಇಮಾಂರವರು ಹೇಳಿದರು. ಇದ ವರೆಗೆ ಸರ್ಕಾರ ತನ್ನ ನೀತಿಯನ್ನು ಸ್ಪಷ್ಟವಾಗಿ ನಿರ್ದಿಷ್ಟವಾಗಿ ದೇಶದ ಮುಂದೆ ಇಟ್ಟಿದೆ. ಈಗ ಈ ರೀತಿಯ ಕ್ರಮವನ್ನನುಸರಿಸಲು ಕಾರಣವೇನೆಂದರೆ, ಪ್ರಕೃತ ಪರಿಸ್ಥಿತಿಯಲ್ಲಿ ದೇಶದಲ್ಲಿ ಎಲ್ಲ ಕಡೆಯೂ ಮಳೆ ಹೋಗಿ ಉಂಟಾಗಿರತಕ್ಕ ಅಭಾವ ಪರಿಸ್ಥಿತಿಯಲ್ಲಿ ಸರ್ಕಾರದವರೇ ಏನಾದರೂ ಒಂದು ನೀತಿಯನ್ನು ಅನುಸರಿಸಿ ಅದರಂತೆ ಕಾರ್ಯಕ್ರಮ ಕೈಕೊಂಡರೆ, ಅದರ ಪರಿಣಾಮವೇನಾದರೂ ಆದರೆ ಒಂದು ವೇಳೆ ಕೆಟ್ಟದ್ದೇ ಆದರೆ ಅದರಿಂದ ದೇಶದಲ್ಲಿ ಅನೇಕ ಲಕ್ಷಾಂತರ ಜನರ ಜೀವನದ ಆಗುಹೋಗುಗಳ ಪ್ರಶ್ನೆಯ ಮೇಲೆ ಪರಿಣಾಮವಾಗುವುದರಿಂದ ಈ ವಿಷಯದಲ್ಲಿ ದೇಶದ ಪ್ರತಿನಿಧಿಗಳ ಅಭಿಪ್ರಾಯವನ್ನೂ ತೆಗೆದುಕೊಳ್ಳಬೇಕು, ನಮ್ಮ ನಿರ್ದಿಷ್ಟವಾದ ನೀತಿಯನ್ನು ಹೇಳುವುದಕ್ಕಿಂತ ಮುಂಚೆ ಅವರ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆ ಕೊಡಬೇಕು, ಅವರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಸರ್ಕಾರ ಕೆಲಸ ಮಾಡಬೇಕು ಎಂಬ ದೃಷ್ಟಿಯಿಂದ ಮೊದಲು ನಮ್ಮ ನೀತಿಯನ್ನು ಹೇಳಲಿಲ್ಲವೇ ವಿನಾ ಸರ್ಕಾರ ತನ್ನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಬೇಕೆಂದು ಈ ದಾರಿಯನ್ನನುಸರಿಸಲಿಲ್ಲ. ಈ ವಿಶೇಷ ಸಂದರ್ಭದಲ್ಲಿ ಈ ಮಾರ್ಗವನ್ನನುಸರಿಸುವುದೇ ಎಂಬ ಅಭಿಪ್ರಾಯದಿಂದ ಹೀಗೆ ಮಾಡಿದೆವೇ ಹೊರತು ಇನ್ನಾವ ದೃಷ್ಟಿಯಿಂದಲೂ ಅಲ್ಲ ಎಂದು ಹೇಳುತ್ತೇನೆ. ಮಾನ್ಯ ಸ್ನೇಹಿತರು ಸಮಿತಿಯ ವರದಿಯ ವಿಚಾರ ಹೇಳಿದರು. ಆ ವರದಿಯನ್ನು ತಮ್ಮ ಮುಂದಿಡುವುದಕ್ಕೆ ಏಕೆ ಹಿಂತೆಗೆದೆ ಎಂದರೆ, ಆ ವರದಿ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಮಾಡಿದ ವರದಿಯಾದುದರಿಂದ ಅಲ್ಲದೆ ಸರ್ಕಾರಕ್ಕೆ ಆ ವರದಿ ಬಂದು ಅದನ್ನು ಸರ್ಕಾರದವರು ಪರಿಶೀಲಿಸಿ ಅದರ ಮೇಲೆ ಯಾವ ನಿಶ್ಚಿತವಾದ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲವಾದ ಕಾರಣ ಆ ವರದಿಯನ್ನು ಸಭೆಯ ಮುಂದಿಡಬೇಕೆ, ಇಡುವುದು ಪ್ರಕೃತವೇ ಅಲ್ಲವೆ ಎಂಬ ಸಂಶಯ ಮನಸ್ಸಿನಲ್ಲಿ ಬಂದದ್ದರಿಂದ ಹೀಗೆ ಮಾಡಿದೆನೇ ಹೊರತು ಅದನ್ನು ಮುಚಿಡಬೇಕೆಂಬ ದೃಷ್ಟಿಯಿಂದಲ್ಲ. ಮಾನ್ಯ ಸ್ನೇಹಿತರು ಈ ವಿಷಯದಲ್ಲಿ ಏನು ಹೇಳುತ್ತಾರೆ, ವಿರೋಧಪಕ್ಷದ ನಾಯಕರು ಏನು ಹೇಳುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಸರ್ಕಾರದವರಿಗೆ ಕಾತರತೆಯಿರುವುದರಿಂದ ಆ ಸಮಿತಿಯ ವರದಿಯಲ್ಲಿರುವ ಮುಖ್ಯ ವಿಷಯಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರ ಉದ್ದೇಶವಾದರೂ ಇಷ್ಟೆ. ಈಗಿರತಕ್ಕ ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಏನು ಲೋಪ ದೋಷಗಳಿವೆ, ಅದರಿಂದ ರೈತನಿಗೆ, ಬೆಳೆಯುವವನಿಗೆ ಏನು ತೊಂದರೆಯಾಗುತ್ತದೆ, ಎಷ್ಟುಮಟ್ಟಿಗೆ ಇದನ್ನು ತಪ್ಪಿಸಬಹುದು ಎಂಬ ದೃಷ್ಟಿಯಿಂದ ಆ ವರದಿಯನ್ನು ಮಾಡಿದ್ದರಿಂದ ಸರ್ವಸಾಮಾನ್ಯವಾಗಿ ದೇಶಕ್ಕೆ ಎಷ್ಟು ಆಹಾರ ಬೇಕು, ಸಾಧಾರಣ ಸನ್ನಿವೇಶದಲ್ಲಿ ಆ ಧಾನ್ಯವನ್ನು ಯಾವ ರೀತಿ ವಸೂಲು ಮಾಡಬಹುದು ಎಂಬ ಬಗ್ಗೆ ಕೆಲವು ಸೂಕ್ಷ್ಮವಾದ ರೀತಿಯ ಸಲಹೆಗಳು ಅದರಲ್ಲಿವೆ. ಇದರಲ್ಲಿ ಎರಡು ಮೂರು ರೀತಿಯ ಸಲಹೆಗಳಿವೆ. ನಮ್ಮ ಸ್ನೇಹಿತರಾದ ಶ್ರೀಮಾನ್ ವೀರಣ್ಣಗೌಡರೂ, ಶ್ರೀಮಾನ್ ಮರಿಯಪ್ಪನವರೂ ಈಗಾಗಲೇ ಅಪ್ಪಣೆ ಕೊಡಿಸಿದ್ದಾರೆ. ಈ ಪ್ರಶ್ನೆಯನ್ನು ಬಿಡಿಸಬೇಕಾದರೆ, ವರ್ಷವರ್ಷವೂ ಎಚ್.ಎಸ್. ಫಾರಂನಿಂದ ಆಗತಕ್ಕ ಕಿರುಕುಳಗಳನ್ನು ತಪ್ಪಿಸುವ ದೃಷ್ಟಿಯಿಂದ, ಕಳೆದ ಹತ್ತು ವರ್ಷಗಳ ಅನುಭವದಿಂದ ದೇಶದಲ್ಲಿ ಎಷ್ಟು ಜನ ಸರ್‌ಪ್ಲಸ್ ಹೋಲ್ಡರುಗಳಿದ್ದಾರೆ, ಎಷ್ಟು ಜನರು ಆಹಾರ ಧಾನ್ಯವನ್ನು ಸರ್ಕಾರದ ಕಣಜಕ್ಕೆ ಕೊಡುತ್ತಿದ್ದಾರೆ ಎಂಬುದನ್ನು ಲೆಕ್ಕ ಮಾಡಿದೆ. ಒಂದೊಂದು ಜಿಲ್ಲೆಯಲ್ಲಿಯೂ ಎಷ್ಟು ಜನ ಸರ್‌ಪ್ಲಸ್ ಹೋಲ್ಡರುಗಳಿದ್ದಾರೆ ಎಂಬ ಲೆಕ್ಕವೂ ಇದೆ. ಅವರಿಂದ ಧಾನ್ಯವನ್ನು ತೆಗೆದುಕೊಳ್ಳಬೇಕಾದರೆ ಎಷ್ಟು ತೆಗೆದುಕೊಳ್ಳಬೇಕು, ಯಾವ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು, ಈ ವರ್ಷದ ಸನ್ನಿವೇಶದಲ್ಲಿ ಎಷ್ಟು ತೆಗೆದುಕೊಳ್ಳಬೇಕು ಎಂಬ ಒಂದು ನೀತಿ ಇದೆ.

ಇನ್ನೊಂದು ದೃಷ್ಟಿಯಿಂದ Flat rate ಹಾಕಿ ಎಕರೆಗೆ ಇಷ್ಟು ಎಂದು ಗೊತ್ತು ಮಾಡಿ, ಕೆಲವು ಎಕರೆಗಳನ್ನು ಬಿಡಬೇಕೆ, ಬಿಡಬಾರದವೆ, ಸರಾಸರಿ ತೆಗೆದುಕೊಳ್ಳಬೇಕೆ, ದೇಶದಲ್ಲಿರುವ ಹಿಡುವಳಿ ಜಮೀನಿನಲ್ಲಿ ಕಾಫಿ ಮುಂತಾದ ಬೆಳೆಯಿರುವ ಪ್ರದೇಶವನ್ನು ಬಿಟ್ಟು ಎಷ್ಟು ತೆಗೆದುಕೊಳ್ಳಬೇಕು, ಯಾವ ರೀತಿ ತೆಗೆದುಕೊಳ್ಳಬೇಕು ಎಂಬ ವಾದ ಕೂಡ ಇದೆ. ಸಮಿತಿಯವರು ಇದನ್ನೆಲ್ಲಾ ಯೋಚನೆ ಮಾಡಿ ವರದಿ ಮಾಡಿರುವುದು ಇನ್ನೂ ಯೋಚನಾ ರೂಪವಾಗಿದೆ. ಆದಕಾರಣ ಅದನ್ನು ಸಭೆಯ ಮುಂದಿಡಲಿಲ್ಲವೇ ವಿನಾ ಅದನ್ನು ಮುಚ್ಚಬೇಕೆಂಬ ಉದ್ದೇಶವಿಲ್ಲ. ಈ ವಿವರಣೆಯಿಂದ ಮಾನ್ಯ ಸದಸ್ಯರು ಸಂತುಷ್ಟರಾಗಿ ತಮ್ಮ ಸಲಹೆಯನ್ನು ನೀಡಬೇಕೆಂದು ಬೇಡುತ್ತೇನೆ. ಇದು ದೇಶದ 90 ಲಕ್ಷ ಜನರ ಆಗುಹೋಗುಗಳಿಗೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ವರದಿಯನ್ನು ಸಭೆಯ ಮುಂದಿಡಲಿಲ್ಲವೆಂಬ ಒಂದು technical ಕಾರಣದಿಂದ ಇದರಲ್ಲಿ ಭಾಗವಹಿಸಲು ಹಿಂತೆಗೆಯಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್. ಸಿದ್ದಪ್ಪ.—ಸ್ವಾಮಿ, ಸಮಿತಿಯ ವರದಿಯನ್ನು ಸಭೆಯ ಮುಂದಿಡದೆ ಇರುವ ಬಗ್ಗೆ ಗೃಹಸಚಿವರು ಕೊಟ್ಟಿರತಕ್ಕ ವಿವರಣೆ ತೀರ ಅಸಮರ್ಪಕವಾಗಿದೆ. ನಿನ್ನೆಯಿಂದ ಈ ವಿಚಾರದಲ್ಲಿ ಸಭೆಯಲ್ಲಿ ನಡೆದಿರತಕ್ಕ ನಡೆವಳಿಕೆಯನ್ನು ವಿಮರ್ಶೆಮಾಡಿ ನೋಡಿದ್ದರಲ್ಲಿ ಇಷ್ಟು ಕಂಡುಬರುತ್ತದೆ. ನಿನ್ನೆಯ ದಿನ ಸರ್ಕಾರದವರು ಸಮಿತಿಯ ವರದಿಯನ್ನು ಸಭೆಯ ಮುಂದಿಡಬೇಕೆಂದು ಕೇಳಿದಾಗ ಸಭೆಯ ಮಾನ್ಯ ಮುಖಂಡರು ಆ ರೀತಿ ಕೊಡುವುದಕ್ಕೆ ಒಪ್ಪಿದರು. ಈ ದಿವಸ ಮತ್ತೆ ಚರ್ಚೆಗೆ ಬಂದಾಗ ಸ್ವಲ್ಪ

ಸಂಶಯವನ್ನು ವ್ಯಕ್ತಪಡಿಸಿ ಮೂರು ಗಂಟೆಗೆ ಕೊಡುತ್ತೇವೆಂದು ಹೇಳಿದರು. ಟೈಪ್‌ಮಾಡಿದ ಪ್ರತಿಗಳನ್ನೂ ಕೂಡ ತಯಾರಿಸಿಕೊಂಡು ಬಂದು ತಮ್ಮಲ್ಲಿಟ್ಟುಕೊಂಡಿದ್ದಾರೆ.

ಈ ಸಂಬಂಧವಾಗಿ ಇನ್ನೊಂದು ವಿಚಾರವನ್ನು ಅವರು ಹೇಳುತ್ತಾರೆ. ಇದು Inter-Departmental Officers ಕುರಿತು ಮಾಡಿದ ವರದಿ, ಬರಿಯ ಸೆಕ್ರೇಟೇರಿಯಟ್‌ನವರು ವಿಷಯವನ್ನು ಪರಿಶೀಲಿಸಿ ಮಾಡಿದ್ದು. ಈ ಕಾರಣದಿಂದ ಇದನ್ನು ಹೊರಗೆಡಹುದಕ್ಕೆ ಇಷ್ಟವಿಲ್ಲ ಎಂದು ಹೇಳಿದರು. ಆ ವರದಿ ಎಲ್ಲ ವೃತ್ತಪತ್ರಿಕೆಗಳಲ್ಲಿಯೂ ಪ್ರಕಟವಾಗಿದೆ. ಅಲ್ಲದೆ ಅದನ್ನು ಕಾಂಗ್ರೆಸ್ ಪಕ್ಷದ ಸದಸ್ಯರ ಮುಂದಿಟ್ಟು ಚರ್ಚೆ ನಡೆಸುವುದಕ್ಕೆ ಮಾತ್ರ ಅವಕಾಶವಿತ್ತು, ವಿರೋಧ ಪಕ್ಷದ ಸದಸ್ಯರಿಗೆ ಕೊಡಲು ಅವಕಾಶವಿಲ್ಲವೆ?

ಶ್ರೀ ಜೆ. ಮಹಮ್ಮದ್ ಇಮಾಂ.—ನಾವು ಬಡಪಾಯಿಗಳು ! (ನಗು !).

ಶ್ರೀ ಎಲ್. ಸಿದ್ದಪ್ಪ.—ನಮ್ಮ ಮುಂದೆ ಇಡಬೇಕೆಂದು ಹೇಳುವುದು ನ್ಯಾಯವೆಂದು ಸಭೆ ತೀರ್ಮಾನ ಮಾಡಬೇಕು.

ಶ್ರೀ ಬಿ. ಹುಚ್ಚೇಗೌಡ.—ಕೊಡಬೇಕೆಂದು ಅಧ್ಯಕ್ಷರೂ ಹೇಳಿದರು.

ಶ್ರೀ ಎಲ್. ಸಿದ್ದಪ್ಪ.—ಆಹಾರ ಸಮಸ್ಯೆಯನ್ನು ಒಂದು ಪಕ್ಷದ ಪ್ರಶ್ನೆ ಎಂದು ಪರಿಗಣಿಸಬಾರದು ಇಡೀ ದೇಶಕ್ಕೇ ಸಂಬಂಧಪಟ್ಟದ್ದು ಎಂದು ಹೇಳಿ ಎಲ್ಲರ ಸಹಕಾರ ಬೇಕೆಂದು ಕೇಳುತ್ತಾರೆ ಸರ್ಕಾರದವರು. ಆದರೆ ಅವರ ವರ್ತನೆ ಹೇಗಿದೆ? ನಮ್ಮ ಪಕ್ಷದವರು ಮಾತ್ರ ನೋಡಿಕೊಳ್ಳಲಿ, ಇಷ್ಟು ಜನರು ವಿರೋಧ ಪಕ್ಷದವರು ನೋಡಬಾರದು ಎಂಬ ಮನೋಭಾವದಿಂದ ವರ್ತಿಸುತ್ತಾರೆ. ತಮ್ಮ ಪಾರ್ಟಿಯ ಮುಂದೆ ಈ ವರದಿಯನ್ನು ಇಟ್ಟಿದ್ದರು, ಅದು ಚರ್ಚೆಯಾಯಿತು, ಪಾರ್ಟಿ ಸದಸ್ಯರು ಅವರ ಅಭಿಪ್ರಾಯವನ್ನು ಕೊಟ್ಟರು. ಆ ರೀತಿ ಮಾಡಿಲ್ಲವೆಂದು ಗೃಹ ಸಚಿವರು ಹೇಳಲಿ. ಅದನ್ನು ಕೊಡುತ್ತೇವೆ, ಇವೊತ್ತು ಬೆಳಿಗ್ಗೆ ಕೊಡುತ್ತೇವೆ, ಮೂರು ಗಂಟೆಗೆ ಕೊಡುತ್ತೇವೆ ಎಂದು ಹೇಳಿದರು. ಆದರೆ ಕೊಡಲಿಲ್ಲ. ಹೀಗೆ ನೀವು ನಮ್ಮ ವಿಚಾರದಲ್ಲಿ ತಕ್ಕಷ್ಟು ಗೌರವವನ್ನು ತೋರಿಸಲು ತಯಾರಾಗಿಲ್ಲದಿರುವಾಗ ನಾವು ನಿಮ್ಮೊಡನೆ ಸಹಕರಿಸುವುದಕ್ಕಾಗಲಿ ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕಾಗಲಿ ಆಗುವುದಿಲ್ಲವೆಂದು ಹೇಳುತ್ತೇನೆ. ನಾವು ಪ್ರತಿ ಪಕ್ಷದವರಾಗಿ ಯಾವುದಾದರೊಂದು ತೀರ್ಮಾನಕ್ಕೆ ಬರಬೇಕೆಂದು ಯೋಚನೆ ಬಂತು. ಆದರೆ ನೀವು ಯಾವಾಗ ಈ ರೀತಿ ಮಾಡಿದಿರೋ ನಾವು ಕೂಡ ಈ ನಿರ್ಧಾರಕ್ಕೆ ಬರಬೇಕಾಯಿತು. ನಮ್ಮ ಜವಾಬ್ದಾರಿಯನ್ನು ನಾವು ಸರಿಯಾಗಿ ನಿರ್ವಹಿಸಬೇಕಾಗಿದೆ. ನಾವು ಸಮಿತಿಯ ವರದಿಯನ್ನು ಕೊಡುವವರೆಗೆ ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕಾಗುವುದಿಲ್ಲವೆಂದು ಖಡಾಖಂಡಿತವಾಗಿ ಹೇಳುತ್ತೇನೆ.

Mr. SPEAKER.—There is no specific motion, but a statement has been made by the Hon'ble Minister. Added to that, some Hon'ble Members have made several concrete suggestions and the House has heard those suggestions. For instance, there are two to four such suggestions. The first one is as regards procurement, procurement to the extent of three fourths of the average supply of the previous five years by the surplus holders. The second one is whether levy system on an acreage basis can be adopted. And the third is enhancement of procurement prices. When there are such concrete suggestions, it is open to the House to speak on these suggestions and I request the Members of the Opposition Party to adopt a helpful attitude towards Government and solve the problem.

Sri K. PATTABHIRAMAN.—May I be permitted to speak a word?

Mr. SPEAKER.—Yes.

ಶ್ರೀ ಕೆ. ಪಟ್ಟಾಭಿರಾಮನ್ (ಕೋಲಾರ).—ಮಾನ್ಯ ಅಧ್ಯಕ್ಷರೇ, ಮತ್ತೊಂದು ತೊಡಕನ್ನು ಈ ಸಭೆಯ ಮುಂದಿಡುವುದಕ್ಕೆ ನಾನು ನಿಂತಿದ್ದೇನೆ. ಅದೇನೆಂದರೆ ಈ ಚರ್ಚೆ ನನಗೆ ಒಂದು ವಿಧದಲ್ಲಿ ಬಹಳ ಸಂತೋಷವನ್ನುಂಟುಮಾಡಿದೆ. ನಿಮಿತ್ತಮಾತ್ರವಾಗಿ ಆಹಾರಕ್ಕೆ ಸಂಬಂಧಪಟ್ಟ ಚರ್ಚೆಯಾಗಿದ್ದರೂ ಇದರ ಮಧ್ಯೆ ಉದ್ಭವಿಸಿರುವ ಬಹು ಪ್ರಾಮುಖ್ಯವಾದ ವಿಚಾರಗಳ ಕಡೆಗೆ ನಮ್ಮ ಗಮನವನ್ನು ಸ್ವಲ್ಪಮಟ್ಟಿಗೆ ತಗೆದುಕೊಂಡು ಹೋಗುವುದಕ್ಕವಕಾಶವಾಗಿದೆ. ಶ್ರೀಮಾನ್ ಸಿದ್ದಪ್ಪನವರು ಎತ್ತಿರತಕ್ಕ ಒಂದು ಪ್ರಶ್ನೆ ಬಹಳ ಮುಖ್ಯವಾದುದು. ಇದನ್ನು ಮಾನ್ಯ ಅಧ್ಯಕ್ಷರೂ ಸಭೆಯೂ ಗಮನಕ್ಕೆ ತಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಇದನ್ನು ನನ್ನ ಭಾಷೆಯಲ್ಲಿ ಎರಡು ಮೂರು ಮಾತುಗಳಲ್ಲ ಹೇಳಬೇಕೆಂದು ಬಯಸುತ್ತೇನೆ.

ಸರ್ಕಾರದಿಂದ ನೇಮಕವಾದ ಒಂದು ಸಮಿತಿ ತನ್ನ ವರದಿಯನ್ನು ಕೊಟ್ಟಿತು. ಅದು ಸರ್ಕಾರಕ್ಕೆ ಸೇರಬೇಕಾದದ್ದು ನಿಜ. ಅದನ್ನು ಅವರು ಪರಿಶೀಲಿಸಿ ತೀರ್ಮಾನಕ್ಕೆ ಬರಬೇಕಾದದ್ದು ನಿಜ. ಹಾಗೆ ಬಂದ ಮೇಲೆ ನಮ್ಮ ಮುಂದೆ ಅದು ಬರಬೇಕಾದದ್ದೂ ನಿಜ. ಆದರೆ ನನ್ನ ಭಾವನೆಯಲ್ಲಿ ಈಗ ಆಗಿರತಕ್ಕ ಪ್ರಮಾದವೆಂದರೆ— ಇದನ್ನು ಶ್ರೀಮಾನ್ ಸಿದ್ದಪ್ಪನವರು ಬಹಳ ಚೆನ್ನಾಗಿ ಹೇಳಿದಾರೆ— ಈ ವರದಿ ಸರ್ಕಾರಕ್ಕೆ ಬಂದು ಪರಿಶೀಲನೆಯಾಗುವುದಕ್ಕಿಂತ ಮುಂಚೆ ಕಾಂಗ್ರೆಸ್ ಪಕ್ಷದ ಮುಂದೆ ಬಂದಿರತಕ್ಕದ್ದು. ಇದು ಯಾವ ಸ್ಥಿತಿಯಲ್ಲಿ ಬಂತು, ಪಕ್ಷದ ಒಂದು ಸ್ಥಾನಮಾನವೇನು, ಈ ರೀತಿ ಸರ್ಕಾರದಿಂದ ನೇಮಕವಾದ ಸಮಿತಿಯಿಂದ ತಯಾರಾದ ವರದಿ ಒಂದು ಪಕ್ಷದ ಮುಂದೆ ಬರಬಹುದೆ, ರಾಜ್ಯಾಂಗದ ಚೌಕಟ್ಟಿನಿಂದ ನೋಡಿದರೆ ಸದಸ್ಯರುಗಳ ಸ್ಥಾನಮಾನದ ದೃಷ್ಟಿಯಿಂದ ಹೀಗೆ ಬಂದಿದ್ದರ ಏನು ಪರಿಣಾಮ ಎಂಬ ಪ್ರಶ್ನೆ ಏಳುವುದು ಸಹಜ. ಅಲ್ಲಿಗೆ, ಕೆಲವು ಸದಸ್ಯರ ಮುಂದೆ ವರದಿ ಬರಬಹುದು, ಎಲ್ಲ ಸದಸ್ಯರೂ ಕೂಡಿರತಕ್ಕ ಸಭೆಯಲ್ಲಿ ಅದು ಬರಬಾರದು ಎಂದ ಹಾಗಾಗುತ್ತದೆ. ಈ ಒಂದು ಬಹಳ ಪ್ರಾಮುಖ್ಯವಾದ ವಿಷಯವನ್ನು ಶ್ರೀಮಾನ್ ಸಿದ್ದಪ್ಪನವರು ಎತ್ತಿದ್ದಾರೆ. ಈ ದೊಡ್ಡ ಪ್ರಶ್ನೆ ಇತ್ಯರ್ಥವಾಗಬೇಕು. ಇದು ಆದರೆ ಮುಂದೆ ಕೆಲಸ ಹಗುರವಾಗಬಹುದು.

ಇನ್ನೊಂದು ವಿಷಯವನ್ನು ನಾನು ಹೇಳಬಹುದಾಗಿದೆ. ಆ ವರದಿ ನಮ್ಮ ಮುಂದೆ ಬಂದನಂತರ ನಮ್ಮ

(ಶ್ರೀ ಕೆ. ಪಟ್ಟಾಭಿರಾಮನ್).

ಅಭಿಪ್ರಾಯವನ್ನು ಹೇಳಿದರೆ ಎಷ್ಟು ಸಾಧಕ ಅಥವಾ ಬಾಧಕ ಎಂಬ ವಿಚಾರಕ್ಕೆ ನಾನು ಪ್ರಾಮುಖ್ಯತೆ ಕೊಡುತ್ತಿಲ್ಲ. ಅನುಕೂಲವಾಗಬಹುದು ಅಥವಾ ಇಲ್ಲದೇಯಿರಬಹುದು. ಆದರೆ ಇದೊಂದು ಪ್ರಾಮುಖ್ಯ ವಿಷಯ ಸಭೆಯ ಮುಂದೆ ಬಂದಿದೆ. ಹೀಗಾಗಬಾರದು. ಸರ್ಕಾರದ ಪರವಾಗಿ ಮಾನ್ಯ ಸಚಿವರಿಂದ ಈ ವಿಷಯದಲ್ಲಿ ವಿವರಣೆಯನ್ನು ನಿರೀಕ್ಷಿಸುತ್ತೇನೆ. ಇದು ಈಗ ನಮ್ಮ ಮುಂದಿರುವ ಪ್ರಶ್ನೆ, ಮಿಕ್ಕ ವಿಚಾರವನ್ನು ಬಿಟ್ಟು ಇದನ್ನು ತೆಗೆದುಕೊಳ್ಳೋಣ ಎಂಬುದು ನನ್ನ ಅಭಿಪ್ರಾಯ. ಅವರು ಹೇಳುವ ರೀತಿ ಈಗ ಕಾರ್ಯಕಲಾಪಗಳು ನಡೆಯಲು ಒಪ್ಪಿಗೆ ಕೊಟ್ಟರೆ, ಮುಕ್ತಾಯ ಮಾಡಿದರೆ ಮುಂದೆ ಪರಿಣಾಮವೇನಾಗುತ್ತದೆಂಬುದನ್ನು ಎಚ್ಚರಿಕೆಯಿಂದ ಯೋಚಿಸಬೇಕು. ಇದೊಂದು ದೊಡ್ಡ ತೊಡಕಾದ—ನನಗೆ ಆ ಪದವನ್ನುಪಯೋಗಿಸಲು ಇಷ್ಟವಿರಲಿಲ್ಲ, ಆದರೂ ಉಪಯೋಗಿಸಬೇಕಾಗಿಬಂದಿದೆ—ಒಂದು 'ಪ್ರಿವಿಲೇಜ್' ಹಕ್ಕುಬಾಧ್ಯತೆ ಪ್ರಶ್ನೆ ನಮ್ಮ ಮುಂದೆ ಬಂದಿದೆ. ಈ ಸಭೆಯ ಸದಸ್ಯರಲ್ಲಿ ಕೆಲವರ ಮುಂದೆ ಬರಬಹುದು, ಕೆಲವರ ಮುಂದೆ ಬರಬಾರದು ಎಂದ ಗುತ್ತದೆ ಒಂದು ಪಕ್ಷದ ಮುಂದೆ ವರದಿ ಬರಬಾರದಾಗಿತ್ತು. ಸದಸ್ಯರೆಲ್ಲರೂ ಒಂದೇ ಎಂಬ ದೃಷ್ಟಿಯಿಂದ ಈ ವಿಚಾರವನ್ನು ವಿಮರ್ಶೆಮಾಡಬಹುದಾಗಿತ್ತು. ಕೆಲವು ಸದಸ್ಯರಿಗೆ ಕೊಟ್ಟಿರುವುದು ಮತ್ತೆ ಕೆಲವರಿಗೆ ಕೊಡದೇಯಿರುವುದು ರಾಜ್ಯಾಂಗಕ್ಕೇ, ನೀತಿನಿಯಮಕ್ಕೇ, ಸಂಪ್ರದಾಯಕ್ಕೇ ವಿರೋಧವಾದುದು. ಮುಂದೆ ಇದರಿಂದ ತೊಡಕು ಬರುತ್ತದೆ. ಈ ದೃಷ್ಟಿಯಿಂದ ಇದನ್ನು ತೀರ್ಮಾನಮಾಡುವುದು ಅಗತ್ಯವೆಂದು ನನ್ನ ಅರಿಕೆ.

Sri J. MOHAMED IMAM.—Sir, I mean no disrespect to the Chair, for the suggestions he has offered ; I have great respect for the Chair. But, as certain fundamental principles are involved, as pointed out by Sri K. Pattabhiraman and Sri L. Siddappa, I have to make a further statement.

Mr. SPEAKER.—What does the Hon'ble Minister say now ?

Sri H. SIDDAVEERAPPA.—The question of privilege ? I would like to know from the Hon'ble Speaker whether there is a written motion to that effect?

(Sri M. Sankarlinge Gowad rose.)

Sri H. SIDDAVEERAPPA.—Sir, I am really sorry it has taken a turn which I never envisaged. I meant no disrespect to the Opposition Party. As they are well aware, I always have the greatest esteem and respect for them. The only reason for the nonplacing of that report in the hands of the Members was that, since it was one of interim nature, I will not be in the right if I do so. And moreover, Sir, I have sought your orders and I have made it clear in the morning alone that I will bow down to the decision of the Chair. But if my Hon'ble friends have no objection, even now I am prepared to facilitate and smoothen the matters by stating what the contents of those reports are, by saying what it is and what it was meant for. I have really no objection if this satisfies the desire of my friends.

Mr. SPEAKER.—When question 175 was taken up yesterday and supplementaries put, a suggestion was made by me that copies of the report of the Committee referred to in the question may be made available to members of the House and the Hon'ble Chief Minister agreed to do so. It is on the basis of that assurance that the Hon'ble Members ask for copies of the report. If the report is not immediately available, Government may take some time to get the copies and give the members an opportunity to read the report. I consider it only fair to the members that they should have the report before continuing the debate. We could continue the debate thereafter.

Sri H. SIDDAVEERAPPA.—What I may submit is this, Sir. In the light of what has just now been observed by your goodself, I have no objection, if you so please, to the debate being continued for sometime on some other day.

Mr. SPEAKER.—There is no other work.

Sri J. MOHAMED IMAM.—I must thank the Chair on behalf of the Opposition for the opportunity given to us.

Now the Home Minister has stated that he will make available the copies of the report. As soon as the copies are made available, and after some reasonable time is given for us to study, we shall be glad to co-operate with him. We will give our mature consideration. The Hon'ble the Home Minister has promised to make available the copies of the report.

Sri H. SIDDAVEERAPPA.—Contents I said. If you want, the salient features of the report.

Mr. SPEAKER.—Let us see what happens on that day.

Sri J. MOHAMED IMAM.—Sir, the report is a report. The contents or the summary of it is not a report. On two points I lay emphasis and bring them to the notice of the Chair. The Chief Minister and the Home Minister have promi ed to place before us the copies of the reports. Can they go back on their promise—that is Privilege No. 1.

Sri T. MARIAPPA.—I am sorry for this uncharitable insinuation. We are really anxious to give them all possible information.

Mr. SPEAKER.—That is a matter between you two friends.

Sri J. MOHAMED IMAM.—Secondly Sir, they have unequivocally stated that they are going to treat this as a non-party matter, non-party issue. It is left to the Government to take us into confidence. They have not taken into confidence the Opposition members, though we volunteered our services in this matter. They are going to treat this as a party matter, and they want to treat us with suspicion. They do not trust us. Certain members have the privilege of knowing the contents of this report. They do not extend the same privilege to us. That means to say they are treating us with suspicion. I am going to tell them definitely once for all—till the actual copies of the report are placed before us, we are not going to take part in the deliberations.

Mr. SPEAKER.—Shall we continue the debate to day? If any Hon'ble member is willing to take part and continue the debate, we can go on; otherwise we will have to close it for the day and take it up on another day after copies of the report are given to the members.

Sri A. BHEEMAPPA NAIK.—We feel that we can meet again another day. We should know each other's point of view; we should meet each other's point of view, if necessary. It is better that another day is allotted for this. We can fix another day for that after the copies are made available.

Mr. SPEAKER.—The House will now stand adjourned till 12 of the Clock to-morrow.

The House adjourned at Twenty-Five Minutes past Four of the Clock to meet again at 12 of the Clock on Wednesday the 22nd October 1952.